ಎಲ್ಲಿ ಪ್ರಶ್ನಿಸುವುದಕ್ಕೆ ಅವಕಾಶವಾಗುತ್ತದೆಂಬ ಉದ್ದೇಶದಿಂದ, ನಾಳೆ ಸದನ ಪ್ರಾರಂಭವಾಗುವ ಪೂರ್ವದಲ್ಲೇ ವರದಿಯನ್ನು ತರಿಸಿ ಅಗತ್ಯ ಕ್ರಮ ಕೈಗೊಳ್ಳುತ್ತೇವೆ. ಕ್ರಮ ಕೈಗೊಳ್ಳುವುದರಲ್ಲಿ ಎರಡು ಮಾತಿಲ್ಲ.

(ಗೊಂದಲ)

ಅಧ್ಯಕ್ಷರು : ನಾಳೆ ಬೆಳಿಗ್ಗೆ ವರದಿ ತಂದು ಪ್ರಶ್ನೋತ್ತರ ಆದ ಕೂಡಲೇ ಮಾಹಿತಿ ಕೊಡಬೇಕು.

(ಈ ಹಂತದಲ್ಲಿ ಧರಣಿ ನಿಂತ ಸದಸ್ಯರೆಲ್ಲರೂ ತಮ್ಮ ಸ್ಥಾನಗಳಿಗೆ ಹಿಂದಿರುಗಿದರು)

ಅಧ್ಯಕ್ಷರು : ನಿಯಮ 69 ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ ಈಗಾಗಲೇ ಚರ್ಚೆ ಮುಗಿದಿದೆ. ಮಾನ್ಯ ಸದಸ್ಯರೆಲ್ಲರೂ ಮಾತನಾಡಬೇಕೆಂದು ಹೇಳುತ್ತಾರೆ. ಮಾನ್ಯ ಶ್ರೀರಾಮುಲು ಅವರು ಮಾತನಾಡಿ. ಸದಸ್ಯರೆಲ್ಲರೂ 10 ನಿಮಿಷಗಳ ಕಾಲಾವಧಿ ಮಾತ್ರ ತೆಗೆದುಕೊಳ್ಳಬೇಕು. ಸಹಕರಿಸಿ, ಗಮನ ಸೆಳೆಯುವುದನ್ನು ಆಮೇಲೆ ತೆಗೆದುಕೊಳ್ಳೋಣ.

7. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವ ವಿಷಯದ ಮೇಲೆ ಮುಂದುವರೆದ ಚರ್ಚೆ :

ವಿಷಯ : ರಾಜ್ಯದಲ್ಲಿ ಬರ ಪರಿಸ್ಥಿತಿಯ ಬಗ್ಗೆ

ಶ್ರೀ ಬಿ. ಶ್ರೀರಾಮುಲು (ಬಳ್ಳಾರಿ) : ಮಾನ್ಯ ಸಭಾಧ್ಯಕ್ಷರೆ, ರಾಜ್ಯದಲ್ಲಿ ಅತ್ಯಂತ ಘೋರವಾದಂತಹ ಬರಗಾಲ ಪರಿಸ್ಥಿತಿ ಬಂದಿದೆ. ಇದಕ್ಕಾಗಿ ಸರ್ಕಾರವು ನಾಯಕತ್ವದ ಬದಲಾವಣೆಯ ಗೊಂದಲದಲ್ಲಿ ಮುಳುಗಿರುವಂತಹ ಸಂದರ್ಭದಲ್ಲಿ ಇಡೀ ಕರ್ನಾಟಕ ರಾಜ್ಯದಲ್ಲಿ ಬರಗಾಲವೇನು ಬಂದಿತ್ತೋ, ಜನರು ಸಂಕಷ್ಟದಲ್ಲಿ ಏನಿದ್ದರೋ, ಅಂತಹ ಸಂದರ್ಭದಲ್ಲಿ ರಾಜ್ಯ ಸರ್ಕಾರವಾಗಿರಬಹುದು, ಕೇಂದ್ರ ಸರ್ಕಾರವಾಗಿರಬಹುದು. ಬರ ಪರಿಹಾರ ಕೊಡುವ ವಿಷಯದಲ್ಲಿ ಸಂಪೂರ್ಣವಾಗಿ ವಿಫಲವಾಗಿದೆಯೆಂದು ತಮ್ಮ ಮೂಲಕ ಸದನಕ್ಕೆ ತಿಳಿಸಬಯಸುತ್ತೇನೆ. ಜನರು ಕಷ್ಟದಲ್ಲಿರುವಂತಹ ಸಂದರ್ಭದಲ್ಲಿ ಕೇಂದ್ರ

ಸರ್ಕಾರವಾಗಿರಬಹುದು. ರಾಜ್ಯ ಸರ್ಕಾರವಾಗಿರಬಹುದು, ರೈತರಿಗೆ, ಕಾರ್ಮಿಕರಿಗೆ, ಬಡವರಿಗೆ ಧೈರ್ಯ ತುಂಬುವಂತಹ ಕೆಲಸ ಮಾಡಿರುವುದಿಲ್ಲ. ಸರ್ಕಾರ ಯಾವುದೇ ರೀತಿಯಲ್ಲಿ ಸ್ಪಂದಿಸದೇ ಇರುವ ಕಾರಣದಿಂದ ನಾನು ಏಪ್ರಿಲ್ 24ನೇ ತಾರೀಖಿನಂದು ಬೀದರ್‌ನಿಂದ ಬೆಂಗಳೂರಿನವರೆಗೆ ಪಾದಯಾತ್ರೆ ಮಾಡುತ್ತಾ, ಬರುವ ಹಾದಿಯಲ್ಲಿ 10 ಜಿಲ್ಲೆಗಳಲ್ಲಿದ್ದಂತಹ ಜನರ, ರೈತರ, ಬಡವರ, ಸಾರ್ವಜನಿಕರ ಜೊತೆಯಲ್ಲಿ ಚರ್ಚೆ ಮಾಡಿ ಅವರಿಗೆ ಎಲ್ಲಾ ರೀತಿಯಲ್ಲಿಯೂ ಧೈರ್ಯ ತುಂಬುವಂತಹ ಕೆಲಸ ಮಾಡಿಕೊಂಡು, ಸುಮಾರು 1200 ಕಿ.ಮೀ.ಗಳ ಪಾದಯಾತ್ರೆ ಮಾಡಿಕೊಂಡು ಬೆಂಗಳೂರಿಗೆ ತಲುಪಿದ್ದೇನೆ. ಬರಗಾಲ ಬಂದಿರುವಂತಹ ಸಂದರ್ಭದಲ್ಲಿ ಜನರಿಗೆ ಇಂದು ಕುಡಿಯುವುದಕ್ಕೆ ನೀರಿಲ್ಲ. ಸರ್ಕಾರದಿಂದ ಇದಕ್ಕೆ ಸ್ಪಂದಿಸುವಂತಹ ಕೆಲಸವಾಗುತ್ತಿಲ್ಲ. ದನಕರುಗಳಿಗೆ ತಿನ್ನುವುದಕ್ಕೆ ಮೇವಿಲ್ಲ. ಜಾನುವಾರುಗಳು ಕಸಾಯಿಖಾನೆ ಪಾಲಾಗುತ್ತಿವೆ. ಇಂತಹ ಸಂದರ್ಭದಲ್ಲಿ ಸರ್ಕಾರ ಎಲ್ಲೋ ಒಂದು ಕಡೆ ಧೈರ್ಯವನ್ನು ತುಂಬುವಂತಹ ಪ್ರಯತ್ನವನ್ನು ಮಾಡಬೇಕಾಗಿತ್ತು. ಆದರೆ ಸರ್ಕಾರ ಆ ರೀತಿ ಮಾಡಲಿಲ್ಲ. ಬರ ಪರಿಹಾರವನ್ನು ಕೊಡುವಂತಹ ಕೆಲಸವೂ ಕೂಡ ಮಾಡಲಿಲ್ಲ. ಜನಗಳಿಗೆ ಕುಡಿಯುವ ನೀರನ್ನು ಕೊಡಲಿಲ್ಲ, ಯುವಕರಿಗೆ, ಜನರಿಗೆ ಉದ್ಯೋಗ ಕೊಡುವಂತಹದನ್ನು ಸಹ ಮಾಡಿಲ್ಲ. ಸಾವಿರಾರು ಮಂದಿ ಗುಳೆ ಹೋಗುವಂತಹ ಪರಿಸ್ಥಿತಿ ನಮ್ಮ ಕಣ್ಣೆದುರಿಗಿದ್ದು ಎಲ್ಲವನ್ನೂ ನೋಡಿಕೊಂಡೇ ಬಂದಿದ್ದೇವೆ. ಎರಡು ಸರ್ಕಾರಗಳೂ ಜನರ ನೋವುಗಳನ್ನು ಅರ್ಥ ಮಾಡಿಕೊಳ್ಳುತ್ತಾರೆಂದರೆ ಅದು ಆಗಿಲ್ಲ. ಕೇವಲ ಉತ್ತರ ಕರ್ನಾಟಕವೊಂದಕ್ಕೆ ಬರಗಾಲ ಬಂದಿರುವುದಿಲ್ಲ, ಮಧ್ಯ ಕರ್ನಾಟಕದ ಭಾಗಕ್ಕೂ ಬರಗಾಲ ಬಂದಿದೆ. ಅದೇ ರೀತಿಯಲ್ಲಿ ಕರಾವಳಿ ಪ್ರದೇಶಕ್ಕೂ ಬರಗಾಲ ಬಂದಿದೆ. ಇಂತಹ ಸಂದರ್ಭದಲ್ಲಿ ಎಲ್ಲೋ ಒಂದು ಕಡೆ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ಧೈರ್ಯವನ್ನು ತುಂಬುವಂತಹ ಕೆಲಸವನ್ನು ಮಾಡಬೇಕಾಗಿತ್ತು. ಆದರೆ ಸರ್ಕಾರ ನಾಯಕತ್ವದ ಬದಲಾವಣೆಯಲ್ಲಿ, ಅವರಲ್ಲೇ ಯಾರ್ಯಾರು ಮಂತ್ರಿಗಳಾಗಬೇಕು, ಏನಾಗಬೇಕು, ಅವರುಗಳು ಎಲ್ಲಾ ರೀತಿಯಲ್ಲಿಯೂ ಬ್ಯುಸಿ ಇರುವ ಕಾರಣ ಬರಗಾಲವನ್ನು ನಿರ್ಲಕ್ಷ್ಯ

ಮಾಡಿರುವ ಸನ್ನಿವೇಶವನ್ನು ಇಂದು ನಾವು ಕಣ್ಣೆದುರಲ್ಲೇ ನೋಡುತ್ತಿದ್ದೇವೆ. ಅದೇ ರೀತಿಯಲ್ಲಿಯೂ ಹಿಂದುಳಿದ ಜಿಲ್ಲೆಗಳಾದಂತಹ ಹೈದ್ರಾಬಾದ್-ಕರ್ನಾಟಕ ಭಾಗವಾಗಿರಬಹುದು. ಉತ್ತರ ಕರ್ನಾಟಕದ ಭಾಗವಾಗಿರಬಹುದು, ಅಲ್ಲಿ ಡಾ. ನಂಜುಂಡಪ್ಪ ವರದಿಯನ್ನು ಅನುಷ್ಠಾನಕ್ಕೆ ತಂದು ಆ ಭಾಗದಲ್ಲಿದ್ದಂತಹ ಜನರಿಗೆ, ತಾಲ್ಲೂಕುಗಳಿಗೆ, ಜಿಲ್ಲೆಗಳಿಗೆ ಅಭಿವೃದ್ಧಿ ಪಡಿಸಬೇಕೆನ್ನುವ ನಿಟ್ಟಿನಲ್ಲಿ ವಿಶೇಷವಾದ ಆದ್ಯತೆಯನ್ನು ಕೊಟ್ಟಿದ್ದಾರೆ. ಬರಗಾಲ ಬರುವ ಮುಂಚಿತವಾಗಿಯೂ ಆ ಜಿಲ್ಲೆಗಳು ಅಭಿವೃದ್ಧಿಯಾಗಿಲ್ಲ. ನಂಜುಂಡಪ್ಪ ವರದಿಯಲ್ಲಿರುವ ಜಿಲ್ಲೆಗಳಿರಬಹುದು, ತಾಲ್ಲೂಕುಗಳಲ್ಲಿ ಯಾವುದೇ ರೀತಿಯ ಅಭಿವೃದ್ಧಿಯ ಕೆಲಸ ಆಗಿಲ್ಲ. ಆದರೆ ಈ ಅಂಶಗಳೆಲ್ಲವೂ ಸರ್ಕಾರದ ಗಮನಕ್ಕೆ ಬಂದಿದ್ದರೂ ಸಹ ನಿರ್ಲಕ್ಷ್ಯ ತೋರುವ ಭಾವನೆ ಕಂಡು ಬರುತ್ತಿದೆ. ಪಾದಯಾತ್ರೆಯಲ್ಲಿ ನಾನು ಕಂಡ ವಿಶೇಷಗಳ ಬಗ್ಗೆ ವಿಧಾನ ಸಭೆಯಲ್ಲಿ ತಮ್ಮ ಮುಂದೆ ಕೆಲವೊಂದು ವಿಷಯಗಳನ್ನು ಮಂಡಿಸುತ್ತಿದ್ದೇನೆ. ಕರ್ನಾಟಕ ರಾಜ್ಯದಲ್ಲಿ ಬರಗಾಲ ಬಂದಿರುವಂತಹ ಸಂದರ್ಭದಲ್ಲಿ, ಸರ್ಕಾರ ಏನು ಕುರ್ಚಿಗಾಗಿ ಹೋರಾಡುತ್ತಿದ್ದಾರೋ, ಅವರು ಕೇವಲ ಮೇಲ್ನೋಟಕ್ಕೆ ಮಾಡಿದ ಸನ್ನಿವೇಶ ಇಡೀ ರಾಜ್ಯದ ಜನತೆಗೆ ನೋವು ತರುವಂತಹ ಪರಿಸ್ಥಿತಿಯಾಗಿ ಇಂದು ಮನೆಮಾತಾಗಿ ಎಲ್ಲರೂ ಮಾತನಾಡಿಕೊಳ್ಳುತ್ತಿದ್ದಾರೆ. ಪಾದಯಾತ್ರೆ ಸಂದರ್ಭದಲ್ಲಿ ಸಾಕಷ್ಟು ಕಷ್ಟಗಳನ್ನು ನೋಡಿದ್ದೇನೆ. ಬಡವರ, ಶ್ರಮಿಕರ ಮನೆಯಲ್ಲಿ ವಾಸ್ತವ್ಯ ಹೂಡಿದ್ದೇನೆ. ರೈತರ ಜೊತೆಯಲ್ಲಿ ಅವರ ಕಷ್ಟಗಳನ್ನು, ಸಮಸ್ಯೆಗಳನ್ನು ಚರ್ಚಿಸಿ ಸುಮಾರು 10 ಜಿಲ್ಲೆಗಳನ್ನು ದಾಟಿ ಬಂದಿದ್ದೇನೆ. ಶ್ರಮಿಕರ ಮನೆಯಲ್ಲಿ ಊಟವನ್ನು ಮಾಡಿದ್ದೇನೆ, ಅವರ ಸಮಸ್ಯೆಗಳನ್ನು ಕಣ್ಣಾರೆ ಕಂಡಿದ್ದೇನೆ. ಎಲ್ಲಿ ಹೋದರೂ ಕೂಡ ನನ್ನ ಅಕ್ಕ ತಂಗಿಯರು, ಅಣ್ಣ ತಮ್ಮಂದಿರು ಒಂದು ಕೊಡಪಾನ, ಹನಿ ನೀರು ಬೇಕಾದರೂ ಕೂಡ ಸುಮಾರು ಕಿ.ಮೀ.ಗಳ ದೂರಹೋಗಿ ತರುವಂತಹ ಪರಿಸ್ಥಿತಿಯನ್ನು ಸಹ ನೋಡಿದ್ದೇನೆ. ಬೀದರ್‌ನಿಂದ ಬೆಂಗಳೂರಿಗೆ ಬರುವ ಹಾದಿಯಲ್ಲಿ ಬರಗಾಲಕ್ಕೆ ಒಳಗಾದ ಜಿಲ್ಲೆಗಳಲ್ಲಿ ಅಂದರೆ ಗುಲ್ಬರ್ಗಾ, ಬೀದರ್ ಮತ್ತು ಯಾದಗೀರ್ ಮಧ್ಯದಲ್ಲಿ ಸಾಕಷ್ಟು ಹೆಣ್ಣುಮಕ್ಕಳು ಸುಮಾರು

ದೂರದಿಂದ ಕುಡಿಯುವ ನೀರನ್ನು ತೆಗೆದುಕೊಂಡು ಬರುತ್ತಿದ್ದರು. ಅಂತಹ ಹೆಣ್ಣುಮಕ್ಕಳ ಹತ್ತಿರ ನಾನೇ ಸ್ವತಃ ಮಾತನಾಡಿದ್ದೇನೆ. ಇವತ್ತು ಸರ್ಕಾರ ಕುಡಿಯುವುದಕ್ಕೆ ನೀರು ಕೊಡುತ್ತಿಲ್ಲ. ಜಾನುವಾರುಗಳಗೆ ತಿನ್ನಲು ಮೇವಿಲ್ಲ. ರೈತರಿಗೆ ಮಳೆ ಇಲ್ಲದೆ ಬೆಳೆ ಬೆಳೆಯದ ಕಾರಣ ಮೇಲೆ ರಾಜ್ಯಗಳಿಗೆ ವಲಸೆ ಹೋಗುತ್ತಿದ್ದಾರೆ. ಇವತ್ತು ನಮ್ಮ ಮಕ್ಕಳೆಲ್ಲರೂ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ ಎನ್ನುವ ಮಾತುಗಳನ್ನು ಹೇಳಿ ತಾಯಂದಿರೆಲ್ಲರೂ ಕಣ್ಣೀರಿಡುತ್ತಾರೆ. ಇಂತಹ ಸಂದರ್ಭದಲ್ಲಿ ನಾನೂ ಕೂಡ ಅಲ್ಲಿ ಹೋಗಿದಾಗ ಗುಣಿಯನ್ನು ತೆಗೆದು, ಆ ಗುಣಿಯಲ್ಲಿ ಬರುವ ನೀರನ್ನು ಬಟ್ಟೆಯಲ್ಲಿ ಸೋಸಿಕೊಂಡು ಕುಡಿಯುತ್ತಿದ್ದರು. ಇದನ್ನೆಲ್ಲಾ ನೋಡಿದಾಗ ಸರ್ಕಾರ ಎಲೋ ಒಂದು ಕಡೆ ನಿರ್ಲಕ್ಷ್ಯ ಭಾವನೆ ತೋರುತ್ತಿದೆ ಎನ್ನುವ ಸ್ಪಷ್ಟ ಚಿತ್ರಣ ಕಂಡು ಬರುತ್ತಿದೆ. ಹಲವಾರು ಕಡೆಗಳಲ್ಲಿ ಯುವಕರ ಹತ್ತಿರ ಹೋಗಿ ಮಾತನಾಡಿಕೊಂಡು ಬರುವ ಸಂದರ್ಭದಲ್ಲಿ, ಎಲ್ಲಾ ದನಕರುಗಳು ಕಸಾಯಿಖಾನೆಗೆ ಹೋಗುವ ಪರಿಸ್ಥಿತಿಯಾಗಿದೆ. ಇವತ್ತು ಸಾಕಷ್ಟು ದನ-ಕರುಗಲು ಕಸಾಯಿಖಾನೆಗಳಿಗೆ ಹೋಗುವಂಥ ಪರಿಸ್ಥಿತಿ ಆಗಿರಬಹುದು. ಒಂದೊಂದು ಸಾರಿ, ದನಕರುಗಳನ್ನು ಜೋಪಾನ ಮಾಡಿದಂಥ ಒಬ್ಬ ಯಜಮಾನ ಕಷ್ಟ ಬರುವಂಥ ಸಂದರ್ಭದಲ್ಲಿ 12-00 ಗಂಟೆ, 1-00 ಗಂಟೆಗೆ ಸಂತೆಗೆ ಹೋಗಿ, ಕಣ್ಣುಮುಚ್ಚಿಕೊಂಡು ಆ ದನಕರುಗಳನ್ನು ಬಿಟ್ಟು ಬಂದು 'ಸ್ವಾಮಿ ಇವತ್ತು ನನಗೆ ಕಷ್ಟ ಬಂದಿದೆ ಮಳೆ ಇಲ್ಲ. ನೀರಾವರಿ ಸವಲತ್ತು ಇಲ್ಲ ಆದರೆ ಇವತ್ತು ಸರ್ಕಾರ 124 ತಾಲ್ಲೂಕುಗಳಲ್ಲಿ ಬರಗಾಲ ಪೀಡಿತ ಪ್ರದೇಶವನ್ನಾಗಿ ಘೋಷಣೆ ಮಾಡಿದೆ.

(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಆದರೆ, ಈ ರೀತಿ ಘೋಷಣೆ ಮಾಡಿದ್ದರೂ ಸಹ ಅದು ಕೇವಲ ಕಾಗದಪತ್ರಗಳ ಮೇಲಿದೆ ವಿನಹ ಸರ್ಕಾರ ನಮಗೆ ಯಾವೂದೂ ಪರಿಹಾರ ಹಣವನ್ನು ಕೊಟ್ಟಿಲ್ಲ, ಸರ್ಕಾರದಿಂದ ಎಲ್ಲೋ ಒಂದು ಕಡೆ ನಮ್ಮ ಕಷ್ಟಗಳಿಗೆ ಧೈರ್ಯವನ್ನು ತುಂಬುವಂಥ ಕೆಲಸ ಆಗಲಿಲ್ಲ, ಪರಿಹಾರ ಕೊಡುವಂಥ ಕೆಲಸ ಆಗಲಿಲ್ಲ. ನಾವು ಇನ್ನೂ ಪರಿಹಾರ ಬರುತ್ತದೆಂದು ಕಾಯುತ್ತಾ ಕುಳಿತಿದ್ದೇನೆ. ಆದರೆ ಇವತ್ತಿನವರೆಗೆ ನಮಗೆ ಸರ್ಕಾರದಿಂದ ಪರಿಹಾರ ಹಣ

ಕೊಡುವಂಥ ಕೆಲಸ ಆಗಲಿಲ್ಲ. ನಾವು ರಾತ್ರಿ 1–00 ಗಂಟೆಗೆ ಸಂತೆಗೆ ಹೋಗಿ ತಮ್ಮ ದನಕರುಗಳನ್ನು ಕಣ್ಣುಮುಚ್ಚಿಕೊಂಡು ಮಾರಾಟ ಮಾಡಿಕೊಂಡು ಬಂದಿದ್ದೇವೆ" ಎಂದು ಒಬ್ಬ ರೈತ ಹೇಳಿದಂಥ ಮಾತು. ರೈತರಿಗೆ ಮಳೆ ಸರಿಯಾಗಿ ಬಂದಂಥ ಸಂದರ್ಭದಲ್ಲಿ, ಬೆಳೆ ಬೆಳೆದಂಥ ಸಂದರ್ಭದಲ್ಲಿ ರೈತರು ಬೆಳೆದಂಥ ಬೆಳೆಗೆ ಸರಿಯಾದ ರೇಟ್ ಸಿಗಲಿಲ್ಲ. ಇವತ್ತು ಬರಗಾಲ ಬಂದಂಥ ಸಂದರ್ಭದಲ್ಲಿ, ಮಳೆ ಇಲ್ಲದ ಸಂದರ್ಭದಲ್ಲಿ ಅವರು ಅಷ್ಟು ಇಷ್ಟು ಬಿತ್ತನೆ ಮಾಡಿ ಇವತ್ತು ಬೆಳೆ ಬಂದಿದ್ದರೂ ಸಹ ಮಾರುಕಟ್ಟೆಯಲ್ಲಿ ಬೆಲೆ ಇಲ್ಲದಂಥ ಸಂದರ್ಭದಲ್ಲಿ ರೈತರು ಆತ್ಮಹತ್ಯೆ ಮಾಡಿಕೊಂಡ ಸನ್ನಿವೇಶವನ್ನ ಕೂಡ ಸಾಕಷ್ಟು ಪತ್ರಿಕೆಗಳಲ್ಲಿ ನಾನು ಕಣ್ಣಾರೆ ಕಂಡಿದ್ದೇನೆ. ಅದಕೋಸ್ಕರ ಸನ್ಮಾನ್ಯ ಸಭಾಧ್ಯಕ್ಷರೆ, ಇವತ್ತು ಎಲ್ಲೋ ಒಂದು ಕಡೆ ರೈತರು ಬಹಳಷ್ಟು ಕಷ್ಟದಲ್ಲಿದ್ದಾರೆ. ಆ ಕಷ್ಟದಲ್ಲಿರತಕ್ಕಂಥ ರೈತರಿಗೆ ಎಲ್ಲೋ ಒಂದು ಕಡೆ ಧೈರ್ಯವನ್ನು ತುಂಬುವಂಥ ಕೆಲಸ ಆಗಬೇಕು, ಅವರು ಬೆಳೆದಂಥ ಬೆಳೆಗೆ ಇವತ್ತು ಸರ್ಕಾರದ ವತಿಯಿಂದ ವೈಜ್ಞಾನಿಕ ಬೆಲೆ ಕೊಡುವಂಥ ಕೆಲಸ ಆಗಬೇಕೆಂದು ನಾನು ಸರ್ಕಾರವನ್ನು ಒತ್ತಾಯವನ್ನು ಮಾಡುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಹಲವಾರು ನದಿಗಳು ಇವೆ. ಆದರೆ, ಹಲವಾರು ನದಿಗಳು ಇದ್ದರೂ ಕೂಡ ಈ ನದಿಗಳಿಂದ ಏನು ಹರಿದುಹೋಗುತ್ತಿದೆ. ಕೃಷ್ಣಾ ಆಗಿರಬಹುದು. ತುಂಗಭದ್ರ ಆಗಿರಬಹುದು. ಕೃಷ್ಣಾ ನದಿಯಲ್ಲಿ 'A' Scheme ಏನಿತ್ತು ಆ 'A' scheme ನಿಂದ ಲಕ್ಷಾಂತರ ಜನರಿಗೆ ನೀರಾವರಿ ಸವಲತ್ತು ಆಗಬೇಕಿತ್ತು. ಆದರೆ 'A' Scheme ಮುಗಿಯುವ ಹಂತದಲ್ಲಿದೆ. ಇವತ್ತು 'B' Scheme ಗೆ ಸರ್ಕಾರದಿಂದ ಎಲ್ಲಾ ರೀತಿಯಲ್ಲಿ ಟೆಂಡರುಗಳು ಆಗಿದ್ದರೂ ಕೂಡ 'B' Scheme ಪ್ರಾರಂಭ ಕೂಡ ಆಗಿಲ್ಲ. ಪ್ರಾರಂಭಿಸಿದರೆ ಬೀದರ್, ಗುಲ್ಬರ್ಗ, ಯಾದಗಿರಿ ಜಿಲ್ಲೆಗಳಲ್ಲಿ ಅನುಕೂಲವಾಗುತ್ತದೆ. ಇವತ್ತು ಕೃಷ್ಣಾ ನದಿ ಆಗಿರಬಹುದು, ಆ ನದಿಗಳಿಂದ ಎಷ್ಟು ನೀರು ಸಮುದ್ರ ಪಾಲು ಆಗುತ್ತಿದೆಯೋ ಆ ನೀರನ್ನು ನಮಗೆ ಎಲ್ಲಾ ರೀತಿಯಲ್ಲಿ ಉಪಯೋಗವೇಗುತ್ತಿಲ್ಲವೆಂಬ ಮಾತನ್ನೂ ಕೂಡ ಹೇಳಬಯಸುತ್ತೇನೆ. ಸಾಕಷ್ಟು ರೈತರು ನೋವನ್ನು ಅನುಭವಿಸಿದ್ದಾರೆ. ಸಮುದ್ರದಿಂದ ಸಾಕಷ್ಟು

ನೀರು ಅರಬ್ಬಿ ಸಮುದ್ರಕ್ಕೆ ಹರಿದು ಹೋಗುತ್ತಿದೆ. ಇವತ್ತು ಸರ್ಕಾರ ಮನಸ್ಸು ಮಾಡಿದರೆ ಎಲ್ಲೋ ಒಂದು ಕಡೆ bridge cum barrage ಗಳನ್ನು ಮಾಡಬಹುದಾಗಿತ್ತು. ಎಲ್ಲೋ ಒಂದು ಕಡೆ check dam ಕಟ್ಟಿಕೊಳ್ಳಬಹುದಾಗಿತ್ತು. ಆದರೆ, ಸರ್ಕಾರದಿಂದ ಆ ಕೆಲಸ ಆಗಲಿಲ್ಲ. ಇವತ್ತು ಸರ್ಕಾರ ಜನರನ್ನು ರೈತರನ್ನು ನಿರ್ಲಕ್ಷಿಸಿ, ಅವರನ್ನು ಕಡೆಗಣಿಸದಂಥ ಭಾವನೆಯಲ್ಲಿ ಕೆಲಸ ಮಾಡುತ್ತಿದೆ. ನಮ್ಮ ಬಳ್ಳಾರಿ ಜಿಲ್ಲೆಯಲ್ಲಿನ ಕೂಡ್ಲಿಗಿ ಆಗಿರಬಹುದು, ಸಂಡೂರು ಆಗಿರಬಹುದು, ದಾಣಗೆರೆ ಜಿಲ್ಲೆಯಾಗಿರಬಹುದು, ಚಿತ್ರದುರ್ಗ ಜಿಲ್ಲೆಯಾಗಿರಬಹುದು, ನಂತರ ತುಮಕೂರು ಜಿಲ್ಲೆಯಾಗಿರಬಹುದು, ಕೋಲಾರ ಜಿಲ್ಲೆಯಾಗಿರಬಹುದು, ಬೆಂಗಳೂರು ಗ್ರಾಮಾಂತರ ಆಗಿರಬಹುದು, ಅಲ್ಲಿ ಪರಮಶಿವಯ್ಯ ಆಯೋಗದ ವರದಿ ಜಾರಿಗೆ ತರಬೇಕಾಗಿತ್ತು. ಸರ್ಕಾರ ಪರಮಶಿವಯ್ಯ ಆಯೋಗದ ವರದಿ ಜಾರಿಗೆ ತರಬೇಕೆಂದು ಬಹಳ ದಿನಗಳಿಂದ ಜನರ ಬೇಡಿಕೆಯಾಗಿದೆ. ಆದರೆ, ಸರ್ಕಾರ ಪರಮಶಿವಯ್ಯ ಆಯೋಗದ ವರದಿ ಜಾರಿಗೆ ತರದೆ ಈ ಭಾಗದಲ್ಲಿ ಇರತಕ್ಕಂಥ ಜನರಿಗೆ ಕುಡಿಯುವ ನೀರಿಲ್ಲದೆ ಅವರ ಕಣ್ಣಲ್ಲಿ ನೀರು ಬರುತ್ತಿದೆ. ಬೋರ್‌ವೆಲ್ ಹಾಕುವುದಕ್ಕೆ ಒಂದು ಸಾವಿರ ಫೀಟ್, ಎರಡು ಸಾವಿರ ಫೀಟ್ ಹೋಗುತ್ತಿದ್ದರೂ ಕೂಡ ನೀರು ಬರದಂಥ ಪರಿಸ್ಥಿತಿ ಇದೆ. ರೈತರೆಲ್ಲಾ ಪರಮಶಿವಯ್ಯ ಆಯೋಗದ ವರದಿ ತರುತ್ತಾರೆ, ನೇತ್ರಾವತಿ ತಿರುವು ಯೋಜನೆ ಜಾರಿಗೆ ಬರುತ್ತದೆಂಬ ಆಕಾಂಕ್ಷೆಯಿಂದ ಆ ಭಾಗದಲ್ಲಿರುವ ಜನರು ಇದ್ದಾರೆ, ಸರ್ಕಾರ ಅಧಿಕಾರದಲ್ಲಿ ಬರುವ ಸಂದರ್ಭದಲ್ಲಿ ಪರಮಶಿವಯ್ಯ ಆಯೋಗದ ವರದಿ ಜಾರಿಗೆ ತರುತ್ತೇವೆ, ನೇತ್ರಾವತಿ ತಿರುವು ಯೋಜನೆಯನ್ನು ಜಾರಿಗೆ ತರುತ್ತೇವೆಂದು ಹೇಳಿದ್ದರು. ಸರ್ಕಾರ ಇವುಗಳನ್ನು ಜಾರಿಗೆ ತರುತ್ತದೆಂದು ಈ ಭಾಗದಲ್ಲಿ ಇರುವಂಥ ಜನರೆಲ್ಲಾ ಇವತ್ತು ಕಾಯ್ದು ನೋಡುತ್ತಿದ್ದಾರೆ. ಎಲ್ಲೋ ಒಂದು ಕಡೆ ಸರ್ಕಾರ ಇವತ್ತು ಜನರಿಗೆ, ರೈತರಿಗೆ ಅನ್ಯಾಯವನ್ನು ಮಾಡುತ್ತಿರುವಂಥ ಸನ್ನಿವೇಶವನ್ನು ನಾವೆಲ್ಲರೂ ಕಣ್ಣಾರೆ ಕಂಡಿದ್ದೇವೆ. ಅದಕೋಸ್ಕರ ನಾನು ಬರಗಾಲ ಬರುವಂಥ ಸಂದರ್ಭದಲ್ಲಿ ಏಪ್ರಿಲ್ 24ನೇ ತಾರೀಖಿಗೆ ಪಾದಯಾತ್ರೆಯನ್ನು ಪ್ರಾರಂಭ ಮಾಡಿದೆ. ಆ

ಪಾದಯಾತ್ರೆಯನ್ನು ಪ್ರಾರಂಭ ಮಾಡುವಂಥ ಸಂದರ್ಭದಲ್ಲಿ ರಾಜೋಹಳ್ಳಿ ಎನ್ನುವಂಥ ಹಳ್ಳಿಯಲ್ಲಿ ನಾನು ಪ್ರಥಮ ವಾಸ್ತವ್ಯವನ್ನು ಹೂಡಿದ್ದೆ. ಆ ಪ್ರಥಮ ವಾಸ್ತವ್ಯನ್ನು ಹೂಡುವಂಥ ಸಂದರ್ಭದಲ್ಲಿ ಮಳೆ, ಬಿಸಿಲು ಪ್ರಾರಂಭವಾಯಿತು. ಮಳೆ, ಬಿಸಿಲು ಪ್ರಾರಂಭಾದ ಸಮಯದಲ್ಲಿ ಒಂದು ಸಣ್ಣ ಕೊಠಡಿಯಲ್ಲಿ ಇಬ್ಬರು–ಮೂವರು ಹೆಣ್ಣುಮಕ್ಕಳು, ತಂದೆ ತಾಯಿ ಇದ್ದರು. ಅವರ ಮನೆಯಲ್ಲಿ ನಾನು ವಾಸ್ತವ್ಯವನ್ನು ಹೂಡುವ ಸಂದರ್ಭದಲ್ಲಿ, ಬಿಸಿಲು ಮತ್ತು ಮಳೆ ಬಂದಂಥ ಸಂದರ್ಭದಲ್ಲಿ ಆ ಮನೆಯಲ್ಲಿದಂಥ ಮೂರು ಜನ ಹೆಣ್ಣು ಮಕ್ಕಳು, ಅವರ ತಂದೆ–ತಾಯಿ ಎಲ್ಲರೂ ಮಳೆಯಲ್ಲಿ ಹೋಗಿ ತಮ್ಮ ದನಕರುಗಳನ್ನು ಕಾಪಾಡಿಕೊಳ್ಳುತ್ತಿದ್ದರು. ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಅವರಿಗೆ ಇವತ್ತು ಮನುಷ್ಯನ ಪ್ರಾಣಕ್ಕಿಂತ ಆ ದನಕರುಗಳ ಪ್ರಾಣ ಬಹಳಷ್ಟು ಮುಖ್ಯವಾಗಿದ್ದ ಕಾರಣ, ಆ ದನಕರುಗಳನ್ನು ಕಾಪಾಡಿಕೊಳ್ಳುತ್ತಿದ್ದ ಘಟನೆಯನ್ನು ನಾನು ರಾಜೋಹಳ್ಳಿಯಲ್ಲಿ ಏಪ್ರಿಲ್ 24 ರಂದು ಪ್ರಥಮ ವಾಸ್ತವ್ಯ ಹೂಡಿದ್ದ ಸಂದರ್ಭದಲ್ಲಿ ಮಧ್ಯರಾತ್ರಿ 1–30 ಗಂಟೆ, 2–00 ಗಂಟೆಯಲ್ಲಿ ನೋಡಿದ್ದೇನೆ. ಪಾದಯಾತ್ರೆ ಸಂದರ್ಭದಲ್ಲಿ ನಾನು ಮಹಿಳೆಯರನ್ನು, ಮಕ್ಕಳನ್ನು ನೋಡಿದ್ದೇನೆ 124 ತಾಲ್ಲೂಕುಗಳಲ್ಲಿ ಏನು ಬರಗಾಲ ಬಂದಿದೆ ಅಲ್ಲಿ ಸಾಕಷ್ಟು ಮಂದಿ ಮಕ್ಕಳು ಎಲ್ಲಾ ರೀತಿಯಲ್ಲಿ ಶಾಲೆಗೆ ಹೋಗಲಾರದಂಥ ಪರಿಸ್ಥಿತಿ ಹಾಗೂ ತಂದೆ–ತಾಯಿಗಳು ಮಕ್ಕಳನ್ನು ಹಳ್ಳಿಗಳಲ್ಲಿ ಬಿಟ್ಟುಹೋಗುವಂಥ ಪರಿಸ್ಥಿತಿಯಲ್ಲಿ ಇಲ್ಲ. ತಂದೆ–ತಾಯಿಗಳು ಮಕ್ಕಳು ಶಾಲೆಗೆ ಹೋಗುವುದನ್ನು ಬಿಡಿಸಿ ಅವರ ತಂದೆ–ತಾಯಿ ಗುಳೆ ಕರೆದುಕೊಂಡು ಹೋಗುವುದು. ಬೇರೆ ರಾಜ್ಯಗಳಿಗೆ ವಲಸೆ ಹೋಗುವ ಸನ್ನಿವೇಶವನ್ನು ನಾನು ಕಣ್ಣಾರೆ ಕಂಡಿದ್ದೇನೆ. ನಾನು ಸಾಕಷ್ಟು ಮಂದಿ ತಾಯಿಯಂದಿರಿಗೆ ದಯವಿಟ್ಟು ತಾವು ಮಕ್ಕಳು ಶಾಲೆಗೆ ಹೋಗುವುದನ್ನು ಬಿಡಿಸಬೇಡಿ. ಊರಿನಲ್ಲಿರುವಂಥ ಯಾರಾದರೂ ಯಜಮಾನರಿಗೆ ತಮ್ಮ ಮಕ್ಕಳನ್ನು ಅವರ ಜೊತೆಯಲ್ಲಿಟ್ಟು ಶಾಲೆಯಲ್ಲಿ ಓದಿಸುವಂಥ ಕೆಲಸ ಮಾಡಿರಿ ಎಂದು ಹೇಳಿದೆ. ಇವತ್ತು ವಲಸೆ ಹೋಗುವಂಥ ಸಾಕಷ್ಟು ಮಂದಿಗೆ, ಗುಳೆ ಹೋಗುವಂಥ ಜನರಿಗೆ, ಆ ತಾಯಂದರಿಗೆ ಧೈರ್ಯ

ತುಂಬಬೇಕು. ಸರ್ಕಾರ ಇವತ್ತು ಕಣ್ಣಾಮುಚ್ಚಿ ಕುಳಿತಿದೆ. ಸರ್ಕಾರ ನಿಮ್ಮನ್ನು ನಿರ್ಲಕ್ಷ್ಯ ಮಾಡಿದೆ. ಆದರೆ ಮುಂಬರುವ ದಿನಗಳಲ್ಲಿ ಎಲ್ಲೋ ಒಂದು ಕಡೆ ಭಗವಂತನು ಸರ್ಕಾರದ ಕಣ್ಣು ತೆರೆಯುವ ಕೆಲಸ ಮಾಡುತ್ತಾರೆಂದು ಅವರಿಗೆ ಧೈರ್ಯ ತುಂಬಿ ಅಲ್ಲಿಂದ ಇಲ್ಲಿಯವರೆಗೆ ಪಾದಯಾತ್ರೆ ಮಾಡಿಕೊಂಡು ಬಂದಿದ್ದೇನೆ. ಅದೇ ರೀತಿಯಲ್ಲಿ ಏಪ್ರಿಲ್ 26ನೇ ತಾರೀಖಿಗೆ ಬೀದರ್ ಜಿಲ್ಲೆಯ ಹಳ್ಳಿಕೇಡಿಯಲ್ಲಿ ಪಾದಯಾತ್ರೆ ಮಾಡಿಕೊಂಡು ಬರುವ ಸಂದರ್ಭದಲ್ಲಿ ಹಳ್ಳಿಕೇಡಿಯಲ್ಲಿ ವಡ್ಡರ ಮನೆಯಲ್ಲಿ ನಾನು ವಾಸ್ತವ್ಯವನ್ನು ಹೂಡಿದ್ದೆ. ವಾಸ್ತವ್ಯವನ್ನು ಹೂಡುವ ಸಂದರ್ಭದಲ್ಲಿ ಒಂದು ಚಿಕ್ಕ ಮನೆಯಿತ್ತು. ಆ ಚಿಕ್ಕ ಮನೆಯಲ್ಲಿ ಮಕ್ಕಳನ್ನು ಇಟ್ಟುಕೊಂಡು ಒಂದೇ ಒಂದು ಕೋಣೆಯಲ್ಲಿ ಬಚ್ಚಲು ಮನೆ, ಎಲ್ಲಾ ಅಲ್ಲೇಯಿದ್ದು ಅಲ್ಲಿ ಮಲಗಿಕೊಳ್ಳುವ ಪರಿಸ್ಥಿತಿ ನೋಡಿದ ಸಂದರ್ಭದಲ್ಲಿ ಅವರ ಮಗಳು ಓದುತ್ತಿದ್ದ ಸಂದರ್ಭದಲ್ಲಿ "ಅಣ್ಣನವರೇ, ಇವತ್ತು ನಮಗೆ ತುಂಬಾ ಕಷ್ಟವಿದೆ, ಸರ್ಕಾರದಿಂದ ಒಂದು ಮನೆಯೂ ಬಂದಿಲ್ಲ. ನಮ್ಮಲ್ಲಿ ಒಂದು ಮನೆಯೂ ಬಂದಿಲ್ಲ, ನಮ್ಮಲ್ಲಿ ಒಂದು ಎಕರೆ ಜಮೀನು ಇದೆ, ಒಂದು ಎಕರೆ ಜಮೀನು ಇದ್ದರೂ ಮಳೆ ಬಂದಿಲ್ಲ. ಇವತ್ತು ಬೆಳೆದಂಥ ಬೆಳೆಗೆ ಸರಿಯಾದಂಥ ಬೆಲೆಯಿಲ್ಲ" ಎಂದು ನೋವಿನಲ್ಲಿ ಹೇಳುತ್ತಾ ನಾವು ಇದರಲ್ಲೇ ಓದಿಕೊಳ್ಳಬೇಕು. ಇದರಲ್ಲೇ ನಾವು ಬೆಳೆಯಬೇಕಾದರೆ ತುಂಬಾ ಕಷ್ಟವಾಗುತ್ತಿದೆ ಎಂದು ಕಣ್ಣೀರಿಟ್ಟ ಸಂದರ್ಭದಲ್ಲಿ ಬೇಜಾರಾಯಿತು. ಈ ದೇಶಕ್ಕೆ ಸ್ವಾತಂತ್ರ್ಯ ಬಂದು 65 ವರ್ಷಗಳಾಗುತ್ತಿದ್ದರೂ ಕೂಡ ಅಂಥ ಕಷ್ಟಗಳು ನಾವು ಇವತ್ತು ನೋಡುತ್ತಿದ್ದೇವೆ. ಹಳ್ಳಿಗಾಡು ಪ್ರದೇಶದಲ್ಲಿ ಇವತ್ತು ಮನೆಯಿಲ್ಲದಂತೆ, ಹೊಲಯಿಲ್ಲದಂತೆ, ಹೊಲ ಇದ್ದರೂ ಇವತ್ತು ಬರಗಾಲ ಬಂದಂಥ ಸಂದರ್ಭದಲ್ಲಿ ಎಷ್ಟು ಕಷ್ಟಗಳನ್ನು ಅವರು ಜೀವನವನ್ನು ಮಾಡುತ್ತಿದ್ದಾರೆ. ಇವತ್ತು ಮುಖ್ಯಮಂತ್ರಿಗಳಾಗಿರಬಹುದು, ಉಪ ಮುಖ್ಯಮಂತ್ರಿಗಳಾಗಿರಬಹುದು ಗಮನವಿಟ್ಟು ನೋಡಬೇಕಾಗುತ್ತದೆ. ಅದೇ ರೀತಿಯಲ್ಲಿ ನಾನು ರಾಯಚೂರು ಜಿಲ್ಲೆಯಲ್ಲಿ ಕಾಲ್ನಡಿಗೆಯಲ್ಲಿ ಬರುವಂಥ ಸಂದರ್ಭದಲ್ಲಿ ಒಂದು ಘಟನೆಯನ್ನು ನೋಡಿದ್ದೆ ಒಂದು ಹೊಲದಲ್ಲಿ ಒಬ್ಬ ಮುದುಕ ಕುಳಿತಿದ್ದ ಸಂದರ್ಭದಲ್ಲಿ ನಾನು ಅವರ ಬಳಿ ಹೋಗಿ "ಅಜ್ಜ ಏಕೆ

ಅಳುತ್ತಿದ್ದೀರಿ" ಎಂದು ಕೇಳಿದಾಗ ಆ ರೈತ ಬಿಕ್ಕಿ ಬಿಕ್ಕಿ ಅಳುತ್ತಾ ಶ್ರೀರಾಮುಲುರವರೆ "ಇವತ್ತು ನಮಗೆ ಬರಗಾಲ ಬಂದಿದೆ, ನಮ್ಮ ಊರಿನಲ್ಲಿ ಕುಡಿಯಲಿಕ್ಕೆ ನೀರಿಲ್ಲ. ಉಣ್ಣುವುದಕ್ಕೆ ಅನ್ನ ಇಲ್ಲ, ನನಗೆ ಇಬ್ಬರು ಗಂಡು ಮಕ್ಕಳು ಇದ್ದಾರೆ, ಅವರು ಗುಳೆ ಹೋಗಿದ್ದಾರೆ, ನಾನು ಸತ್ತರೆ ನನ್ನನ್ನು ಯಾರು ನೋಡುತ್ತಾರಪ್ಪ?" ಎಂದು ಆ ಅಜ್ಜ ಕಣ್ಣಲ್ಲಿ ನೀರು ಸುರಿಸುತ್ತಾ ಹೇಳಿದಂಥ ಮಾತನ್ನು ಕೇಳಿ ನನಗೆ, ಎಲ್ಲೊ ಒಂದು ಕಡೆ ಸರ್ಕಾರ ಮನಸ್ಸು ಮಾಡಿದ್ದರೆ ಈ ಬರಗಾಲ ಬಂದಂಥ ಜನರಿಗೆ ಸರ್ಕಾರದಿಂದ ಸ್ಪಂದನೆ ಸಿಗಬಹುದೆಂಬ ಧೈರ್ಯ ಇರುತ್ತಿತ್ತು. ಆದರೆ ಸರ್ಕಾರದಲ್ಲಿ ಇದ್ದಂಥ ಮಂತ್ರಿಗಳು ಅಧಿಕಾರಕೋಸ್ಕರವಾಗಿ ಏನು ಸರ್ಕಾರವನ್ನು ನಡೆಸುತ್ತಿದ್ದಾರೆ, ಅವರು ಬರಗಾಲವನ್ನು ನಿರ್ಲಕ್ಷ್ಯ ಮಾಡಿದ್ದಾರೆಂದು ಸ್ಪಷ್ಟವಾಗಿ ಕಂಡುಬರುತ್ತದೆ. ರಾಜ್ಯದಲ್ಲಿ ಬರಗಾಲ ತಾಂಡವವಾಡುತ್ತಿದ್ದು, ಕೇಂದ್ರ ಸರ್ಕಾರ ಎಲ್ಲೋ ಒಂದು ಕಡೆ ಸ್ಪಂದಿಸುತ್ತೆಂದು ಬಹಳಷ್ಟು ನಿರೀಕ್ಷೆಯನ್ನು ನಾವು ಇಟ್ಟುಕೊಂಡಿದ್ದೇವೆ. ಆದರೆ, ಕೇಂದ್ರ ಸರ್ಕಾರ ಇವತ್ತು 124 ತಾಲ್ಲೂಕುಗಳಲ್ಲಿ ಬರಗಾಲ ಬಂದಿದ್ದರೂ ಕೂಡ ಸ್ಪಂದಿಸುತ್ತಿಲ್ಲ. ಕೇಂದ್ರದಿಂದ ಬಹಳಷ್ಟು ಮಂತ್ರಿಗಳು, ಮಾಜಿ ಮುಖ್ಯಮಂತ್ರಿಗಳು, ಅಲ್ಲಿರುವಂಥ ವ್ಯಕ್ತಿಗಳೆಲ್ಲರೂ ಕರ್ನಾಟಕ ರಾಜ್ಯಕ್ಕೆ ಬಂದಿದ್ದರೂ ಕೂಡ ಇವತ್ತು ಬರಗಾಲ ಬಂದಂಥ ಜಿಲ್ಲೆಗಳಿಗೆ, ಹಳ್ಳಿಗಳಿಗೆ ಹೋಗಿ ಧೈರ್ಯ ತುಂಬುವಂಥ ಕೆಲಸ ಕೇಂದ್ರ ಸರ್ಕಾರ ಮಾಡಿಲ್ಲ. ಬಹಳಷ್ಟು ರೈತರು ಅವರ ಕಷ್ಟಗಳನ್ನು ನನ್ನ ಹತ್ತಿರ ತೋಡಿಕೊಂಡಿದ್ದಾರೆ. ಅಂಥ ಸಂದರ್ಭದಲ್ಲಿ ಇವತ್ತು ನಾನು ಹೇಳುವುದಿಷ್ಟೆ. ಬರಗಾಲ ಬಂದಂಥ ಜಿಲ್ಲೆಗಳಿಗೆ ಇವತ್ತಿನದಿವಸ ಏನು ಹಣ ಬರಬೇಕಾಗಿತ್ತು ಅದು ಬಂದಿಲ್ಲ. ಇಡೀ ಕರ್ನಾಟಕ ರಾಜ್ಯದಲ್ಲಿ 124 ತಾಲ್ಲೂಕುಗಳಲ್ಲಿ ಏನು ಬರಗಾಲ ಬಂದಿದೆಯೋ ಆದರಿಂದ 4,500 ಕೋಟಿ ರೂಪಾಯಿ ಲುಕ್ಸಾನು ಎಂದು ಸ್ಪಷ್ಟವಾಗಿ ಸರ್ಕಾರದವರು ಹೇಳಿದಂತೆ ಮಾತು. 4,500 ಕೋಟಿ ರೂಪಾಯಿ ನಷ್ಟವಾಗಿದ್ದರೂ ಕೇಂದ್ರ ಸರ್ಕಾರ 182 ಕೋಟಿ ರೂಪಾಯಿಗಳನ್ನು ಮಾತ್ರ ಕೊಟ್ಟದೆ. 182 ಕೋಟಿ ರೂಪಾಯಿ ಎಂದರೆ ಕೇವಲ 5% ಹಣ ಮಾತ್ರ ಬಂದಿದೆ. ಇವತ್ತು ಬರಗಾಲದ ಪರಿಸ್ಥಿತಿಯಿರುವಾಗ, ಬಂದಿರುವಂಥ ಹಣವನ್ನು ಯಾವ ರೀತಿ

ಹಂಚಬೇಕು? ಇವರು ಹಂಚುವಂಥ ಸಂದರ್ಭದಲ್ಲಿ ರೈತರುಗಳು ತಮ್ಮ ಸ್ಥಳಗಳನ್ನು ಬಿಟ್ಟು ವಲಸೆ ಹೋಗಿದ್ದಾರೆ, ಇಂಥ ಪರಿಸ್ಥಿತಿಯಲ್ಲಿ ರಾಜ್ಯ ಸರ್ಕಾರ ಇವತ್ತಿನವರೆಗೂ 1 ರೂ. ಹಣ ಬಿಡುಗಡೆ ಮಾಡಿಲ್ಲ ಎನ್ನುವುದು ಸ್ಪಷ್ಟವಾಗಿ ಕಂಡು ಬರುತ್ತಿದೆ. ಮೇಲಾಗಿ ರಾಜ್ಯ ಸರ್ಕಾರ ಬರಗಾಲ ಬಂದಿರುವ ಈ ಸಂದರ್ಭದಲ್ಲಿ ರೈತರ ಪರವಾಗಿ, ಬಡವರ ಪರವಾಗಿ ಕಳಕಳಿ ಇದ್ದಿದ್ದರೆ, ರೈತರಿಗೆ ಕಿಂಚಿತ್ತು ಸಹಾಯವನ್ನು ಮಾಡಬೇಕು ಎಂದು ಇದ್ದಿದ್ದರೆ, ಎಲ್ಲೋ ಒಂದು ಕಡೆ ನಮ್ಮ ಅಧಿವೇಶನ ನಡೆಯುತ್ತಿದೆ, ಇಂಥ ಸಂದರ್ಭದಲ್ಲಿ ಯಾವ ಪುರುಷಾರ್ಥಕ್ಕಾಗಿ ಈ ಚರ್ಚೆ ನಡೆಯುತ್ತಿದೆ ಎನ್ನುವುದನ್ನು ಹೇಳಬೇಕು. ಬರಗಾಲದ ಬಗ್ಗೆ ತಮಗೆ ಕಳಕಳಿ ಇದ್ದರೆ ರಾಜ್ಯ ಸರ್ಕಾರದಿಂದ ಆದಷ್ಟು ಬೇಗನೆ ಹಣವನ್ನು ಕೊಡುವ ಕೆಲಸ ಮಾಡಿ. ಒಂದು ಕಡೆ ಕೇಂದ್ರ ಸರ್ಕಾರದ ಮೇಲೆ ನೀವು ಹೇಳುತ್ತೀರಿ, ಕೇಂದ್ರ ಸರ್ಕಾರ ರಾಜ್ಯ ಸರ್ಕಾರದ ಮೇಲೆ ಹೇಳುತ್ತದೆ. ಕೇಂದ್ರದಲ್ಲಿದ್ದಂಥವರೆಲ್ಲ ರಾಜ್ಯ ಸರ್ಕಾರದ ಮೇಲೆ ನೋಡುತ್ತಿದ್ದಾರೆ, ಗಂಡ ಹೆಂಡತಿ ಜಗಳದಲ್ಲಿ ಕೂಸು ಯಾವ ರೀತಿ ಬಡವಾಗುತ್ತಿದೆಯೋ ಅದೇ ರೀತಿ ಕರ್ನಾಟಕ ರಾಜ್ಯದ ಜನರ ಪರಿಸ್ಥಿತಿ ಆಗುತ್ತಿದೆ. ಸನ್ಮಾನ್ಯ ಮುಖ್ಯಮಂತ್ರಿಗಳು 1 ಲಕ್ಷ ಕೋಟಿ ರೂಪಾಯಿ ಬಜೆಟ್ ಕೊಟ್ಟಿದ್ದಾರೆ. 10% ಮೊತ್ತದಂತೆ 10 ಸಾವಿರ ಕೋಟಿಗಳನ್ನು ಬಡವರಿಗೆ, ರೈತರಿಗೆ ಕೊಟ್ಟರೆ ಏನಾದರೂ ನಷ್ಟವಾಗುತ್ತದೆಯೇ? ಆದರೆ ಏನಾಗುತ್ತಿದೆಯೆಂದರೆ ಕೇಂದ್ರಕೆ ಪತ್ರ ಬರೆದಿದ್ದೇವೆ. ಕೇಂದ್ರದಿಂದ ಹಣ ಬಂದಿಲ್ಲವಾದ್ದರಿಂದ ಬರ ಪರಿಹಾರ ಹಣ ಕೊಡುವುದಕ್ಕೆ ಆಗುತ್ತಿಲ್ಲವೆಂದು ಹೇಳುತ್ತಿದ್ದೀರಿ. ಯಾವುದಕ್ಕೋಸ್ಕರ ಈ ರೀತಿ ನಡೆದುಕೊಳ್ಳುತ್ತಿದ್ದೀರಿ ಎನ್ನುವಂಥ ವಿಷಯವನ್ನು ನಾವೆಲ್ಲಾ ಗಂಭೀರವಾಗಿ ಚಿಂತನೆಯನ್ನು ಮಾಡಬೇಕಾಗುತ್ತದೆ. ಮೊನ್ನೆ ತಾವೆಲ್ಲರೂ ಸಹ ನೋಡಿರಬಹುದು, ಇವತ್ತು ತುಂಗಭದ್ರಾ ನಾಲೆಯಲ್ಲಿ 133 ಟಿ.ಎಂ.ಸಿ. ನೀರು ನಿಲ್ಲಬೇಕಾಗಿತ್ತು. ಆದರೆ ಹೂಳು ತುಂಬಿಕೊಂಡಿರುವ ಕಾರಣದಿಂದ ಅಷ್ಟು ನೀರು ನಿಲ್ಲುತ್ತಿಲ್ಲ. ಹೂಳನ್ನು ಎತ್ತಬೇಕು ಎನ್ನುವುದಕ್ಕೋಸ್ಕರ 2 ದಿನಗಳ ಕಾಲ ನಾನು ಉಪವಾಸ ಸತ್ಯಾಗ್ರಹ ಮಾಡಿದೆ. ಜಲಾಶಯದಲ್ಲಿ ಸುಮಾರು 33 ಟಿ.ಎಂ..ಸಿ. ನೀರು ನಷ್ಟವಾಗುತ್ತಿದೆ. ತುಂಗಭದ್ರಾ ನದಿ ನಮ್ಮ ಆಂಧ್ರ

ಹಾಗೂ ಕರ್ನಾಟಕಕ್ಕೆ ಜೀವನದಿ ಆಗಿದೆ. ಅದು ಬಳ್ಳಾರಿ, ಕೊಪ್ಪಳ ಮತ್ತು ರಾಯಚೂರು ಜಿಲ್ಲೆಯ ಜನರಿಗೆ ಎಲ್ಲಾ ರೀತಿ ಕೂಡ 133 ಟಿ.ಎಂ.ಸಿ. ನೀರು ನಿಲ್ಲಬೇಕಾಗಿತ್ತು. ಆದರೆ ಇವತ್ತು 100 ಟಿ.ಎಂ.ಸಿ. ನೀರು ಮಾತ್ರ ನಿಲ್ಲುತ್ತಿದೆ. ಅದರಲ್ಲೂ 15 ರಿಂದ 20 ಟಿ.ಎಂ.ಸಿ. ನೀರು ಇವತ್ತು ಕಾರ್ಖಾನೆಗಳಿಗೆ ಉಪಯೋಗವಾಗುತ್ತಿದೆ, ಉಳಿದ 80 ಟಿ.ಎಂ.ಸಿ. ನೀರನ್ನು ಆಂಧ್ರ ಪ್ರದೇಶ ಹಾಗೂ ನಮ್ಮ 3 ಜಿಲ್ಲೆಗಳವರು ಉಪಯೋಗಿಸಬೇಕು. ತುಂಬಾ ಕಷ್ಟವಾಗುತ್ತಿದೆ. ಅದಕ್ಕೋಸ್ಕರ ನಾನು ಹೇಳುವುದೇನೆಂದರೆ ಆದಷ್ಟು ಬೇಗನೆ ಹೂಳನ್ನು ಎತ್ತುವ ಕೆಲಸವನ್ನು ಮಾಡಿ, ಇಲ್ಲವೆಂದರೆ ತುಂಗಭದ್ರಾ ನದಿಗೆ 5’ ಎತ್ತರ ತಡೆಗೋಡೆ ಕಟ್ಟುವ ಪ್ರಯತ್ನವನ್ನು ಮಾಡಿ, ಏಕೆಂದರೆ ಸರ್ಕಾರದವರು ಹೂಳು ಎತ್ತುವುದಕ್ಕೆ ಆಗುತ್ತಿಲ್ಲ, ಕೇವಲ ನೀರಾವರಿ ಮಂತ್ರಿಗಳು ಸ್ಟೇಟ್‌ಮೆಂಟ್ ಮಾಡುತ್ತಿದ್ದಾರೆ. ವಿನಹ ಕೆಲಸ ಆಗುವ ಪರಿಸ್ಥಿತಿ ಕಂಡು ಬರುತ್ತಿಲ್ಲ. ಉದಾಹರಣೆಗೆ ಆಲಮಟ್ಟಿ ನದಿ 5’ ಎತ್ತರ ತಡೆಗೋಡೆ ಕಟ್ಟಿ ಎತ್ತರಿಸಬೇಕೆಂದು ಸುಪ್ರೀಂ ಕೋರ್ಟ್ ಆದೇಶ ಮಾಡಿದ್ದರೂ ಇವತ್ತಿನವರೆಗೂ ಸರ್ಕಾರ ಮಾಡುತ್ತಿಲ್ಲ. ನಮಗೂ ಕೂಡಾ ಎಲ್ಲೋ ಒಂದು ಕಡೆ ಈ ತುಂಗಭದ್ರಾ ನದಿಯಲ್ಲಿರುವಂಥ ಹೂಳನ್ನು ಎತ್ತುವ ಕೆಲಸ ಆಗಬೇಕು, ಒಂದು ಸಾರಿ ಮಳೆ ಬಂದರೂ 1 ಟಿ.ಎಂ..ಸಿ. ನೀರು ಇವತ್ತು ಆಗುತ್ತಿಲ್ಲ. ಇರುವ 80 ಟಿ.ಎಂ.ಸಿ. 80 ಸಾರಿ ನೀರು ಬಂದರೂ ಮುಂದಿನ ಪೀಳಿಗೆಗೆ ನೀರು ಇಲ್ಲದಂತಾಗುತ್ತದೆ. ಅದಕ್ಕೋಸ್ಕರ ಸರ್ಕಾರದಿಂದ ಹೂಳನ್ನು ಎತ್ತುವ ಕೆಲಸ ಆಗಬೇಕು ಎಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಅದೇ ರೀತಿ ತುಂಗಭದ್ರಾ ಒಂದೇ ಅಲ್ಲ. ಕೃಷ್ಣಾ ಕಾವೇರಿ, ಭೀಮ ಮತ್ತು ಕಾರಂಜಿ ನದಿಗಳಾಗಿರಬಹುದು, ಈ ನದಿಗಳ ಪರಿಸ್ಥಿತಿ ಯಾವ ರೀತಿ ಇದೆ ಎಂದರೆ ಎಲ್ಲಾ ಕಡೆ ಬಹಳಷ್ಟು ಹೂಳು ತುಂಬಿದೆ. ಅದಕ್ಕೋಸ್ಕರ ಎಲ್ಲೋ ಒಂದು ಕಡೆ ನಾನು ಬರುವಂಥ ಸಂದರ್ಭದಲ್ಲಿ ಕೃಷ್ಣಾ ನದಿಗೆ ದೇವದುರ್ಗ ತಾಲ್ಲೂಕಿನ ಹತ್ತಿರ ದುಂಡಗಿಯಲ್ಲಿ ಒಂದು bridge-cum-barrage ಮಾಡುತ್ತಿದ್ದಾರೆ. 15 ವರ್ಷಗಳ ಹಿಂದೆ ಪ್ರಾರಂಭ ಮಾಡಿರುವ ಕಾಮಗಾರಿ ಇವತ್ತಿನವರೆಗೂ ಪೂರ್ಣವಾಗಿಲ್ಲ. ಜನರೆಲ್ಲರೂ ಈ ಕೆಲಸ ಪೂರ್ಣವಾಗಿಲ್ಲವೆಂದು ನೋವಿನಿಂದ ಹೇಳುತ್ತಿದ್ದಾರೆ. ಅದೇ ರೀತಿ

ತುಂಗಭದ್ರಾ ನದಿಯಲ್ಲಿರುವಂಥ ಸಿಂಗಟಾಲೂರು ಏತ ನೀರಾವರಿ ಯೋಜನೆ ಕೂಡ ಪೂರ್ಣವಾಗುತ್ತಿಲ್ಲ. Bridge-cum-barrage ಮಾಡಬೇಕಾಗಿತ್ತು. ಅದೂ ಆಗುತ್ತಿಲ್ಲ. ಎಲ್ಲೋ ಒಂದು ಕಡೆ ಮಾಡಿ ನಾವು ಏನು ಸಿಂಗಟಾಲೂರು ಏತ ನೀರಾವರಿ ಯೋಜನೆ, ಕಳಸಾ ಬಂಡೂರಿ ಯೋಜನೆ ಆಗಬೇಕೆಂದು ಉತ್ತರ ಕರ್ನಾಟಕದ ಭಾಗದಲ್ಲಿ ಸಾಕಷ್ಟು ನಮಗೆ ನಿರೀಕ್ಷೆ ಇದೆ. ನೀರಾವರಿ ಮಂತ್ರಿಗಳು ಕಳಸಾ ಬಂಡೂರಿ ಜಾರಿ ತರಬೇಕೆಂದು ಅವರೇ ಮುಂಚೂಣಿಯಲ್ಲಿದ್ದು, ಆಗಿನ ಮುಖ್ಯಮಂತ್ರಿಗಳಾದ ಗುಂಡೂರಾವ್ ಸರ್ಕಾರಕ್ಕೆ ಒಂದು ಪತ್ರವನ್ನು ಬರೆದದ್ದರು. ಆದರೆ ಇವತ್ತಿನವರೆಗೂ ಕಳಸಾ ಬಂಡೂರಿ ಯೋಜನೆ ಜಾರಿಗೆ ಬರುವಂಥದ್ದು ಆಗಲಿಲ್ಲ. ನಮ್ಮ ಮಸ್ಕಿ ನಾಲೆ ಯೋಜನೆ, ಮುಲ್ಲಾಮಾರಿ ಯೋಜನೆ, ಅಮರ್ಜಾ ಯೋಜನೆ ಆಗಿರಬಹುದು, ಬೆಣ್ಣೆತೋರಾ ಯೋಜನೆ, ಹಿರೇಹಳ್ಳ ಯೋಜನೆ ಇತ್ಯಾದಿ ಸಾಕಷ್ಟು ಯೋಜನೆಗಳು ನನೆಗುದಿಗೆ ಬಿದ್ದಿದೆ. ಆದಷ್ಟು ಬೇಗನೆ ಇವೆಲ್ಲದರ ಹೂಳನ್ನು ಎತ್ತಿಸಿ, bridge-cum-barrage ಕೆಲಸ ಆಗಬೇಕು. ಜನರಿಗೆ ನೀರಾವರಿ ಸವಲತ್ತನ್ನು ಮಾಡಿಕೊಡಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ಎಲ್ಲಾ ರೀತಿಯಾದ ಸಾಕಷ್ಟು ವಿಷಯಗಳನ್ನು ಇಟ್ಟುಕೊಂಡು ಇವತ್ತು ಬರಗಾಲಕ್ಕೋಸ್ಕರ ನಾವು ಏನು ಚರ್ಚೆಯನ್ನು ಮಾಡುತ್ತಿದ್ದೇವೆ, ಸರ್ಕಾರ ಉತ್ತರ ಕೊಡುವ ಸಂದರ್ಭದಲ್ಲಿ ಕೇಂದ್ರ ಸರ್ಕಾರದಿಂದ ಅನುದಾನ ಯಾವತ್ತು ಬರುತ್ತದೆಯೋ ಇಲ್ಲವೋ ಗೊತ್ತಿಲ್ಲ. ಕೇಂದ್ರ ಸರ್ಕಾರ ಎಷ್ಟು ಅನುದಾನ ಕೊಟ್ಟಿದೆಯೋ ಅದನ್ನು ಉಪಯೋಗಿಸಿಕೊಂಡು ನಂತರ ರಾಜ್ಯ ಸರ್ಕಾರ ಅಷ್ಟೋ ಇಷ್ಟೋ ಅನುದಾನವನ್ನು ಬಿಡುಗಡೆ ಮಾಡಬೇಕಾಗುತ್ತದೆ. ಇವತ್ತು 1 ವರ್ಷವಾಗುತ್ತಿದೆ, ರೈತರೆಲ್ಲಾ ಯಾವ ರೀತಿ ಮಾತನಾಡುತ್ತಿದ್ದಾರೆಂದರೆ ಕೇವಲ ರಾಜಕಾರಣಿಗಳೆಲ್ಲ ಮಾತನಾಡುತ್ತಿದ್ದಾರೆಯೇ ವಿನಹ ಯಾರೂ ಕೂಡಾ ಬರ ಪರಿಹಾರ ಕೊಡುವ ಪರಿಸ್ಥಿಯಲ್ಲಿ ಇಲ್ಲ ಸರ್ಕಾರ ಪರಿಹಾರ ಕೊಡುವ ಪರಿಸ್ಥಿತಿಯಲಿ ಇಲ್ಲ ಎಂದು ಜನರು ಹೇಳುತ್ತಿದ್ದಾರೆ. ರಾಜ್ಯ ಸರ್ಕಾರಕ್ಕೆ ಜನರ ಬಗ್ಗೆ. ರೈತರ ಪರವಾಗಿ ಕಳಕಳಿ ಇದ್ದರೆ, ಬರಗಾಲದಿಂದ ನಷ್ಟವಾಗಿರುವ ರೂ. 1 ಲಕ್ಷ ಕೋಟಿ ಬಜೆಟ್‌ನಲ್ಲಿ 5%, 6% ಅಥವಾ 10%

ಹಣ ರೈತರಿಗೆ ಕೊಡುವ ಕೆಲಸ ಆಗಬೇಕು ಎಂದು ನಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ಬರಗಾಲಕ್ಕೋಸ್ಕರ ಏನು ಹಣವನ್ನು ಇವತ್ತು ವಿನಿಯೋಗಿಸಬೇಕಾಗಿತ್ತೋ ಅದನ್ನು ವಿನಿಯೋಗಿಸಬೇಕು. ಸಾಕಷ್ಟು ದನಕರುಗಳನ್ನು ಕಸಾಯಿಖಾನೆಗೆ ಕಳುಹಿಸುತ್ತಿರುವುದು ತಪ್ಪಬೇಕು. ಇವತ್ತು ಕುಡಿಯುವುದಕ್ಕೆ ನೀರಿಲ್ಲ, ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ, ಇಂಥ ಪರಿಸ್ಥಿತಿಯನ್ನು ಸರ್ಕಾರ ಗಂಭೀರವಾಗಿ ತೆಗೆದುಕೊಂಡು ಆದಷ್ಟು ಬೇಗನೆ ಬರ ಪರಿಹಾರವನ್ನು ನೀಡಬೇಕೆಂದು ಹೇಳುತ್ತಾ ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತಾ ನನ್ನ ಮಾತನ್ನು ಮುಕ್ತಾಯ ಮಾಡುತ್ತಿದ್ದೇನೆ.

ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ (ದೇವರಹಿಪ್ಪರಗಿ) : ಸನ್ಮಾನ್ಯ ಉಪಾಧ್ಯಕ್ಷರೆ, ಬರಗಾಲದ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿರುವುದಕ್ಕಾಗಿ ತಮಗೆ ವಂದಿಸುತ್ತಾ, ಕರ್ನಾಟಕ ರಾಜ್ಯದ ಬರಗಾಲದ ಅಂಕಿ-ಸಂಖ್ಯೆಗಳನ್ನು ತೆಗೆದರೆ ಅತಿ ಹೆಚ್ಚು ಗಂಭೀರವಾದ ಬರಗಾಲವನ್ನು ಎದುರಿಸುತ್ತಿರುವ ಜಿಲ್ಲೆ ಈ ರಾಜ್ಯದಲ್ಲಿ ಇದ್ದರೆ ಅದು ಬಿಜಾಪುರ ಜಿಲ್ಲೆ, ಇಡೀ ದೇಶದಲ್ಲಿ 3 ಕಾಲ ಇದ್ದರೆ ಬಿಜಾಪುರ ಜಿಲ್ಲೆಯಲ್ಲಿ 4 ಕಾಲ ಇದೆ ಎಂದು ಹೇಳುತ್ತಾರೆ. ವಾತಾವರಣದಲ್ಲಿ ಚಳಿಗಾಲ, ಮಳೆಗಾಲ, ಬೇಸಿಗೆ ಕಾಲ ಇದರ ಜೊತೆಗೆ ಇನ್ನೂ ಒಂದು ಕಾಲ ನಮ್ಮ ರಾಜ್ಯದಲ್ಲಿ ನಮ್ಮ ಜಿಲ್ಲೆಯಲ್ಲಿ ಯಾವಾಗಲೂ ಇರುವುದೇನೆಂದರೆ ಅದು ಬರಗಾಲ. ಬಿಜಾಪುರ ಜಿಲ್ಲೆ ಶಾಶ್ವತವಾಗಿ ಬರಗಾಲಕ್ಕೆ ತುತ್ತಾಗಿರುವ ಜಿಲ್ಲೆ, ಇತಿಹಾಸದ ಪುಟಗಳಲ್ಲಿ ಕೂಡಾ ಬ್ರಿಟಿಷರ ಕಾಲದಿಂದ ಇದನ್ನು ಹೇಳಿದ್ದಾರೆ, ಇಷ್ಟಲ್ಲದೆ ನಮ್ಮ ಜಿಲ್ಲೆಗೆ ಇನ್ನೊಂದು ಹೆಸರಿದೆ, 5 ನದಿಗಳು ಹರಿಯುತ್ತಿರುವ ಪಂಜಾಬ್ ಎಂದರೆ ಬಿಜಾಪುರ ಎಂದು ಹೇಳಿದ್ದಾರೆ. 5 ನದಿಗಳು ಹರಿಯುತ್ತಿದ್ದರೂ ಕೂಡ ಕುಡಿಯುವ ನೀರಿಗೆ ಅತಿ ಹೆಚ್ಚು ಹಾಹಾಕಾರ ಇರುವಂಥ ಕರ್ನಾಟಕದಲ್ಲಿ ಯಾವುದಾದರೂ ಜಿಲ್ಲೆ ಇದ್ದರೆ ಇವತ್ತಿನ ಪರಿಸ್ಥಿತಿಯಲ್ಲಿ ಅದು ಬಿಜಾಪುರ ಜಿಲ್ಲೆ. ಬಿಜಾಪುರ ಜಿಲ್ಲೆಯ 299 ಗ್ರಾಮಗಳಲ್ಲಿ ಇವತ್ತು ಗಂಭೀರವಾಗಿ ಕುಡಿಯುವ ನೀರಿನ ಪರಿಸ್ಥಿತಿ ಉಂಟಾಗಿದೆ. ನನ್ನ ಮತ ಕ್ಷೇತ್ರ ದೇವರಹಿಪ್ಪರಗಿಯಲ್ಲಿ ಸುಮಾರು 17 ಬೋರ್‌ವೆಲ್‌ಗಳನ್ನು ಹಾಕಿಸಿದ್ದೇನೆ.

ಆದರೂ ಕೂಡ ಒಂದು ಬೋರ್‌ವೆಲ್‌ನಲ್ಲೂ ನೀರು ಬರುತ್ತಿಲ್ಲ. ಅಂತರ್ಜಲ ಮಟ್ಟ ಸಂಪೂರ್ಣ ಕುಸಿದು ಹೋಗುತ್ತಿದೆ. ನಮ್ಮ ಬಿಜಾಪೂರ ಜಿಲ್ಲೆಯಲ್ಲಿ 2010–11ರಲ್ಲಿ ಮುಂಗಾರು ಮಳೆ ಬರಲಿಲ್ಲ. ಮುಂಗಾರು ಮಳೆ ಸಂಪೂರ್ಣವಾಗಿ ನಾಶವಾಗಿ ಹೋಯಿತು. ಅದೇ ರೀತಿಯಾಗಿ ಹಿಂಗಾರು ಮಳೆ ಬರಲಿಲ್ಲ. ಬೆಳೆ ಸಂಪೂರ್ಣವಾಗಿ ನಾಶವಾಯಿತು. ಈ ವರ್ಷ ಜುಲೈ ಒಳಗಾಗಿ ಮಳೆ ಬರುತ್ತದೆ ಎಂದು ರೈತರು ಆಕಾಶದ ಕಡೆ ನೋಡುತ್ತಿದ್ದರು. ಆದರೆ ಜುಲೈ 16ನೇ ತಾರೀಖಿನವರೆಗೂ ನಮ್ಮ ಜಿಲ್ಲೆಯಲ್ಲಿ ಒಂದು ಹನಿ ಮಳೆ ಬರಲಿಲ್ಲ. ಸನ್ಮಾನ್ಯ ಉಸ್ತುವಾರಿ ಸಚಿವರು ಒಂದು ಸಭೆ ಕರೆದಿದ್ದರೂನೂ ಆ ಸಭೆಗೆ ನಾನು ಕೂಡ ಹೋಗಿದ್ದೆ. ಸಭೆಗೆ ಹೋದಾಗ ನಾನು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದೆ. ನಮ್ಮ ಜಿಲ್ಲೆಯ ಜನ ಸುಮಾರು ರೈತರು 9 ಕೋಟಿ ರೂಪಾಯಿಗಳ ವಿಮಾ ಹಣವನ್ನು ಕಟ್ಟಿದ್ದಾರೆ. ರಾಜ್ಯ ಸರ್ಕಾರ ತನ್ನ ಪಾಲಿನ 9 ಕೋಟಿ ರೂಪಾಯಿ ವಿಮಾ ಹಣವನ್ನು ಕಟ್ಟಬೇಕು. 9 ಕೋಟಿ ವಿಮಾ ಹಣವನ್ನು ಬಿಡುಗಡೆ ಮಾಡಬೇಕೆಂದು ವಿನಂತಿ ಮಾಡಿದೆ. ಆದರೆ ಸನ್ಮಾನ್ಯ ಉಸ್ತುವಾರಿ ಸಚಿವರಿಂದ ಸಮಂಜಸ ಉತ್ತರ ಸಿಗದಿದ್ದಾಗ ಜಿಲ್ಲೆಯಲ್ಲಿರುವ ಅನೇಕ ಜನ ರೈತರು, ರೈತ ಮುಖಂಡರು ಸೇರಿ ರಾಜ್ಯ ಸರ್ಕಾರವನ್ನು ಎಚ್ಚರಗೊಳಿಸುವುದಕ್ಕೋಸ್ಕರ ಪ್ರಬಲವಾದ ಹೋರಾಟ ಮಾಡಲು ಸಿದ್ದರಿದ್ದೇವೆಂದು ಒಗ್ಗೂಡಿ ನನ್ನನ್ನು ಸಂಪರ್ಕ ಮಾಡಿ, ನೀವು ನೇತೃತ್ವವನ್ನು ತೆಗೆದುಕೊಳ್ಳಬೇಕು. ನಮ್ಮ ಬಳಿ ವಾಹನಗಳಿಲ್ಲ, ಜಾನುವಾರಗಳಿಗೆ ಮೇವು ಇಲ,. ಆದರೆ ವಿಶೇಷವಾದ ಹೋರಾಟ ಮಾಡಲು ತಯಾರಿದ್ದೇವೆಂದು ಹೇಳಿದರು. ನಮ್ಮ ಜಿಲ್ಲೆಯಲ್ಲಿ ಬಂಡಿಯಾತ್ರೆ ಮಾಡಬೇಕೆಂದು ಎಲ್ಲಾ ರೈತರು ನನ್ನನ್ನು ಸಂಪರ್ಕ ಮಾಡಿದಾಗ ನಾನೂ ಒಪ್ಪಿದ್ದು, ನಮ್ಮ ಜಿಲ್ಲೆಯ ಲಕ್ಷಾಂತರ ಜನ ರೈತರು ಜುಲೈ 16 ರಿಂದ 23 ರವರೆಗೆ ಒಂದು ವಿನೂತನ ರೀತಿಯಲ್ಲಿ ಸರ್ಕಾರದ ಗಮನವನ್ನು ಸೆಳೆಯಲು ಸಾವಿರಾರು ಎತ್ತಿನ ಬಂಡಿ ಕಟ್ಟಿಕೊಂಡು ದೇವರ ಹಿಪ್ಪರಗಿಯಿಂದ ಯಾತ್ರೆ ಮಾಡಿದೆವು. ಎತ್ತುಗಳಿಗೆ ನಮ್ಮ ಕಡೆ ಬಸವಣ್ಣ ಎಂದು ಪೂಜಿಸುತ್ತೇವೆ. ಅಂತಹ ಬಸವಣ್ಣನಿಗ ತಿನ್ನಲು ಮೇವು ಇಲ್ಲ. ರೈತರ ದವಸ ಧಾನ್ಯ ಖಾಲಿಯಾಗಿದೆ. ನಾವು ಯಾರನ್ನು ಕೇಳಬೇಕು? ಸರ್ಕಾರ

ನಮ್ಮ ಕಡೆಗೆ ಕಣ್ಣೆತ್ತಿ ನೋಡುತ್ತಿಲ್ಲ. ಅದಕ್ಕೆ ಬಂಡಿಯಾತ್ರೆ ಮಾಡುತ್ತೇವೆಂದು ರೈತರು ತಯಾರಾಗಿ, ದೇವರ ಹಿಪ್ಪರಿಗಿಯಲ್ಲಿ ಸುಮಾರು ಒಂದು ಸಾವಿರ ಎತ್ತಿನ ಬಂಡಿಗಳನ್ನು ತೆಗೆದುಕೊಂಡು ಸುಮಾರು 25–30 ಸಾವಿರ ಜನ ರೈತರು ಜುಲೈ 16 ರಂದು ಬಂಡಿಯಾತ್ರೆ ಪ್ರಾರಂಭ ಮಾಡಿದರು. ಮೆರವಣಿಗೆ ಮುಖಾಂತರ ರೈತರು ಸರ್ಕಾರವನ್ನು ಆಗ್ರಹ ಮಾಡುವ ಸಂದರ್ಭದಲ್ಲಿ ನನ್ನ ಕ್ಷೇತ್ರದ ದೇವರ ಹಿಪ್ಪರಗಿಯೂ ಅಕ್ಕಪಕ್ಕ ಗ್ರಾಮದ ಮಹಿಳೆಯರು ಕೈ ಮಾಡಿ "ಅಪ್ಪ ಕುಡಿಯಲು ನಮಗೆ ನೀರಿಲ್ಲ" ಎಂದು ಕೇಳುತ್ತಿದ್ದರು. "ತಾಯಿ ನಾವು ನೀರು ತರಲು ಹೋಗುತ್ತಿದ್ದೇವೆ" ಎಂದು ರೈತರು ಹೇಳುತ್ತಿದ್ದರು. ಅಧ್ಯಕ್ಷರೆ, ಪವಾಡವೆಂದೇ ಹೇಳಬಹುದು. ಬಸವಣ್ಣನನ್ನು ದೇವರೆಂದು ನಮ್ಮ ರೈತರು ಪೂಜಿಸುತ್ತಾರೆ. ಎತ್ತು ರೈತರನ ಆಪ್ತ ಸ್ನೇಹಿತ. ದೇವರ ಹಿಪ್ಪರಿಗಿಯಿಂದ ಇನ್ನೂ 15 ಕಿ.ಮೀ. ಮುಂದೆ ಹೋಗಿರಲಿಲ್ಲ. ಒಂದು ಸಂತೋಷದ ವಿಚಾರ ಹೇಳಬೇಕೆಂದರೆ, ದೇವರ ಹಿಪ್ಪರಗಿ ಗ್ರಾಮಕ್ಕೆ ಆ ದಿನ 111 ಮಿ.ಮೀಟರ್ ಮಳೆಯಾಯಿತು. ಸರ್ಕಾರ ರೈತರ ಸಂಕಷ್ಟಕ್ಕೆ ಕಣ್ಣು ತೆರೆಯಲಿಲ್ಲ. ಅವತ್ತು ನಮ್ಮ ಕ್ಷೇತ್ರಕ್ಕೆ ಮಳೆರಾಯ ಕಣ್ಣು ತೆರೆದ. ಬಸವಣ್ಣನ ನೋವು, ಕೂಗು ಆ ಮಳೆರಾಯನಿಗೆ ಕೇಳಿಸಿತ್ತು. ಮಳೆ ಬಂತು. ಅಲ್ಲಿಂದ ಹೊರಟ ಬಂಡಿಯಾತ್ರೆಯಲ್ಲಿ ಲಕ್ಷಾಂತರ ಜನ ರೈತರು ಬಂದು ಪಕ್ಷಾತೀತವಾಗಿ ಯಾವುದೇ ಪಕ್ಷ–ಪಂಗಡವಿಲ್ಲದೆ, ಜಾತಿ–ಭೇದವಿಲ್ಲದೆ ಎತ್ತುಗಳನ್ನು ಕಟ್ಟಿಕೊಂಡು 180 ಕಿ.ಮೀ. ಬಂಡಿಯಾತ್ರೆ ಮಾಡಿ ಸರ್ಕಾರಕ್ಕೆ ಆಗ್ರಹ ಮಾಡಿದರು. ಆ ಬಂಡಿಯಾತ್ರೆಯ ಸಂದರ್ಭದಲ್ಲಿ ಪ್ರತಿ ದಿನ ನಾನು ರೈತರ ಜೊತೆಗಿದ್ದೆ. ರೈತರ ಮನೆಯೆಲ್ಲಾ ಖಾಲಿಯಾಗಿದೆ. ರೈತರ ಮನೆಯಲ್ಲಿ ಬಸವಣ್ಣನಿಗೆ ಮೇವು ಹಾಕಲು ಕಣಿಕೆ ಇಲ್ಲ. ಆ ಸಂದರ್ಭದಲ್ಲಿ ರೈತರ ಪರವಾಗಿ ಜಿಲ್ಲೆಯ ಮೂರು ತಾಲ್ಲೂಕುಗಳ ತಹಶೀಲ್ದಾರರುಗಳನ್ನು ವಿನಂತಿ ಮಾಡಿದೆ. ರೈತರು ಹೋರಾಟ ಮಾಡುತ್ತಿದ್ದಾರೆ. ರೈತರ ಬಂಡಿಯಾತ್ರೆಯಲ್ಲಿ ಬರುವ ಜಾನುವಾರುಗಳಿಗೆ ದಯಮಾಡಿ ಮೇವು ಕೊಡಿ ಎಂದು ಕೇಳಿದೆ. ಒಬ್ಬರು ತಹಶೀಲ್ದಾರರು ಒಪ್ಪಿ ಕೊಟ್ಟರು. ಆದರೆ ಇನ್ನಿಬ್ಬರು **stock** ಇಲ್ಲ ಕೊಡಲು ಆಗುವುದಿಲ್ಲವೆಂದು ಹೇಳಿದರು. ಆದರ ನಂತರ ಸುಮಾರು ಒಂದು ಸಾವಿರ ರೈತರು 7 ದಿನ ಬಂಡಿಯಾತ್ರೆ ಮಾಡಿಕೊಂಡು

ಬರುವ ಸಂದರ್ಭದಲ್ಲಿ ಹಳ್ಳಿಗಳಲ್ಲಿ ನೋಡಿರುವ ಕಷ್ಟಗಳು ಎಂದರೆ, ನಮ್ಮ ಜಿಲ್ಲೆಯ ರೈತ ಕಣ್ಣೀರು ಇಡುತ್ತಿದ್ದಾನೆ. ನಮ್ಮ ಕಡೆ ಮನೆಯಲ್ಲಿ ಒಂದು ವರ್ಷದ ದವಸ ಧಾನ್ಯ stock ಇಡುತ್ತಾರೆ. ನಮ್ಮ ಜಿಲ್ಲೆಯಲ್ಲಿ ಗೋಧಿ, ಜೋಳ ಬೆಳೆಯುತ್ತಾರೆ. ಹೋದ ವರ್ಷ ಸಂಪೂರ್ಣ ಬೆಳೆ ಬರಲಿಲ್ಲ. ಸಂಗ್ರಹಿಸಿಡಲಾಗಿದ್ದ ಎಲ್ಲಾ ದವಸ ಧಾನ್ಯಗಳು ಖಾಲಿಯಾಗಿವೆ. ಬಣವೆಗಳೆಲ್ಲಾ ಖಾಲಿಯಾಗಿವೆ. ಒಂದೆರಡು ದಿನ ಬಂಡಿಯಾತ್ರೆಯಲ್ಲಿ ಹೋಗುವ ಜಾನುವಾರುಗಳಿಗೆ ಮೇವು ಇರಲಿಲ್ಲ. ಮೇವು ಖರೀದಿ ಮಾಡಬೇಕೆಂದು ನಾನು ಸಾಕಷ್ಟು ಪ್ರಯತ್ನ ಮಾಡಿದೆ. ಒಂದು ಟ್ರ್ಯಾಕ್ಟರ್ ಮೇವಿಗೆ ರೂ. 10 ಸಾವಿರ ಕೊಟ್ಟು ಖರೀದಿ ಮಾಡಲಾಗದ ಸ್ಥಿತಿಯಲ್ಲಿ ಇಂದು ನಮ್ಮ ಜಿಲ್ಲೆ ಇದೆ? ಇದರ ಗಂಭೀರತೆಯನ್ನು ಸರ್ಕಾರ ಅರಿತುಕೊಳ್ಳಬೇಕಾಗಿದೆ. 12 ತಿಂಗಳು ಕಳೆದು 13 ತಿಂಗಳಿಗೆ ಕಾಲಿಟ್ಟರೂ ಕೂಡ ಸರ್ಕಾರ ಕೇವಲ ಸಾಂತ್ವನದ ನುಡಿಗಳನ್ನು ಮಾತ್ರ ರೈತನಿಗೆ ಹೇಳಿದ್ದು. ಈ ಸರ್ಕಾರ ಯಾವುದೇ ಕಾರಣಕ್ಕೂ ಒಂದೇ ಒಂದು ರೂ. ಹಣವನ್ನು ರೈತನಿಗೆ ನೇರವಾಗಿ ಕೊಡಲಿಲ್ಲ. 22 ರಿಂದ 23ನೇ ತಾರೀಖಿನವರೆಗೆ ಸುಮಾರು 1 ಸಾವಿರ ಜನ ರೈತರು ಉಪವಾಸ ಕುಳಿತಿದ್ದರು. ಅಧ್ಯಕ್ಷರೆ, ಆ ಸಂದರ್ಭದಲ್ಲಿ ಸುಮಾರು ಒಂದೂವರೆ ಲಕ್ಷ ರೈತರ ಜನ ಸಮೂಹ ಪಕ್ಷಾತೀತವಾಗಿ, ಜಾತ್ಯಾತೀತವಾಗಿ ಹರಿದು ಬಂದಿತು. ಅವರೆಲ್ಲರದು ಒಂದೇ ಕೂಗು, "ಸ್ವಾಮಿ, ನಮಗೆ ಅನ್ಯಾಯ ಕೊಡಿ ಎಂದು ಸರ್ಕಾರಕ್ಕೆ ಕೂಗನ್ನು ಮುಟ್ಟಿಸಬೇಕೆಂಬ ಕಾರಣಕ್ಕೆ ಅವರೆಲ್ಲರೂ ಅಲ್ಲಿ ಕುಳಿತಿದ್ದರು ಅಧ್ಯಕ್ಷರೆ, ನಾನು ಪತ್ರಿಕಾ ಮಾಧ್ಯಮ ಮತ್ತು ದೂರದರ್ಶನ ಮಾಧ್ಯಮದವರಿಗೆ ಧನ್ಯವಾದಗಳನ್ನು ಹೇಳುತ್ತೇನೆ. ರೈತನ ಸಮಾವೇಶಗಳು. ರೈತರ ಬೇಡಿಕೆಗಳು ಬಂದಾಗ ಅನೇಕ ಸಾರಿ ನಿರ್ಲಕ್ಷವಾಗುತ್ತದೆ. ಆದರೆ, ನಮ್ಮ ಜಿಲ್ಲೆಯ ದೂರದರ್ಶನ ಹಾಗೂ ಪತ್ರಿಕಾ ಮಿತ್ರರು ನೇರವಾಗಿ ಟಿ.ವಿ. ಹಾಗೂ ಪತ್ರಿಕೆಗಳ ಮುಖಾಂತರ ರೈತರ ನಿಜವಾದ ನೋವನ್ನು ಸರ್ಕಾರಕ್ಕೆ ಮುಟ್ಟಿಸುವ ಪ್ರಯತ್ನ ಮಾಡಿದ್ದಾರೆ. ಅವರಿಗೆ ರೈತರ ಪರವಾಗಿ ಧನ್ಯವಾದ ಅರ್ಪಿಸುತ್ತೇನೆ. ಅಷ್ಟೇ ಅಲ್ಲದೆ, ನಿನ್ನೆ 12 ಗಂಟೆಯ ಸುಮಾರಿಗೆ ನಾವೆಲ್ಲಾ ಕಾಯುತ್ತಿದ್ದೆವು. ಯಾವುದೇ

ಕಾರಣಕ್ಕೂ ನಾವು ನಮ್ಮ ಉಪವಾಸ ಸತ್ಯಾಗ್ರಹವನ್ನು ಹಿಂತೆಗೆದುಕೊಳ್ಳುವುದಿಲ್ಲವೆಂದು ರೈತರೆಲ್ಲ ತೀರ್ಮಾನ ಮಾಡಿದ್ದರು. ನಾನು ಆ ಮಹಾಸಭೆಯಲ್ಲಿ ಎಲ್ಲಿಯವರೆಗೆ ನೀವು ರೈತರು ನಿರ್ಣಾಯ ತೆಗೆದುಕೊಳ್ಳುತ್ತೀರಿ, ಅದಕ್ಕೆ ನಾನು ಬದ್ಧನಾಗಿದ್ದೇನೆಂದು ಹೇಳಿದ್ದೆ. ನಾನು ನನ್ನ ಶಾಸಕ ಮಿತ್ರರಿಗೆ ಧನ್ಯವಾದ ಹೇಳುತ್ತೇನೆ. ಆ ಸಂದರ್ಭದಲ್ಲಿ ಅಲ್ಲಿ ನಡೆದ ಸಮಾವೇಶ, ಉಪವಾಸ ಸತ್ಯಾಗ್ರಹದ ಬಗ್ಗೆ ಸರ್ಕಾರದ ಗಮನ ಸೆಳೆದಿದ್ದು, ಉಪ ಮುಖ್ಯಮಂತ್ರಿಗಳಾದ ಮತ್ತು ರಾಜ್ಯದ ಮಹಾನಾಯಕರಾದ ಸನ್ಮಾನ್ಯ ಈಶ್ವರಪ್ಪ ರವರು ಅಷ್ಟೆ ಉತ್ತಮ ರೀತಿಯಲ್ಲಿ ಸ್ಪಂದನೆ ಮಾಡಿ ರೈತರು ಮತ್ತು ಶಾಸಕರು ಉಪವಾಸ ಕುಳಿತಿರುವುದು ನನ್ನ ಗಮನಕ್ಕೆ ಬಂದಿದೆ. ಸದನ ನಡೆಯುತ್ತಿರುವುದರಿಂದ ಅಲ್ಲಿ ಹೋಗಲು ಸಾಧ್ಯವಿಲ್ಲವಾದ್ದರಿಂದ ಈ ಸದನದ ಮುಖಾಂತರ ರೈತರನ್ನು ವಿನಂತಿ ಮಾಡುತ್ತೇನೆ. ದಯಮಾಡಿ ಉಪವಾಸದಿಂದ ಹೊರ ಇರಬೇಕು ಮತ್ತು ಅವರ ಬೇಡಿಕೆಗಳು ಏನಿವೆ ಎಂಬುದನ್ನು ಸದನದಲ್ಲಿ ತಿಳಿಸಿಬೇಕೆಂದು ಅವರು ವಿನಂತಿ ಮಾಡಿದಾಗ ಸಮಾವೇಶ ಸ್ಥಳದಲ್ಲಿ ಅಳವಡಿಸಿದ್ದ ದೂರದರ್ಶನದಲ್ಲಿ ಅವರ ಮಾತುಗಳನ್ನು ಕೇಳಿದ ಮೇಲೆ ನಮ್ಮ ರೈತರು ನಿರ್ಧಾರಕ್ಕೆ ಬಂದರು. ಅದರೂ ಕೂಡ ರೈತರಲ್ಲಿ ಒಂದು ಮನವಿಯಿತ್ತು. ಸರ್ಕಾರದ ಪರವಾಗಿ ಕನಿಷ್ಟ ಪಕ್ಷ ಒಬ್ಬ ಅಧಿಕಾರಿಯೂ ಬರಲಿಲ್ಲವೆಂದು, ತಕ್ಷಣ ಉಪ ಮುಖ್ಯಮಂತ್ರಿಯಾಗಿ ಡಿ.ಸಿ. ರವರಿಗೆ ಹೇಳಿ, ಜಿಲ್ಲಾಧಿಕಾರಿಗಳು ಬಂದು ದಾಖಲೆಗಳನ್ನು ಸರ್ಕಾರಕ್ಕೆ ಮುಟ್ಟಿಸುವುದಕ್ಕಾಗಿ ಪ್ರಾಮಾಣಿಕ ಮಾತುಗಳನ್ನು ಹೇಳಿದ್ದರಿಂದ ಉಪ ಮುಖ್ಯಮಂತ್ರಿಗಳ ಮಾತಿಗೆ ಬೆಲೆ ಕೊಟ್ಟು ಉಪವಾಸ ಸತ್ಯಾಗ್ರಹ ಹಾಗೂ ಬಂಡಿಯಾತ್ರೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದ್ದಾರೆ. ಸುಮಾರು ಒಂದು ಸಾವಿರ ಎತ್ತಿನ ಬಂಡಿಗಳು ಇವತ್ತಿಗೂ ಸಹ ಮುದ್ದೇಬಿಹಾಳ ಬೀಡು ಬಿಟ್ಟಿದೆ. ಒಂದು ವೇಳೆ ಈ ಅಧಿವೇಶನದಲ್ಲಿ ಸರ್ಕಾರ ಅವರ ಬೇಡಿಕೆಗಳನ್ನು ಈಡೇರಿಸದಿದ್ದರೆ ಮತ್ತೆ ಇಡೀ ಜಿಲ್ಲೆಯಾದ್ಯಂತ ಬಂಡಿಯಾತ್ರೆಯ ಹೋರಾಟ ಮಾಡುವ ತೀರ್ಮಾನ ಮಾಡಿದ್ದಾರೆ. ಅದಕ್ಕಾಗಿ ಅವರು ಇಟ್ಟಿರುವ ಬೇಡಿಕೆಗಳನ್ನು ನಾನು ಸರ್ಕಾರಕ್ಕೆ ತಮ್ಮ ಮೂಲಕ ಒಪ್ಪಿಸುವುದಕ್ಕೆ ರೈತರ ಪ್ರತಿನಿಧಿಯಾಗಿ, ನನ್ನ ಕ್ಷೇತ್ರದ ಒಬ್ಬ

ಶಾಸಕನಾಗಿ ಇಲ್ಲಿ ಬಂದು ನಿಂತಿದ್ದೇನೆ. ಅವರ ಬೇಡಿಕೆಗಳನ್ನು ಒಂದು ಸಾರಿ ಓದಿ ತಮ್ಮ ಮುಖಾಂತರ ಸರ್ಕಾರಕ್ಕೆ ಸಲ್ಲಿಕೆ ಮಾಡುವುದಕ್ಕೆ ಇಚ್ಛಿಸುತ್ತೇನೆ. ಬಿಜಾಪುರ ಜಿಲ್ಲೆಯ ರೈತರು ಬಂಡಿಯಾತ್ರೆಯ ಬೃಹತ್ ಸಮಾವೇಶದಲ್ಲಿ ಸುಮಾರು ಒಂದೂವರೆ ಲಕ್ಷ ರೈತ ಬಂಧುಗಳು ತೆಗೆದುಕೊಂಡಂತಹ ನಿರ್ಣಯಗಳು ಈ ರೀತಿ ಇದೆ. ಮಾನ್ಯ ಗೌರವಾನ್ವಿತ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು ಇವರಿಗೆ, ಮಾನ್ಯ ಜಿಲ್ಲಾಧಿಕಾರಿಗಳೂ, ಬಿಜಾಪುರ ಇವರ ಮುಖಾಂತರ,

ಉಪಾಧ್ಯಕ್ಷರು ; ಸಮಯ ಕಡಿಮೆ ಇರುವುದರಿಂದ ನೀವು ಪ್ರಮುಖ ವಿಷಯಗಳನ್ನು ಮಾತ್ರ ಹೇಳಿ.

ಶ್ರೀ ಎ.ಎಸ್. ಪಾಟೀಲ್ ನಾಡಹಳ್ಳಿ : ಮಾನ್ಯ ಉಪಾಧ್ಯಕ್ಷರೆ, ನೀವು ನನಗೆ ನೀಡಿರುವ ಸಮಯದಲ್ಲಿ ಮುಗಿಸುತ್ತೇನೆ. ನಾನು ಎಂದು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ಏಕೆಂದರೆ ರೈತರ ಪರವಾಗಿ ನಾನಿಲ್ಲಿ ಬಂದಿದ್ದೇನೆ.

ವಿಷಯ: ಬಿಜಾಪುರ ಜಲ್ಲೆಯ ರೈತರ ಬರ ಪರಿಹಾರ ಹಾಗೂ ನೀರಾವರಿಗೆ ಆಗ್ರಹಿಸಿ ಹಮ್ಮಿಕೊಂಡ ಬಂಡಿಯಾತ್ರೆಯ ಬೇಡಿಕೆ ಪಟ್ಟಿ ಸಲ್ಲಿಸುವ ಕುರಿತು. ತಕ್ಷಣ ಜಿಲ್ಲೆಯ ರೈತರಿಗೆ ಸರ್ಕಾರ ನೀಡಬೇಕಾದ ಪರಿಹಾರಗಳ ಬೇಡಿಕೆ ಪಟ್ಟಿ ಇಂತಿದೆ.

1. 2011–12ನೇ ಸಾಲಿನಲ್ಲಿ ರೈತರು ಪಡೆದ ಬೆಳೆ ಸಾಲವನ್ನು ಸಂಪೂರ್ಣ ಮನ್ನಾ ಮಾಡಬೇಕೆಂಬ ಆಗ್ರಹವನ್ನು ನಮ್ಮ ಜಿಲ್ಲೆಯ ರೈತರು ಸಮಾವೇಶದಲ್ಲಿ ನಿರ್ಣಯ ತೆಗೆದುಕೊಂಡಿದ್ದಾರೆ.
2. 2011–12ನೇ ಸಾಲಿನಲ್ಲಿ ನೀಡಲಾಗಿರುವ ರೈತರ ಬೆಳೆ ವಿಮೆ ಹಣವನ್ನು ಕೂಡಲೇ ಬಿಡುಗಡೆ ಮಾಡಬೇಕು.
3. 2011–12ನೇ ಸಾಲಿನಲ್ಲಿ ಬರಗಾಲದಿಂದ ನಷ್ಟಕ್ಕೊಳಗಾದ ರೈತರ ಬೆಳಗಳಿಗೆ ಪರಿಹಾರವನ್ನು ಈ ಕೂಡಲೇ ಬಿಡುಗಡೆ ಮಾಡಬೇಕೆಂದು ಆಗ್ರಹಸಿದ್ದಾರೆ.

2011–12ನೇ ಸಾಲಿನಲ್ಲಿ ನಷ್ಟಕ್ಕೆ ಒಳಗಾದ ತೋಟಗಾರಿಕಾ ಬೆಳೆಗಳಾದ ನಿಂಬೆ, ಬಾಳೆ, ದ್ರಾಕ್ಷಿ, ಕಬ್ಬು, ದಾಳಿಂಬೆ ಇತ್ಯಾದಿ ಬೆಳೆಗಳ ನಾಶಗಳ ಕುರಿತು ವೈಜ್ಞಾನಿಕ ಸಮೀಕ್ಷೆ ನಡೆಸಿ ಹಾನಿಯ ಸಂಪೂರ್ಣ ಹಣವನ್ನು ರೈತರಿಗೆ ನೀಡಬೇಕು ಎನ್ನತಕ್ಕ ನಿಲುವನ್ನು ರೈತರ ಸಮಾವೇಶದಲ್ಲಿ ತೆಗೆದುಕೊಂಡಿದೆ. ಅದೇ ರೀತಿಯಾಗಿ 2012–13ನೇ ಸಾಲಿಗೆ ಅಂದರೆ ಈ ವರ್ಷ ನಮ್ಮ ರೈತನ ಮನೆಯಲ್ಲಿ ಸ್ವಲ್ಪವೂ ಬೇಳೆಕಾಳು ಇಲ್ಲ. ಜೋಳ ಇಲ್ಲ, ಗೋಧಿ ಇಲ್ಲ, ಬೇಳೆ ಇಲ್ಲ. ಎಣ್ಣೆ ಇಲ್ಲ. ರೈತರ ಮನೆಯಲ್ಲಿ ಎಲ್ಲಾ ಖಾಲಿ ಆಗಿದೆ. ಅದಕ್ಕೋಸ್ಕರ 2012–13ನೇ ಸಾಲಿನಲ್ಲಿ ರೈತ ಹಾಗೂ ಕೃಷಿ ಕಾರ್ಮಿಕರ ಕುಟುಂಬಗಳಿಗೆ ಎಪಿಎಲ್, ಬಿಪಿಎಲ್ ಅಲ್ಲದೇ ಎಲ್ಲ ಕುಟುಂಬಗಳಿಗೆ ಸಬ್ಸಿಡಿ ದರದಲ್ಲಿ ಒಂದು ವರ್ಷದವರೆಗೆ ಆಹಾರ ಧಾನ್ಯಗಳನ್ನು ಪೂರೈಸಬೇಕು. ಅದೇ ರೀತಿಯಾಗಿ 2012–13ನೇ ಸಾಲಿನಲ್ಲಿ, ಈ ವರ್ಷ ಮಳೆ ಆಗಿ ಬೆಳೆ ಬಂದು ಮೇವು ಬರುವವರೆಗೆ ಅಂದರೆ ಒಂದು ವರ್ಷದವರೆಗೆ ರೈತರ ಜಾನುವಾರುಗಳನ್ನು ರಕ್ಷಿಸಲು ಮೇವು ಖರೀದಿಗಾಗಿ ಕನಿಷ್ಠ ಪರಿಹಾರದ ಹಣವನ್ನು ನೇರವಾಗಿ ರೈತರಿಗೆ ನೀಡಬೇಕು ಎನ್ನತಕ್ಕಂತಹ ಅಗ್ರಹವನ್ನು ನಮ್ಮ ರೈತರು ತೆಗೆದುಕೊಂಡಿದ್ದಾರೆ. ಅದೇ ರೀತಿಯಾಗಿ ರೈತ ಹಾಗೂ ಕೃಷಿ ಕಾರ್ಮಿಕರಿಗೆ ಮಳೆ ಆಗುವವರೆಗೂ ಉದ್ಯೋಗ ಒದಗಿಸಲು ಸರ್ಕಾರ ಕ್ರಮ ತೆಗೆದುಕೊಳ್ಳಬೇಕು ಎನ್ನತಕ್ಕದ್ದು. ಸರ್ಕಾರ ಯಾವುದೇ ಒಂದು ಕ್ಷಣ ತಡ ಮಾಡದೇ ಈ ಬೇಡಿಕೆಗಳನ್ನು ಈಡೇರಿಸಬೇಕೆಂದು ರೈತರು ಕೇಳಿದ್ದಾರೆ. ಇದರ ಜೊತೆಯಲ್ಲಿ ನಾನು ಮೊದಲೇ ಹೇಳಿದೆ. ನಮ್ಮ ಜಿಲ್ಲೆಯಲ್ಲಿ ಪಂಜಾಬ್ ತರಹ ಐದು ನದಿಗಳು ಹರಿಯುತ್ತದೆ. ಅವರ ದುರ್ದೈವ ನಮಗೆ ಕುಡಿಯುವುದಕ್ಕೆ ನೀರು ಇಲ್ಲ. ಎರಡು ಡ್ಯಾಂಗಳನ್ನು ಕಟ್ಟಿದ್ದಾರೆ. ಆ ಎರಡು ಡ್ಯಾಂಗಳಿದ್ದರೂ ಒಂದು ಹನಿ ನೀರು ನಮಗೆ ಬರುತ್ತಿಲ್ಲ. ಇವತ್ತು 2010 ಡಿಸೆಂಬರ್ 31ಕ್ಕೆ ಬ್ರಿಜೇಶ್ ಕುಮಾರ್ ಅವರ ವರದಿ ಬಂದ ಮೇಲೆ ನಾವು ನಮ್ಮ ಪಾಲಿನ ನೀರನ್ನು ಬಳಸಿಕೊಳ್ಳುವುದಕ್ಕೆ ಯಾವುದೇ ರೀತಿಯಾದಂತಹ ತೊಡಕು ಇಲ್ಲ. ಆದರೆ ಈ ಸರ್ಕಾರ ಬಂದು ಒಂದೂವರೆ ವರ್ಷ ಆಗಿದೆ. ಟೆಂಡರ್ ಕರೆಯುತ್ತೇವೆಂದು ಹೇಳುತ್ತಾರೆ. ಟೆಂಡರ್ ಕರೆದರೆ ಒಂದು ಕಿಲೋ

ಮೀಟರ್, ಎರಡು ಕಿಲೋ ಮೀಟರ್‌ಗೆ ಕರೆಯುತ್ತಾರೆ. ಈ ರೀತಿಯಾಗಿ ನೀರಾವರಿ ಯೋಜನೆಗಳನ್ನು ಮುಗಿಸುವುದಕ್ಕೆ ಹೋದರೆ ಸುಮಾರು 20 ರಿಂದ 30 ವರ್ಷವಾದರೂ ಕೂಡ ನಮ್ಮ ಜಿಲ್ಲೆಯ ನೀರಾವರಿ ಯೋಜನೆಗಳು ಸಂಪೂರ್ಣ ಆಗುವುದಿಲ್ಲ. ಆ ಕಾರಣಕ್ಕಾಗಿ ರೈತರ ಸಮಾವೇಶದಲ್ಲಿ ಒಂದು ಮಹತ್ತರವಾದಂತಹ ನಿರ್ಣಯಗಳನ್ನು ನಮ್ಮ ಜಿಲ್ಲೆಯ ರೈತರು ತೆಗೆದುಕೊಂಡಿದ್ದಾರೆ. ಸತತವಾಗಿ ಬರಗಾಲಕ್ಕೆ ತುತ್ತಾಗಿರತಕ್ಕಂತಹ ರೈತರಿಗೆ ಶಾಶ್ವತ ಬರ ಪರಿಹಾರ ನೀಡಬೇಕಾಗಿದ್ದರೆ ಜಿಲ್ಲೆಯ ಸಮಗ್ರ ನೀರಾವರಿ ಯೋಜನೆಗಳನ್ನು ಮುಂದಿನ ಐದು ವರ್ಷಗಳಲ್ಲಿ ಪೂರ್ಣಗೊಳಿಸಲು ಸರ್ಕಾರ ದಿಟ್ಟ ಕ್ರಮವನ್ನು ಕೈಗೊಳ್ಳಬೇಕು. ನೀರಿಲ್ಲದೇ ಒಣಗಿ ಹೂಳು ತುಂಬಿರುವ ಎಲ್ಲಾ ಕೆರೆಕಟ್ಟೆಗಳ ಹೂಳು ತೆಗೆಯುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ಇದಕ್ಕಾಗಿ ಈ ಕೆಳಕಂಡ ಬೇಡಿಕೆಯನ್ನು ಈಡೇರಿಸಬೇಕೆಂದು ಆಗ್ರಹಿಸುತ್ತೇವೆ. ಮೊದಲನೆಯ ಬೇಡಿಕೆ ಜಿಲ್ಲೆಯ ನೀರಾವರಿ ಯೋಜನೆಗಳಾದ ಚಿಮ್ಮಲಗಿ ಏತ ನೀರಾವರಿ ಯೋಜನೆ.

ಉಪಾಧ್ಯಕ್ಷರು : ಮಾನ್ಯ ಪಾಟೀಲ್ ಅವರೆ, ಸಮಯಾವಕಾಶ ಕೊಟ್ಟಾಯಿತು, conclude ಮಾಡಿ, please ಇಲ್ಲ, ಸಮಯ ಆಯಿತು. ಮುಗಿಸಿ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ): ಮುಂದಿನ ಐದು ವರ್ಷಗಳಲ್ಲಿ ಸಂಪೂರ್ಣ ಮಾಡಬೇಕು ಎನ್ನತಕ್ಕ ಆಗ್ರಹವನ್ನು ಸರ್ಕಾರಕ್ಕೆ ಮಾಡಿ ಜಿಲ್ಲೆಯ ಸುಮಾರು ಒಂದೂವರೆ ಲಕ್ಷ ರೈತರ ಸಮ್ಮುಖದಲ್ಲಿ ಸಮಾವೇಶದಲ್ಲಿ ನಿರ್ಣಯಗಳನ್ನು ತೆಗೆದುಕೊಂಡಿದ್ದಾರೆ. ಒಂದು ವೇಳೆ global tender ಕರೆಯದೇ ತುಂಡು ಗುತ್ತಿಗೆಯನ್ನು ಕರೆದು ಕಾಮಗಾರಿಗಳನ್ನು ಸಂಪೂರ್ಣ ಮಾಡಲು ಹೋದರೆ, ಅದಕ್ಕೆ ನಮ್ಮ ರೈತರ ವಿರೋಧ ಇದೆ. ರೈತರ ವಿಷಯದಲ್ಲಿ ಮಾತ್ರ ನಾವು ಅನ್ಯಾಯ ಮಾಡುತ್ತಿದ್ದೇವೆ. ಬೆಂಗಳೂರಿಗೆ ಮೆಟ್ರೋ ಬರುವುದಕ್ಕೆ global tender ಕರೆಯುತ್ತಾರೆ.

ಉಪಾಧ್ಯಕ್ಷರು : ಬೇರೆಯವರೂ ಮಾತನಾಡಬೇಕು. please ಸಹಕರಿಸಿ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ) : ಸರ್ವೀಸ್ ರಸ್ತೆಗಳನ್ನು ಮಾಡುವುದಕ್ಕೆ global tender ಕರೆಯುತ್ತೇವೆ. ಚತುಷ್ಪಥ ರಸ್ತೆಗಳನ್ನು ಮಾಡುವುದಕ್ಕೆ global tenderಗಳನ್ನು ಕರೆಯುತ್ತೇವೆ. ಕರ್ನಾಟಕ ರಾಜ್ಯದ ನೀರಾವರಿ ಯೋಜನೆಗಳನ್ನು ಮುಂದಿನ ಐದು ವರ್ಷಗಳಲ್ಲಿ global tender ಮುಖಾಂತರ ಮುಗಿಸುತ್ತೇವೆ ಎನ್ನತಕ್ಕ ದಿಟ್ಟ ನಿರ್ಧಾರವನ್ನು ಸರ್ಕಾರ ಪ್ರಕಟಿಸಬೇಕೆಂದು ನಮ್ಮ ಜಿಲ್ಲೆಯ ರೈತರ ಪರವಾಗಿ ನಾನು ವಿನಂತಿ ಮಾಡುತ್ತೇನೆ. ಒಂದು ವೇಳೆ ಈ ಸರ್ಕಾರ ರೈತರ ಸಾಲವನ್ನು ಮನ್ನಾ ಮಾಡದೇ ಹೋದರೆ, ಬೆಳೆ ಪರಿಹಾರವನ್ನು ನೀಡದೇ ಹೋದರೆ ಈ ರೈತರ ಬೇಡಿಕೆಗಳನ್ನು ಈಡೇರಿಸದೇ ಹೋದರೆ ತಾತ್ಕಾಲಿಕವಾಗಿ ಸ್ಥಗಿತವಾಗಿರತಕ್ಕಂತಹ ಬಂಡಿಯಾತ್ರೆ ಮತ್ತೆ ನಮ್ಮ ಜಿಲ್ಲೆಯಲ್ಲಿ ಪ್ರಾರಂಭ ಆಗುತ್ತದೆ. ಈ ಸಾರಿ ಒಂದೂವರೆ ಲಕ್ಷ ಜನ ರೈತರ ಸಮಾವೇಶ ಆಗಿದೆ. ಒಂದು ವೇಳೆ ಸರ್ಕಾರ ಈ ಅಧಿವೇಶನ ಮುಗಿಯುವುದರೊಳಗೆ ಏನಾದರೂ ಆ ರೈತರಿಗೆ ಸಹಾಯ ಮಾಡದೇ ಹೋದರೆ, ಸಾಲ ಮನ್ನಾ ಮಾಡದೇ ಹೋದರೆ ನಮ್ಮ ರೈತ ಮತ್ತೆ ತನ್ನ ಬಂಡಿಯನ್ನು ಹತ್ತಿಕೊಂಡು ಇಡೀ ಜಿಲ್ಲೆಯನ್ನು ಸುತ್ತುತ್ತಾನೆ. ಒಂದು ವೇಳೆ ಅದಕ್ಕೂ ಸರ್ಕಾರ ಬಗ್ಗದೇ ಹೋದರೆ ಉತ್ತರ ಕರ್ನಾಟಕದ ಬಿಜಾಪುರದ ರೈತರ ಬಂಡಿ ವಿಧಾನ ಸೌಧದ ಒಳಗೆ ಬಾರುಕೋಲಿನ ಜೊತೆಗೆ ಪ್ರವೇಶ ಮಾಡಬೇಕು ಎಂದು ಹೇಳಿ ನಮ್ಮ ರೈತರು ನಿರ್ಧಾರ ಮಾಡಿದ್ದಾರೆ.

ಉಪಾಧ್ಯಕ್ಷರು : ಪಾಟೀಲ್ please ಮುಗಿಸಿ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ): ಆ ವಿಚಾರವನ್ನು ತಮಗೆ ನಾನು ತಿಳಿಸುವುದಕ್ಕೆ ಒಬ್ಬ ಶಾಸಕನಾಗಿ ಒಬ್ಬ ರೈತನ ಪ್ರತಿನಿಧಿಯಾಗಿ ಇಲ್ಲಿ ನನ್ನ ವಿಚಾರಗಳನ್ನು ತಮ್ಮ ಮುಂದೆ ಇಡುತ್ತಿದ್ದೇನೆ. ಇದರ ಜೊತೆಯಲ್ಲಿ ಒಂದು ಮಾತು ಹೇಳುತ್ತೇನೆ.

ಉಪಾಧ್ಯಕ್ಷರು : ಜೊತೆಯಲ್ಲ ಅಲ್ಲ, ಸಾಕಷ್ಟು ಸಮಯವನ್ನು ಕೊಟ್ಟಿದ್ದೇನೆ, ಪ್ಲೀಸ್ ಮುಗಿಸಿ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ): ರೈತರ ಸಾಲ ಮನ್ನಾ ಈ ಸರ್ಕಾರ ಅಷ್ಟೇ ಅಲ್ಲ ಬರಗಾಲ ಬಂದಾಗ ...

ಉಪಾಧ್ಯಕ್ಷರು : ನಾನು ಬೇರೆ ಶಾಸಕರ ಹೆಸರನ್ನು ಕರೆಯುತ್ತೇನೆ ನಿಮಗೆ ಸಮಯ ಕೊಟ್ಟಿದ್ದೇನೆ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ) : ಬೆಳೆ ಸಾಲವನ್ನು ಮನ್ನಾ ಮಾಡಿದೆ, ಒಂದೇ ನಿಮಿಷ. ಅಧ್ಯಕ್ಷರೆ ಮುಗಿಸುತ್ತೇವೆ. ದಿವಂಗತ ರಾಮಕೃಷ್ಣ ಹೆಗಡೆಯವರು ಮಾನ್ಯ ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ...

ಉಪಾಧ್ಯಕ್ಷರು : Please ಮುಗಿಸಿ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ) : ರೈತರ ಬೆಳೆ ಸಾಲವನ್ನು ಮನ್ನಾ ಮಾಡಿದ್ದಾರೆ. ಆ ಸಂದರ್ಭದಲ್ಲಿ ಇಂತಹ ಭೀಕರ ಬರಗಾಲ ಇರಲಿಲ್ಲ. ಅಷ್ಟೇ ಅಲ್ಲ ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿ ಆಗಿದ್ದಂತಹ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಆಡಳಿತದಲ್ಲಿ ರೈತರ ಬೆಳೆ ಸಾಲವನ್ನು ಮನ್ನಾ ಮಾಡಿದ್ದಾರೆ. ಆಗಲೂ ಕೂಡ ಇಂತಹ ಭೀಕರ ಬರಗಾಲ ಇರಲಿಲ್ಲ. ಅಷ್ಟೇ ಅಲ್ಲದೇ ಸನ್ಮಾನ್ಯ ದೇವೇಗೌಡರು ಆಡಳಿತ ನಡೆಸುಂತಹ ಸಂದರ್ಭದಲ್ಲಿ ಕೂಡ ರೈತರ ಬೆಳೆ ಸಾಲವನ್ನು ಮನ್ನಾ ಮಾಡಿದ್ದಾರೆ. ಅಷ್ಟೇ ಅಲ್ಲ ಹಿಂದಿನ ಸಮ್ಮಿಶ್ರ ಸರ್ಕಾರದಲ್ಲಿ ಸನ್ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿ ಆಗಿದ್ದಂತಹ ಸಂದರ್ಭದಲ್ಲಿ 2500 ಕೋಟಿ ರೂಪಾಯಿಗಳ ರೈತರ ಸಾಲವನ್ನು ಮನ್ನಾ ಮಾಡಬೇಕು ಎಂದು ಹೇಳಿದ್ದರು.

ಉಪಾಧ್ಯಕ್ಷರು : ಪಾಟೀಲ್ ಅವರೇ ಕುಳಿತುಕೊಳ್ಳಿ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ) : ಒಂದೇ ಒಂದು ರೂಪಾಯಿ ಹಣವನ್ನು ಕೊಟ್ಟಿಲ್ಲ. ಆದ್ದರಿಂದ ದಯಮಾಡಿ ರೈತರ ಸಾಲವನ್ನು ಮನ್ನಾ ಮಾಡಲೇಬೇಕೆಂದು ಹೇಳಿ ತಮ್ಮ ಜಿಲ್ಲೆಯ ರೈತರ ಪರವಾಗಿ ನಾನು ಸರ್ಕಾರಕ್ಕೆ ವಿನಂತಿ ಮಾಡುತ್ತೇವೆ. ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ನೆಹರೂ ಚನ್ನಬಸಪ್ಪ ಓಲೇಕಾರ್ (ಹಾವೇರಿ) : ಮಾನ್ಯ ಉಪಾಧ್ಯಕ್ಷರೆ, ಭೀಕರವಾದಂತಹ ಬರಗಾಲದ ಬಗ್ಗೆ ಚರ್ಚೆ ನಡೆಸಿ

ಹಲವಾರು ಶಾಸಕ ಮಿತ್ರರು ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಈ ನಿಟ್ಟಿನಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಬರ ಪರಿಸ್ಥಿತಿಯನ್ನು ಎದುರಿಸಬೇಕಾಗಿದೆ. ಬರ ಪರಿಸ್ಥಿತಿ ಬರಬೇಕು ಎಂದು ಹೇಳಿದರೆ ಇದು ಯಾರ ಕೈಯಲ್ಲೂ ಇಲ್ಲ. ಬರ ಬಂದಿದೆ ಎಂದು ಹೇಳಿದರೆ ಪ್ರಕೃತಿಯ ವಿಕೋಪದಿಂದ ಇಂತಹ ಪರಿಸ್ಥಿತಿಯನ್ನು ಎದುರಿಸುತ್ತಿದ್ದೇವೆ. ಎದುರಿಸುವಂತಹ ಸಂದರ್ಭದಲ್ಲಿ ಎಲ್ಲರೂ ಒಗ್ಗಟ್ಟಾಗಿ ನಾವೆಲ್ಲರೂ ಯಾವ ರೀತಿಯಾದಂತಹ ಪರಿಹಾರವನ್ನು ರೈತರಿಗೆ, ಕೂಲಿ ಕಾರ್ಮಿಕರಿಗೆ ಕೊಡಬೇಕು ಎನ್ನುವಂತಹ ಚಿಂತನೆಯನ್ನು ಮಾಡುವುದು ಬಹಳ ಅತ್ಯಂತ ಅವಶ್ಯವಾಗಿದೆ ಎಂದು ಹೇಳುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ. ಈಗಾಗಲೇ ಹಲವಾರು ಜಿಲ್ಲೆಗಳಲ್ಲಿ ಮಳೆ ಆಗದೇ ಬಿತ್ತನೆಯನ್ನು ಮಾಡಿಲ್ಲ. ಆದರೆ ಹಾವೇರಿ ಜಿಲ್ಲೆಯಲ್ಲಿ ಮಾತ್ರ ಮುಂಗಾರಿನಲ್ಲಿ ಅಲ್ಪ ಸ್ವಲ್ಪ ಮಳೆ ಆಯಿತು. ಅಲ್ಪ ಸ್ವಲ್ಪ ಮಳೆ ಆಗಿದ್ದರಿಂದ ಹಾವೇರಿ ಜಿಲ್ಲೆಯಲ್ಲಿ ಹಾಗೂ ಇನ್ನುಳಿದಂತಹ ಕೆಲವು ಪಶ್ಚಿಮ ಭಾಗದಲ್ಲಿ ಹಲವಾರು ರೈತರು ಫಸಲನ್ನು ಬೆಳೆಯಬೇಕು ಎನ್ನುವಂತಹ ಆಸೆಯಿಂದ ಬೀಜವನ್ನು ಬಿತ್ತಿ ಗೊಬ್ಬರವನ್ನು ಹಾಕಿ ಬೀಜವನ್ನು ಬಿತ್ತಿದ್ದಾರೆ. ನಂತರದಲ್ಲಿ ಮಳೆ ಕೈಕೊಟ್ಟಿದ್ದರಿಂದ ಆ ರೈತ ಬೀಜವನ್ನು ಗೊಬ್ಬರವನ್ನೂ ಸಹಿತ ಕಳೆದುಕೊಳ್ಳುವಂತಹ ಪರಿಸ್ಥಿತಿ ಉಂಟಾಗಿದೆ. ಆದರಲ್ಲಿ ವಿಶೇಷವಾಗಿ ಹಾವೇರಿ ಜಿಲ್ಲೆಯ ರೈತರು ಈ ಸಂಕಷ್ಟವನ್ನು ಎದುರಿಸುತ್ತಿದ್ದಾರೆ ಎನ್ನುವಂತಹ ಮಾತನ್ನು ಸರ್ಕಾರದ ಗಮನಕ್ಕೆ ತರಬೇಕು ಎನ್ನುವಂತಹ ಇಚ್ಛೆಯಿಂದ ಈ ಮಾತನ್ನು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ. ಅದಕ್ಕೆ ಇವತ್ತು ಮಳೆ ಆಗುತ್ತಿದೆ. ವರುಣನ ಕೃಪೆ ದಯಪಾಲಿಸಿದೆ. ವರುಣನ ಕೃಪೆ ದಯಪಾಲಿಸುವುದರಿಂದ ಮಳೆ ಆಗುತ್ತಿರುವಂತಹ ಸಂದರ್ಭದಲ್ಲಿ ಇವತ್ತು ಸರ್ಕಾರ ಆ ರೈತರ ನೆರವಿಗೆ ಬರಬೇಕಾಗಿರುವಂತಹದು ಬಹಳ ಅತ್ಯಂತ ಅವಶ್ಯಕವಾಗಿದೆ ಎನ್ನುವಂತಹದನ್ನು ಸರ್ಕಾರದ ಗಮನಕ್ಕೆ ತರಬಯಸುತ್ತಿದ್ದೇನೆ. ಈ ನಿಟ್ಟಿನಲ್ಲಿ ಆ ರೈತರಿಗೆ ಬೀಜವನ್ನು, ಗೊಬ್ಬರವನ್ನು ಕಳೆದುಕೊಂತಹವರಿಗೆ ಪುನಃ ಪುಕ್ಕಟೆಯಾಗಿ ಬೀಜ, ಗೊಬ್ಬರಗಳನ್ನು ವಿತರಣೆ ಮಾಡುವಂತಹ ಕೆಲಸ ಸರ್ಕಾರ ಮಾಡಿತು ಎಂದು ಹೇಳಿದರೆ

ಸಂಕಷ್ಟದಲ್ಲಿರುವಂತಹ ರೈತರಿಗೆ ಕೈ ಹಿಡಿದು ಮುಂದೆ ನಡೆಸಿದಂತೆ ಆಗುತ್ತದೆ. ಆ ನಿಟ್ಟಿನಲ್ಲಿ ಸರ್ಕಾರದ ಗಮನವನ್ನು ನಾನು ಸೆಳೆಯ ಬಯಸುತ್ತೇನೆ. ಸರ್ಕಾರ ಆ ರೀತಿಯಲ್ಲಿ ಕ್ರಮವನ್ನು ಜರುಗಿಸುತ್ತದೆ ಎನ್ನುವಂತಹ ವಿಶ್ವಾಸವನ್ನು ನನ್ನಲ್ಲಿದೆ ಎನ್ನುವಂತಹ ಮಾತನ್ನು ಹೇಳಬಯಸುತ್ತೇನೆ. ಬಹಳ ಕಡೆಗಳಲ್ಲಿ ನೀರಿನ ಕೊರತೆ ಇದೆ. ಕೆರೆಕಟ್ಟೆಗಳಲ್ಲಿ ನೀರು ಇಲ್ಲ. ಮಳೆ ಇಲ್ಲದೇ ಹೋದ ವರ್ಷ ಆದಂತಹ ಮಳೆಗೆ ಅಲ್ಪ ಸ್ವಲ್ಪ ನೀರಿತ್ತು. ಅದು ಈಗಾಗಲೇ ಒಣಗಿ ಹೋಗಿ ಬಿಟ್ಟಿದೆ. ಯಾವುದೇ ಕೆರೆಕಟ್ಟೆಗಳಲ್ಲಿ ನೀರಿಲ್ಲ. ದನಕರುಗಳಿಗೆ ಸಹಿತ ಬೋರ್‌ವೆಲ್‌ನಿಂದ ನೀರನ್ನು ತಂದು ಕುಡಿಸಬೇಕಾಗಿರುವಂತಹ ಪರಿಸ್ಥಿತಿ ಬಂದಿರುವುದರಿಂದ ಎಲ್ಲಿಯೂ ಹೊರಗಡೆ ಹೋಗಿ ದನಕರುಗಳು ನೀರನ್ನು ಕುಡಿಯಲಿಕ್ಕೆ, ಅವುಗಳ ಮೈ ತೊಳೆಯಲಿಕ್ಕೆ ಸಹ ಅಸಾಧ್ಯವಾಗಿರುವಂತಹದನ್ನು ನಾವು ಕಾಣುತ್ತಿದ್ದೇವೆ. ಆ ನಿಟ್ಟಿನಲ್ಲಿ ಅದನ್ನು ಬಗೆಹರಿಸಬೇಕು ಎಂದು ಹೇಳಿದರೆ ದನಕರುಗಳಿಗೆ ಕುಡಿಯಲಿಕ್ಕೆ ಊರ ಹೊರಗೆ ಸ್ವಲ್ಪ ದೂರದಲ್ಲಿ ಒಂದು ಅಥವಾ ಎರಡು ದೊಡ್ಡವಾದಂತಹ ತೊಟ್ಟಿಗಳನ್ನು ನಿರ್ಮಾಣ ಮಾಡಿಸುವಂತಹ ಕೆಲಸವನ್ನು ಸರ್ಕಾರ ಮಾಡಿಸಿತು ಎಂದು ಹೇಳಿದರೆ ಆ ತೊಟ್ಟಿಯಲ್ಲಿರುವಂತಹ ನೀರನ್ನು ಕುಡಿದು ಆ ದನಕರುಗಳನ್ನು ಮನೆಗೆ ಹೊಡೆದು ತರಲು ಸಾಧ್ಯವಾಗುತ್ತದೆ, ಅದರ ಜೊತೆಗೆ ಮಹಿಳೆಯರಿಗೆ ಬಟ್ಟೆ ತೊಳೆಯಲಿಕ್ಕೆ ಬಹಳ ಕನಿಷ್ಟವಾದಂತಹ ಪರಿಸ್ಥಿತಿ ಹಳ್ಳಿಗಳಲ್ಲಿ ಇವತ್ತು ಉದ್ಭವವಾಗಿದೆ. ಆ ಕಾರಣದಿಂದ ಹಳ್ಳಿಗಳಲ್ಲಿ ಇರುವಂತಹ ಮಹಿಳೆಯರಿಗೆ ಬಟ್ಟೆ ತೊಳೆಯಲಿಕ್ಕೆ ಅವಶ್ಯಕವಾದ ತೊಟ್ಟಿಗಳನ್ನು ನಿರ್ಮಾಣ ಮಾಡಿ. ಬಟ್ಟೆ ಒಗೆಯಲಿಕ್ಕೆ ಅನುಕೂಲ ಮಾಡಿಕೊಂಡವಂಥಹದ್ದು ಸರ್ಕಾರದ ಆದ್ಯ ಕರ್ತವ್ಯವಾಗಿದೆ. ಆ ಕರ್ತವ್ಯವನ್ನು ನಿಭಾಯಿಸುವಂತಹ ಕೆಲಸ ಇವತ್ತು ಸರ್ಕಾರದ ಮುಂದಿರುವಂತಹ ಸವಾಲು ಎನ್ನುವುದನ್ನು ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಈಗಾಗಲೇ ಬೀಜ ಮತ್ತು ಗೊಬ್ಬರವನ್ನು ಕಳೆದುಕೊಂಡಂತಹ ರೈತರಿಗೆ ಕನಿಷ್ಠ ಪಕ್ಷ ಸರ್ಕಾರ ಎಕರೆಗೆ 10 ಸಾವಿರ ರೂ.ಗಳನ್ನಾದರೂ ಪರಿಹಾರವಾಗಿ ಕೊಡುವ ಕೆಲಸವನ್ನು ಮಾಡಿತು ಎಂದರೆ, ಆ ರೈತ ನೆಮ್ಮದಿಯ ನಿಟ್ಟುಸಿರನ್ನು ಬಿಡಲಿಕ್ಕೆ ಸಾಧ್ಯವಾಗುತ್ತದೆ.

ಇಲ್ಲದಿದ್ದರೆ, ಆತ ಕನಿಷ್ಠ ಜೀವನವನ್ನು ಸಾಗಿಸುವುದು ಸಹಾ ದುಸ್ಸಾಹಸವಾಗುತ್ತದೆ. ತೊಂದರೆಯಾಗುತ್ತದೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತಮ್ಮ ಮೂಲಕ ತರಬಯಸುತ್ತೇನೆ.

(ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಈ ನಿಟ್ಟಿನಲ್ಲಿ, ಇವತ್ತಿನ ದಿವಸ ಇಂತಹ ಕನಿಷ್ಟ ಬರಗಾಲ ಬಂದಿರುವುದರಿಂದ, ರಾಜ್ಯದ ಎಲ್ಲಾ ಕಡೆಗಳಲ್ಲಿ ಇವತ್ತು ಇಂತಹ ತೊಂದರೆಯನ್ನು ರೈತರು ಅನುಭವಿಸುತ್ತಿದ್ದಾರೆ. ಆ ಕಾರಣದಿಂದ ರೈತರು ಮಾಡಿರುವಂತಹ ಸಾಲವನ್ನು ಮನ್ನಾ ಮಾಡಬೇಕು. ಈಗಾಗಲೇ ನಮ್ಮ ಅನೇಕ ಸ್ನೇಹಿತರು ಹೇಳಿದ್ದಾರೆ. ರೈತರು ಮಾಡಿರುವಂತಹ ಸಾಲವನ್ನು ಮನ್ನಾ ಮಾಡುವಂತಹ ಒಂದು ದಿಟ್ಟ ಹೆಜ್ಜೆಯನ್ನು ನಮ್ಮ ಸರ್ಕಾರ ಕೈಗೊಳ್ಳಬೇಕು ಎನ್ನವುದು ಬಹುತೇಕ ನಮ್ಮ ರೈತರ ಪರವಾಗಿ ಇರುವಂತಹ ಬೇಡಿಕೆ ಎನ್ನುವುದನ್ನು ಸರ್ಕಾರದ ಗಮನಕ್ಕೆ ನಾನು ತರಬಯಸುತ್ತೇನೆ. ಒಂದು ವೇಳೆ ಆ ರೀತಿ ಮಾಡದೆ ಹೋದರೆ, ರೈತ ಬಹಳ ಸಂಕಷ್ಟದಲ್ಲಿ ಬೀಳುತ್ತಾನೆ. ಅವರ ತೊಂದರೆಯನ್ನು ನೀಗಿಸಲಿಕ್ಕೆ ಸಾಧ್ಯವಾಗುವುದಿಲ್ಲ. ಆ ತೊಂದರೆಯನ್ನು ನೀಗಿಸುವಲ್ಲಿ ಸರ್ಕಾರ ಇವತ್ತು ಕೈ ಜೋಡಿಸಿತು ಎನ್ನುವ ಕೂಗು ರೈತರಿಂದ ಬರಬೇಕಾಗಿರುವಂಥದ್ದು ಬಹಳ ಮಹತ್ವದ್ದಾಗಿದೆ ಎನ್ನುವುದನ್ನು ಈ ಸಂದರ್ಭದಲ್ಲಿ ನಾನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ನನ್ನ ಕ್ಷೇತದಲ್ಲಿ ಹಂದಿಗನೂರು, ಕೆರೆಕೊಪ್ಪ ಮತ್ತು ತಿಮ್ಮಾಪುರ ಏತ ನೀರಾವರಿ ಯೋಜನೆಗಳಿಗೆ ಸುಮಾರು 15 ವರ್ಷಗಳಿಂದ ಈಗಾಗಲೇ estimates ಗಳನ್ನು ಮಾಡಿಸಿ ಕಳುಹಿಸುತ್ತಿದ್ದೇವೆ. ಬಜೆಟ್‌ನಲ್ಲಿ ಕೇವಲ 1 ಸಾವಿರ ರೂ.ಗಳನ್ನು ಮಾತ್ರ ಅದಕ್ಕೆ reserve fund ಎಂದು ಇಡುತ್ತಾ ಬರಲಾಗಿದೆ. ಸನ್ಮಾನ್ಯ ನೀರಾವರಿ ಸಚಿವರಾಗಿರುವ ಬೊಮ್ಮಾಯಿ ಸಾಹೇಬರ ಗಮನಕ್ಕೆ ಈಗಾಗಲೇ ತರಲಾಗಿದೆ. ಅವರೂ ಸಹಿತ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಈ ವರ್ಷದಲ್ಲಿ ಆ ಮೂರು ಯೋಜನೆಗಳಿಗೆ ಚಾಲನೆಯನ್ನು ಕೊಟ್ಟಲ್ಲಿ, ನಮ್ಮ ಕ್ಷೇತ್ರದಲ್ಲಿರುವಂತಹ ಎಲ್ಲಾ ಕಡೆಗಳಲ್ಲಿಯೂ ಬಹುತೇಕ ನೀರಾವರಿಯನ್ನು ಮಾಡಲಿಕ್ಕೆ ಸಾಧ್ಯತೆ ಇದೆ. ಆ ನಿಟ್ಟಿನಲ್ಲಿ, ಆ

ಕೆಲಸವನ್ನು ಬೇಗನೆ ಕೈಗೆತ್ತಿಕೊಳ್ಳುವಂತಹ ಕೆಲಸವನ್ನು ಸನ್ಮಾನ್ಯ ನೀರಾವರಿ ಸಚಿವರು ಮಾಡಬೇಕೆಂದು ಮನವಿ ಮಾಡುತ್ತೇನೆ.

ಅಧ್ಯಕ್ಷರು : ಬೇಗನೆ ಮುಗಿಸಿ.

ಶ್ರೀ ನೆಹರೂ ಚನ್ನಬಸಪ್ಪ ಓಲೇಕಾರ್ : ಹತ್ತಿಮತ್ತೂರಿನ ಕೆರೆ ಸೇರಿದಂತೆ ಉಳಿದ ಕರೆಗಳಿಗೂ ಸಾಮೂಹಿಕವಾಗಿ ಕೆರೆಗಳಿಗೆ ನೀರು ತುಂಬಿಸುವಂತಹ ಕಾರ್ಯಕ್ರಮ ಜಾರಿಗೊಳಿಸಲಾಗಿದೆ. ಇಂತಹ ಕಾರ್ಯಕ್ರಮಗಳನ್ನು ಎಲ್ಲಾ ಕಡೆಗಳಲ್ಲಿಯೂ ಆಗಬೇಕು. 2–3 ವರ್ಷಗಳಿಗೊಮ್ಮೆ ಬರಗಾಲ ಬೀಳುವುದರ ಬಗ್ಗೆ ಪ್ರತಿ ವರ್ಷವೂ ಸಹ ನಾವು ಸದನದಲ್ಲಿ ಚರ್ಚೆಯನ್ನು ಮಾಡುತ್ತಿರುತ್ತೇವೆ. ಆ ಕಾರಣದಿಂದಾಗಿ permanent ಆಗಿ solution ಅನ್ನು ಕಂಡು ಹಿಡಿಯಬೇಕೆಂದರೆ, ಆ solution, ಕೆರೆಗೆಳಿಗೆ ನೀರನ್ನು ತುಂಬಿಸುವಂತಹ ಕೆಲಸವಾಗಿದೆ. ಮಳೆಗಾಲದಲ್ಲಿ ಹೊಳೆಯಲ್ಲಿ ಹರಿದು ಹೋಗುವಂತಹ ನೀರನ್ನು ಕೆರೆಗಳಿಗೆ ತುಂಬಿಸಿದರೆ, ಕೆರೆಗಳಲ್ಲಿ ನೀರು stock ಆಗಿದ್ದರೆ, ಬೋರ್‌ವೆಲ್‌ಗಳೂ ಸಹ recharge ಆಗುತ್ತವೆ. ಒಕ್ಕಲುತನ ಮತ್ತು ಇನ್ನಿತರ ಎಲ್ಲಾ ಕೆಲಸಗಳಿಗೂ ಅದನ್ನು ಬಳಕೆ ಮಾಡಲಿಕ್ಕೆ ಸಾಧ್ಯತೆ ಇದೆ.

ಅಧ್ಯಕ್ಷರು : ಬೇಗನೆ ಮುಗಿಸಿ.

ಶ್ರೀ ನೆಹರೂ ಚನ್ನಬಸಪ್ಪ ಓಲೇಕಾರ್ : ಮಾನ್ಯ ಅಧ್ಯಕ್ಷರೆ, ನಾನು ಮಾತನಾಡಲು ಆರಂಭಿಸಿ ಇನ್ನೂ ಐದು ನಿಮಿಷಗಳಾಗಿಲ್ಲ. ನನಗೆ ಮಾತನಾಡಲು ತಾವು ಐದು ನಿಮಿಷ ಅವಕಾಶ ಕೊಟ್ಟಿದ್ದಿರಿ.

ಅಧ್ಯಕ್ಷರು : ನೀವು ನೇರವಾಗಿ ಮಾನ್ಯ ಸಚಿವರ ಬಳಿ ಹೋಗಿ ಮಾತನಾಡಿ. ಈಗ please, ಮಾತನಾಡಿ ಮುಗಿಸಿ.

ಶ್ರೀ ನೆಹರೂ ಚನ್ನಬಸಪ್ಪ ಓಲೇಕಾರ್ : ಆದ್ದರಿಂದ ಕೆರೆಗಳಿಗೆ ನೀರು ತುಂಬಿಸುವಂತಹ ಕೆಲಸವನ್ನು ಮಾಡಬೇಕು. ಹತ್ತಿಮತ್ತೂರು ಮತ್ತು ಸಿದ್ದಾಪುರ ಕೆರೆಗಳಿಗೆ ನೀರನ್ನು ತುಂಬುವಂತಹ ಯೋಜನೆಗೆ ಈಗಾಗಲೇ estimate ಮಾಡಿಸಿ ಕಳುಹಿಸಲಾಗಿದೆ. ಸರ್ಕಾರ ಅದನ್ನು ಕೂಡಲೇ ಕೈಗೆತ್ತಿಕೊಳ್ಳುವಂತಹ ಕೆಲಸವನ್ನು ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಅಧ್ಯಕ್ಷರು : ಬೇಗ ಮುಗಿಸಿ.

ಶ್ರೀ ನೆಹರೂ ಚನ್ನಬಸಪ್ಪ ಓಲೇಕಾರ್ : ಇವತ್ತಿನ ದಿವಸ ಹೊಸದಾಗಿ ನಮ್ಮ ಮಾನ್ಯ ಮುಖ್ಯಮಂತ್ರಿಗಳಾಗಿ ಜಗದೀಶ್ ಶೆಟ್ಟರ್‌ರವರು ಬಂದಿದ್ದಾರೆ. ಅವರು ರೈತರ ಪರವಾಗಿ ಕೆಲಸವನ್ನು ಮಾಡುತ್ತಾರೆ ಎನ್ನುವಂತಹ ವಿಶ್ವಾಸ ಈ ರಾಜ್ಯದ ಎಲ್ಲಾ ರೈತರಲ್ಲೂ ಮೂಡಿದೆ. ಅದಕ್ಕಾಗಿ ಈಗೇನು ಉತ್ತರವನ್ನು ಅವರು ಕೊಡುತ್ತಾರೋ, ಆ ಉತ್ತರವನ್ನು ಕೊಡುವಂತಹ ಸಂದರ್ಭದಲ್ಲಿ ರೈತರ ಪರವಾಗಿರುವಂತಹ, ರೈತರಿಗೆ ಸಹಕಾರಿ ಆಗುವಂತಹ ಸಲಹೆ/ಸೂಚನೆಗಳನ್ನು ಹಾಗೂ ಅವಕಾಶವನ್ನು ಕಲ್ಪಿಸಬೇಕು ಎಂದು ಹೇಳಬೇಕೆಂಬ ವಿಚಾರವನ್ನು ಅವರ ಗಮನಕ್ಕೆ ತರುತ್ತೇನೆ. ಈ ಸಭೆಯಲ್ಲಿ ನಮ್ಮ ಜಿಲ್ಲೆಯ ವಿಚಾರಗಳನ್ನು ಸದನದ ಗಮನಕ್ಕೆ ತರುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಮಾನ್ಯ ಸಭಾಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಮಾನ್ಯ ಬಂಡೆಪ್ಪ ಕಾಶೆಂಪೂರ್‌ರವರೆ, ತಾವು 10 ನಿಮಿಷದಲ್ಲಿ ಮಾತನಾಡಿ ಮುಗಿಸಬೇಕು.

ಶ್ರೀ ಬಂಡೆಪ್ಪ ಖಾಶೆಂಪೂರ್ (ಬೀದರ್ ದಕ್ಷಿಣ) : ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ. ವಿಶೇಷವಾಗಿ ಇವತ್ತು ಕಳೆದ 4 ದಿವಸಗಳಿಂದ ಬರಗಾಲದ ಬಗ್ಗೆ ಬಹಳಷ್ಟು ಸದಸ್ಯರು ಸಲಹೆ/ಸೂಚನೆಗಳನ್ನು ಕೊಟ್ಟಿದ್ದಾರೆ. ಬಹಳಷ್ಟು ಮಾತನಾಡಿದ್ದಾರೆ. ನಾನು ಸಹ ಒಂದೆರೆಡು ಮಾತುಗಳನ್ನು ಹೇಳಲಿಕ್ಕೆ ಬಯಸುತ್ತೇನೆ. ಬರಗಾಲ ಬಂದಾಗ ನೀರು, ಮೇವು ಮತ್ತು un-employment ಜನರಿಗೆ ಉದ್ಯೋಗ ಕೊಡುವುದು, ಇವುಗಳನ್ನು ಸರ್ಕಾರ ಮುಖ್ಯವಾಗಿ tackle ಮಾಡಬೇಕು. ನಿನ್ನೆ ಮಾಜಿ ಮುಖ್ಯಂತ್ರಿಗಳು ಮಾತನಾಡುವಾಗ, ಎಲ್ಲಾ ಹಳೆಯ ಸಚಿವರಿಗೆ ನೀವ್ಯಾರೂ ಕೆಲಸ ಮಾಡಿಲ್ಲ ಎಂದು certificateವೊಂದನ್ನು ಕೊಟ್ಟು ಬಿಟ್ಟಿದ್ದಾರೆ. ಈ ಬಗ್ಗೆ ಬಹಳಷ್ಟು ಕುಳಿತು ಚರ್ಚೆ ಮಾಡುವ ಅಗತ್ಯವಿಲ್ಲ. ನೀವು ಕೆಲಸ ಮಾಡಿಲ್ಲವೆಂದು ಅವರೇ certificate ಕೊಟ್ಟುಬಿಟ್ಟದ್ದಾರೆ. ಮಾನ್ಯ ಕುಮಾರಸ್ವಾಮಿಯವರು ಇದ್ದಾಗ, ನಾನೇ ಕೃಷಿ ಸಚಿವನಾಗಿ ಕೆಲಸ ಮಾಡಿದ್ದೆ. ಅವತ್ತು ನಿನ್ನೆ ಯಾರು

ಸಾಲ ಮನ್ನಾ ಮಾಡಬೇಕು ಎಂಬ ನಿಟ್ಟಿನಲ್ಲಿ ಹೇಳಿದರೋ, ಆವತ್ತಿನ ದಿನ ಸಾಲ ಮನ್ನಾ ಮಾಡಬಾರದು ಎಂದು ಹೇಳಿದಂತಹ ವ್ಯಕ್ತಿ ಇವರು. ಮಾನ್ಯ ಕುಮಾರಸ್ವಾಮಿಯವರು ದಿಟ್ಟ ನಿರ್ಧಾರ ತೆಗೆದುಕೊಂಡು at-least 2500 ಕೋಟಿ ರೂ.ಗಳ ಸಾಲ ಮನ್ನಾ ಮಾಡಿದರು. 2005ರಲ್ಲಿ ಇತಿಹಾಸದಲ್ಲೇ ಅಂತಹ ದೊಡ್ಡ ಪ್ರಮಾಣದಲ್ಲಿ ಸಾಲ ಮನ್ನಾ ಮಾಡಿದಂತಹ ಕೀರ್ತಿ ಆ ಸಮ್ಮಿಶ್ರ ಸರ್ಕಾರಕ್ಕೆ ಸೇರುತ್ತದೆ.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಬಂಡೆಪ್ಪನವರೆ, ಒಂದು ನಿಮಿಷ ತಾವು ಯೀಲ್ಡ್ ಆಗಿ.

ಶ್ರೀ ಬಂಡೆಪ್ಪ ಖಾಶೆಂಪೂರ್ : ಆಯಿತು, ಹೇಳಿ.

ಶ್ರೀ ಲಕ್ಷ್ಮಣ ಎಸ್. ಸವದಿ : ಅದು 2500 ಕೋಟಿ ರೂ.ಗಳಲ್ಲ, ಅದು 1780 ಕೋಟಿ ರೂ.ಗಳು.

ಶ್ರೀ ಬಂಡೆಪ್ಪ ಖಾಶೆಂಪೂರ್ : ಆಯಿತು, ಆದು 1780 ಕೋಟಿ ರೂ.ಗಳ ಎಂದೇ ಇಟ್ಟುಕೊಳ್ಳಿ ಅದೂ ಸಹಾ ದೊಡ್ಡ ಮೊತ್ತವೇ ಆಗಿದೆ.

ಅಧ್ಯಕ್ಷರು : ಅದು 2005ರಲ್ಲಿ ಅಲ್ಲ, 2006ರಲ್ಲಿ ಆಗಿರುವುದು.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಬಂಡೆಪ್ಪ ಖಾಶೆಂಪೂರ್‌ರವರು ಇತಿಹಾಸದ ಬಗ್ಗೆ ಹೇಳುತ್ತಿದ್ದಾರೆ. ಅವರು ಕೇಂದ್ರ ಸರ್ಕಾರ 76 ಸಾವಿರ ಕೋಟಿ ರೂ.ಗಳ ಸಾಲ ಮನ್ನಾ ಮಾಡಿದ್ದನ್ನು ಸಹ ಸೇರಿಸಿ ಹೇಳಲಿ.

ಶ್ರೀ ಬಂಡೆಪ್ಪ ಖಾಶೆಂಪೂರ್ : ಆ 76 ಸಾವಿರ ಕೋಟಿ ರೂ.ಗಳ ಸಾಲ ಮನ್ನಾ ಮಾಡಿದ್ದು State Government ಅಲ್ಲ, ನಾನು ರಾಜ್ಯ ಸರ್ಕಾರದ್ದು ಮಾತ್ರ ಹೇಳುತ್ತಿದ್ದೇನೆ.

ಶ್ರೀ ಟಿ.ಬಿ. ಜಯಚಂದ್ರ : ಆದೂ ಸಹ ರೈತರಿಗೆ ಹೋಗಿದ್ದೇ ಆಗಿದೆ.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಅಧ್ಯಕ್ಷರಿಗೆ, ಹಿಂದಿನ records ಅನ್ನು ನಾವು ತೆಗೆದು ನೋಡಬೇಕಾಗುತ್ತದೆ. ಸಮ್ಮಿಶ್ರ ಸರ್ಕಾರ ಸಾಲ ಮನ್ನಾ ಮಾಡುವಂತಹ ಅಂದಿನ ಸಂದರ್ಭದಲ್ಲಿ ಪತ್ರಿಕೆಗಳಿಗೆ ಯಾರ್‍ಯಾರು ಏನೇನು statements ಕೊಟ್ಟರು ಎನ್ನುವುದನ್ನು ನೋಡಬೇಕಾಗುತ್ತದೆ. ಹಣಕಾಸಿನ ಮಂತ್ರಿಗಳಾಗಿ ಮಾನ್ಯ ಬಿ.ಎಸ್.

ಯಡಿಯೂರಪ್ಪನವರು ಸಾಲ ಮನ್ನಾ ಮಾಡುತ್ತೇನೆ ಎಂದಾಗ, ಅದಕ್ಕೆ ಏನೇನು ಪ್ರತಿಕ್ರಿಯೆಗಳು ಬಂದವು ಎನ್ನುವುದನ್ನು ಸಭೆಯ ಮುಂದಿಟ್ಟರೆ ಸ್ವಲ್ಪ ಒಳ್ಳೆಯದಾಗುತ್ತದೆ. Press meet ಮಾಡಿ ಹೇಳಿದರು. ಪತ್ರಿಕೆಗಳಲ್ಲಿ ಜಾಹೀರಾತುಗಳು ಬಂದಿವೆ, ಹೇಳಿಕೆಗಳು ಪ್ರಕಟವಾಗಿದೆ. ನಿಜವಾಗಿ ಯಾರು ಸಾಲ ಮನ್ನಾ ಮಾಡಿದ್ದಾರೆ ಎನ್ನುವುದನ್ನು ಹೇಳಬೇಕಾಗುತ್ತದೆ.

ಶ್ರೀ ಬಂಡೆಪ್ಪ ಖಾಶೆಂಪೂರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಕುಮಾರಸ್ವಾಮಿಯವರು statement ಕೊಟ್ಟಾಗ ಶಿವಮೊಗ್ಗದಿಂದ ಒಂದು statement ಬಂದಿತ್ತು. ಅದನ್ನು ಮಾನ್ಯ ಕಾರಜೋಳ್‌ರವರು ನೋಡಿದ್ದಾರೋ, ಇಲ್ಲವೋ ಗೊತ್ತಿಲ್ಲ.

ಅಧ್ಯಕ್ಷರು : ನೀವು ಬರದ ಬಗ್ಗೆ ಮಾತನಾಡಿ.

ಶ್ರೀ ಬಂಡೆಪ್ಪ ಖಾಶೆಂಪೂರ್ : ಅವರು ಮಾತನಾಡಿದ್ದರಿಂದ ನಾನೂ ಈ ಬಗ್ಗೆ ಮಾತನಾಡುತ್ತಿದ್ದೇನೆ. ಇಲ್ಲದಿದ್ದರೆ, ನಾನು ಬೇರೆ ಮಾತನಾಡುತ್ತಿದ್ದೆ.

ಶ್ರೀ ಗೋವಿಂದ ಎಂ. ಕಾರಜೋಳ : ತಾವು ಮಾತನಾಡಿದ್ದರಿಂದ ತಾವು ಮಾತನಾಡಿದೆವು. ನಾವು ವಿನಾಕರಣ ಮಾತನಾಡುವುದಿಲ್ಲ.

ಶ್ರೀ ಬಂಡೆಪ್ಪ ಖಾಶೆಂಪೂರ್ : ಅವತ್ತು ನಿಮ್ಮವರೇ 'ಅದು ಹೇಗೆ ಸಾಲ ಮನ್ನಾ ಮಾಡುತ್ತೀರಿ? ಎಂದು ಮಾತನಾಡಿದ್ದರು. ಸಮ್ಮಿಶ್ರ ಸರ್ಕಾರದಲ್ಲಿ ತಮ್ಮ ಪಾಲೂ ಇದೆ. Complete ಆಗಿ ನಮ್ಮದೇ ಪಾಲು ಇದೆ ಎಂದು ನಾನು ಹೇಳಿಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ : ಸಾಧ್ಯವಿಲ್ಲ ಎಂದು ನೀವು ಹೇಳಿಲ್ಲ.

ಶ್ರೀ ಬಂಡೆಪ್ಪ ಖಾಶೆಂಪೂರ್ : ನೀವು ಅದಕ್ಕೆ ಆಗವುದಿಲ್ಲ ಎಂದು ಹೇಳದಿರಿ. ಆದರೆ....

ಅಧ್ಯಕ್ಷರು : ನೀವು ಬರದ ಬಗ್ಗೆ ಹೇಳುವುದಾದರೆ ಹೇಳಿ. ಇಲ್ಲದಿದ್ದರೆ ಬೇರೆಯವರಾದರೂ ಮಾತನಾಡಲಿ ಅವರ ಬಗ್ಗೆ ಈಗ ಚರ್ಚೆ ಬೇಡ

ಶ್ರೀ ಬಂಡೆಪ್ಪ ಖಾಶೆಂಪೂರ್ : ನಾನು ಅಂದು ಕೃಷಿ ಸಚಿವನಾಗಿದ್ದೆ. ಮುಖ್ಯವಾದ ಘಟನೆಯೊಂದನ್ನು ನಾನು ಹೇಳುತ್ತೇನೆ. ಮಾನ್ಯ ಕಾರಜೋಳ್‌ರವರು ಇದನ್ನು ಕೇಳಬೇಕು. ಇವತ್ತು ಇಡೀ ರಾಜ್ಯದಲ್ಲಿ, ಅದರಲ್ಲೂ ನಮ್ಮ ಉತ್ತರ ಕರ್ನಾಟಕ ಭಾಗದಲ್ಲಿ ಕಬ್ಬಿನ ಸಮಸ್ಯೆ ಬಹಳ ಇದೆ. ಹಿಂದೆ ಕಬ್ಬು factory ಗಳಿಗೆ crushingಗಾಗಿ ಹೋಗದೆ, complete ಹೊಲದಲ್ಲೇ ಬಿದ್ದಿದ್ದವು. ಆಗ ಮಾನ್ಯ ಕುಮಾರಸ್ವಾಮಿಯವರನ್ನು ನಾನು ಬೀದರ್‌ಗೆ ಕರೆದುಕೊಂಡು ಹೋಗಿ, ಅಲ್ಲಿ ಕಬ್ಬಿನ ಹೊಲದಲ್ಲಿ ನಿಲ್ಲಿಸಿದೆ. ಅವರು ಉಳಿದಿದ್ದ ಕಬ್ಬಿಗೆ ಹೆಕ್ಟೇರ್‌ಗೆ 25 ಸಾವಿರ ರೂ.ಗಳನ್ನು announce ಮಾಡಿದರು. ಇದೇ ಮಾಜಿ ಮುಖ್ಯಮಂತ್ರಿಗಳು ಬೀದರ್‌ಗೆ function ವೊಂದಕ್ಕೆ ಬಂದಿದ್ದರು. ಅವತ್ತು ಸಾಯಂಕಾಲ Cabinet meeting ಇತ್ತು. ನಾನು ಬೀದರ್‌ನಿಂದ flightನಲ್ಲೇ ಅವರ ಜೊತೆಯಲ್ಲೆ ಬಂದೆ. ಅವರಿಗೆ ನಾನು ಹೇಳಿದೆ. ಅವರು ನಿಮಗೆ ಮತ್ತು ಕುಮಾರಸ್ವಾಮಿಯವರಿಗೆ ಇದು ಸರಿಯಿಲ್ಲ. ಇದು ಹೇಗೆ ಮಾಡಲಿಕ್ಕಾಗುತ್ತದೆ ? ಇದಕ್ಕೆ ದುಡ್ಡು ಕೊಡಲಿಕ್ಕಾಗುವುದಿಲ್ಲ ಎಂದು ಹೇಳಿದರು. ಆಗ ನಾನು ಕ್ಯಾಬಿನೆಟ್‌ನಲ್ಲಿ ಮಾನ್ಯ ಕುಮಾರಸ್ವಾಮಿಯವರಿಗೆ ಹೇಳಿ, ಇದನ್ನು ಮಾಡಲೇಬೇಕು ಎಂದು ಹೇಳಿದಂತಹ ನಿಟ್ಟಿನಲ್ಲಿ ಅವತ್ತು ಆದು ಆಯಿತು.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಸಭಾಧ್ಯಕ್ಷರೆ, 'ಕೃಷ್ಣಾ'ದಲ್ಲಿ ಮಾನ್ಯ ಬಿ.ಎಸ್. ಯಡಿಯೂರಪ್ಪನವರು, ಉಪ ಮುಖ್ಯಮಂತ್ರಿಯಾಗಿ, ಹಣಕಾಸು ಮಂತ್ರಿಯಾಗಿ ಕಬ್ಬು ಬೆಳೆಗಾರರ ಸಭೆ ಕರೆದಿದ್ದರು. ನಾನೂ ಒಬ್ಬ ಕಬ್ಬು ಬೆಳೆಗಾರನಾಗಿದ್ದೇನೆ, ನಾನೂ ಆ ಸಭೆಯಲ್ಲಿದ್ದೆ, ಕೇವಲ ಮಂತ್ರಿಯಾಗಿ ಮಾತ್ರವಲ್ಲ, ಕಬ್ಬು ಬೆಳೆಗಾರನಾಗಿಯೂ ಸಹ ಅಲ್ಲಿಗೆ ಹೋಗಿ ಕುಳಿತಿದ್ದೆ, ಅದರ proceedings ತರಿಸೋಣ. ಆಗ meeting ಮಾಡಿದ್ದರ proceedings ತರಿಸಿ ನೀಟಾಗಿ ಇಡಿ.

ಶ್ರೀ ಬಂಡೆಪ್ಪ ಖಾಶೆಂಪೂರ್ : ಕ್ಯಾಬಿನೆಟ್ ಮೀಟಿಂಗ್ ಮಾಡಿದಾಗ...

ಶ್ರೀ ಗೋವಿಂದ ಎಂ. ಕಾರಜೋಳ ; ಸುಮ್ಮನೆ ಸಭೆಗೆ ತಪ್ಪು ಮಾಹಿತಿ ಹೋಗುವುದು ಬೇಡ.

ಅಧ್ಯಕ್ಷರು : ಈಗ ಹಳೆಯದೆಲ್ಲಾ ಏಕೆ ಮಾತನಾಡುತ್ತಿದ್ದೀರಿ ?

(ಗೊಂದಲ)

ಶ್ರೀ ಬಂಡೆಪ್ಪ ಖಾಶೆಂಪೂರ್ : ಎಲ್ಲಾ ದಾಖಲೆ ತರಿಸಿ.

ಅಧ್ಯಕ್ಷರು : ಈಗ ಏಕೆ ಅದೆಲ್ಲದರ ಬಗ್ಗೆ ಚರ್ಚೆ ಮಾಡುತ್ತೀರಿ ?

(ಗೊಂದಲ)

ಶ್ರೀ ಬಂಡೆಪ್ಪ ಖಾಶೆಂಪೂರ್ : ಇದಕ್ಕಿಂತ ಹೆಚ್ಚಿಗೆ ದುಡ್ಡು ಕೊಡುವುದಿಲ್ಲ ಎಂದು ಹೇಳಿದರು.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಸಭಾಧ್ಯಕ್ಷರೆ, ಅವರಿಗಿಂತಲೂ ಹೆಚ್ಚಿಗೆ ಕಬ್ಬಿನ ಬಗ್ಗೆ, ಅದರ factory ಗಳ ಬಗ್ಗೆ ಗೊತ್ತಿರುವವನು ನಾನು.

ಶ್ರೀ ಬಂಡೆಪ್ಪ ಖಾಶೆಂಪೂರ್ : ಗೊತ್ತಿಲ್ಲವೆಂದು ನಾನು ಹೇಳಲಿಲ್ಲ.

ಅಧ್ಯಕ್ಷರು : ಈಗ ಬರಗಾಲದ ಬಗ್ಗೆ ಮಾತನಾಡಿ

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ : ನೀವು ಸುಮ್ಮನೆ ಸುಳ್ಳು ಮಾಹಿತಿ ಹೇಳಬೇಡಿ.

ಶ್ರೀ ಬಂಡೆಪ್ಪ ಖಾಶೆಂಪೂರ್ : ಸುಳ್ಳು ಮಾಹಿತಿ ಕೊಟ್ಟಿಲ್ಲ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ : ಹಾಗಿದ್ದರೆ ಎಲ್ಲಾ ದಾಖಲೆ ತರಿಸಿ.

(ಗೊಂದಲ)

ಶ್ರೀ ಬಂಡೆಪ್ಪ ಖಾಶೆಂಪೂರ್ : ನಾನು ಒಬ್ಬ ಮಂತ್ರಿಯಾಗಿ ಅಂದಿನ ಕ್ಯಾಬಿನೆಟ್‌ನಲ್ಲಿ ಇದ್ದೆ, ನಾನು ಹೇಳುವುದು ಸತ್ಯವಲ್ಲವೆನ್ನುವುದಾದರೆ, ನಾಳೆ ಬೆಳಿಗ್ಗೆಯೇ ಬಿಟ್ಟು ಹೋಗುತ್ತೇನೆ. ಕ್ಯಾಬಿನೆಟ್‌ನಲ್ಲಿ ನೀವೂ ಇದ್ದಿರಿ, ನಾನು ಇದೆ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ : ಫೈಲ್ ತರಿಸಿ ಬಿಡಿ.

ಶ್ರೀ ಬಂಡೆಪ್ಪ ಖಾಶೆಂಪೂರ್ : ಕ್ಯಾಬಿನೆಟ್‌ನಲ್ಲಿ ನಾನು ಇದ್ದೆ ನೀವು ಇದ್ದೀರಿ.

ಶ್ರೀ ಗೋವಿಂದ ಎಂ. ಕಾರಜೋಳ : ಆ ರೀತಿ ಹೇಳಬೇಡಿ.

ಶ್ರೀ ಬಂಡೆಪ್ಪ ಖಾಶೆಂಪೂರ್ : ಆಯಿತು, ಮುಗಿಸುತ್ತೇನೆ ಇರಿ. ಹಾಗಾಗಿ ನಮ್ಮ ಟೈಮ್‌ನಲ್ಲಿ 75% ಬೀಜಕ್ಕೆ ಸಬ್ಸಿಡಿ ಕೊಟ್ಟಿದ್ದೆವು. ಮಾನ್ಯ ಕಾರಜೋಳರವರೆ ಇದು ಸುಳ್ಳಾ? ಈ ಸರ್ಕಾರದಲ್ಲಿ ಎಷ್ಟು ಬಂದಿದೆ. 50%ಗೆ ತಂದು ನಿಲ್ಲಿಸಿದ್ದಾರೆ. ಇದು ರೈತರ ಸರ್ಕಾರ ಹಸಿರು ಶಾಲು ಹಾಕಿಕೊಂಡು ಪ್ರಮಾಣ ವಚನ ಮಾಡಿ ಬರೀ 15 ದಿವಸದಲ್ಲಿ ರೈತರಿಗೆ ಹಾವೇರಿಯಲ್ಲಿ ಏನು ಘಟನೆ ಆಯಿತು ಯಾವ ರೀತಿ ತೊಂದರೆ ಆಯಿತು ಎನ್ನುವುದು ಇಡೀ ರಾಜ್ಯದ ಜನರಿಗೆ ಗೊತ್ತಿದೆ. ಗೊಬ್ಬರಿದಿಂದ ತೊಂದರೆ ಆಯಿತು. ನಾವು ಏನಾದರೂ ನಿಮ್ಮ ಕೈ ಹಿಡಿದಿದ್ದೇವಾ? ಗೊಬ್ಬರವನ್ನು ಕೊಡಬೇಡಿ ಎಂದು ಹೇಳಿದ್ದೇವಾ? ಇವತ್ತು ಎಷ್ಟು ಗೊಬ್ಬರ ಇದೆ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಇದಕ್ಕೆ ಹೊಣೆಗಾರರು. ರೈತ ಒಂದು ಚೀಲ ಗೊಬ್ಬರ ತರಬೇಕಾದರೆ 1275 ರೂ.ಗಳನ್ನು ಕೊಡುತ್ತಿದ್ದಾರೆ.

ಶ್ರೀ ಗೋವಿಂದ ಎಂ. ಕಾರಜೋಳ : ಏಕೆ ಹೇಳುತ್ತಿದ್ದೀರಿ? ಇದಕ್ಕೆ ಯಾರು ಜವಾಬ್ದಾರಿ. ಗೊಬ್ಬರವನ್ನು ಕೊಡುವುದು ಯಾರ ಜವಾಬ್ದಾರಿ.

ಶ್ರೀ ಬಂಡೆಪ್ಪ ಖಾಶೆಂಪೂರ್ : ಕೇಂದ್ರ ಸರ್ಕಾರ ಹೊಣೆಗಾರರೋ ರಾಜ್ಯ ಸರ್ಕಾರ ಹೊಣೆಗಾರರೋ ನನಗೆ ಗೊತ್ತಿಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ : ಗೊತ್ತಿಲ್ಲದಿದ್ದರೆ ಮಾತನಾಡಬೇಡಿ. ಗೊತ್ತಿದ್ದರೆ ಮಾತ್ರ ಮಾತನಾಡಿ. ತಪ್ಪು ಮಾಹಿತಿ ರೆಕಾರ್ಡಿಗೆ ಹೋಗಬಾರದು.

ಶ್ರೀ ಬಂಡೆಪ್ಪ ಖಾಶೆಂಪೂರ್ : ಮಾನ್ಯ ಅಧ್ಯಕ್ಷರೆ, ಇವತ್ತು ರಾಜ್ಯ ಸರ್ಕಾರದ ಬಗ್ಗೆ ನಿನ್ನೆ ನಿಮ್ಮ ನಾಯಕರು ಹೇಳಿಲ್ಲವೆ, ಕೇಂದ್ರ ಸರ್ಕಾರದ ಕಡೆ ಮುಖ ನೋಡಬೇಡಿ, ರಾಜ್ಯ ಸರ್ಕಾರ ನಿಮ್ಮ ಕೆಲಸ ಮಾಡಿ ಎಂದು ಹೇಳಿದರು. ಅದಕ್ಕಾಗಿ ನೀವು ಕೇಂದ್ರ ಸರ್ಕಾರದ ಕಡೆ ಕೈ ತೋರಿಸಬೇಡಿ.

ಇವತ್ತು ನೀವು ಕೆಲಸ ಮಾಡಿ. ಸಮ್ಮಿಶ್ರ ಸರ್ಕಾರ ಬಂದು ಹೋದ ಮೇಲೆ ರೈತರ ಹೆಸರಿನ ಮೇಲೆ ಇವರು ಬಂದರು. ನಾವು ಯಾರಾದರೂ ಕೈ ಹಿಡಿದಿದ್ದೇವಾ? ಇವರಿಗೆ ಸಾಲ ಮನ್ನಾ ಮಾಡಬೇಡಿ ಎಂದು ಹೇಳಿದ್ದೇವಾ?

ಅಧ್ಯಕ್ಷರು : ನೀವು ಬರಗಾಲದ ಬಗ್ಗೆ ಮಾತನಾಡಿ, ಬರೀ ಇದನ್ನೇ ಮಾತನಾಡುತ್ತೀರಲ್ಲಾ ?

ಶ್ರೀ ಬಂಡೆಪ್ಪ ಖಾಶೆಂಪೂರ್ : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಮೊದಲನೆಯ ಸಲ ಪ್ರವಾಹ ಬಂತು. ರಾಜ್ಯದಲ್ಲಿ 100 ವರ್ಷಕ್ಕಿಂತ ಹೆಚ್ಚಿನ ಪರಿಸ್ಥಿತಿ ಬರದಿಂದ ಬಂತು. ಇಲ್ಲಿ ನಮ್ಮ ನಾಯಕರು ಕುಳಿತಿದ್ದಾರೆ. ಆಗ ಸರ್ಕಾರದಲ್ಲಿ ಬಹಳಷ್ಟು ಜನ, ಈ ಸರ್ಕಾರ ರೈತರ ಸಾಲ ಮನ್ನಾ ಮಾಡುವುದಿಲ್ಲ. ತೆಗೆದುಕೊಂಡಿರುವ ಸಾಲವನ್ನು Medium Term and Long Term ಮಾಡಿ ಎಂದು ಹೇಳಿದೆವು. ಆದು ಮಾಡಲಿಲ್ಲ. ಹಾಗಾಗಿ ಇದೇ ಸರ್ಕಾರದಲ್ಲಿ 1000 ರೂ.ಗಳನ್ನು ಎಲ್ಲಾ ರೈತರಿಗೆ ಕೊಡುತ್ತೇವೆಂದು ಹೇಳಿದಿರಿ. ಬಜೆಟ್‌ನಲ್ಲಿ 500 ಕೋಟಿ ರೂ.ಗಳನ್ನು announce ಮಾಡಿದಿರಿ. ಎಷ್ಟು ಕೊಟ್ಟಿರಿ, ಸ್ವಾಮಿ? 210 ಕೋಟಿ ರೂ.ಗಳನ್ನು ಕೊಟ್ಟು 290 ಕೋಟಿ ರೂ.ಗಳನ್ನು ರೈತರಿಗೆ ನಾಮ ಇಟ್ಟುಬಿಟ್ಟಿರಿ. ಯಾರು ಬಜೆಟ್‌ನಲ್ಲಿ announce ಮಾಡಿದ್ದು ಮೊನ್ನೆ ಸುವರ್ಣ ಭೂಮಿ ಲೆಕ್ಕದಲ್ಲಿ 10 ಸಾವಿರ ರೂ.ಗಳನ್ನು 10 ಲಕ್ಷ ಜನರ ಸಲುವಾಗಿ 1,000 ಕೋಟಿ ರೂ.ಗಳನ್ನು ಬಜೆಟ್‌ನಲ್ಲಿ provision ಮಾಡಿದರು. ಅವರು ಹೇಳಬೇಕು. ಎಷ್ಟರ ಮಟ್ಟಿಗೆ ಅದು success ಆಗಿದೆ ಎಂಬುದನ್ನು ಇವತ್ತು hardly 50% ರೈತರಿಗ ಮುಟ್ಟಿದೆ. ಇವತ್ತು ಅದನ್ನು continue ಮಾಡುತ್ತೇವೆಂದು ಹೇಳಿದ್ದಾರೆ. ಈ ವರ್ಷವೂ ಲಾಟರಿ ಮೂಲಕ ಮಾಡುತ್ತೀರಿ. ಜನರು ಪರದಾಡಿ ಬಹಳ ಸಂಕಷ್ಟ ಪಟ್ಟಿದ್ದಾರೆ. ಇವತ್ತು ನಾನು ಹೇಳವುದಕ್ಕೆ ಬಯಸುತ್ತೇನೆ. ಇವತ್ತಿನ ಇಂತಹ ಕಷ್ಟಕಾಲದಲ್ಲಿ ರೈತರ ಪರವಾಗಿ ನಾಲ್ಕೂವರೆ ವರ್ಷದಲ್ಲಿ ಮಾನ್ಯ ಇಂಧನ ಸಚಿವರು ಇದ್ದಾರೆ. 6 ತಾಸು ಕರೆಂಟ್ ಕೊಡುತ್ತೇವೆಂದು ಹೇಳಿದ್ದು ನಮ್ಮ ಬೀದರ್ ಕಡೆಗೆ 4 ತಾಸಿಗೆ ಬಂದು ನಿಂತಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುವಂತೆ ಅದು 2 ತಾಸಿಗೆ ಬಂದು ನಿಂತಿದೆ. ಇಂತಹ ಕಷ್ಟದಲ್ಲಿ ಯಾವ ರೈತರು ನೆರವಿಗೆ

ಧಾವಿಸಿದ್ದೀರಿ? ಹೆಚ್ಚು ಕಡಿಮೆ ಈ ಸರ್ಕಾರ ಬಂದು ನಾಲ್ಕೂವರೆ ವರ್ಷವಾಗುತ್ತಿದೆ. ಹಿಂದಿನವರು ಮೂರುವರೆ ವರ್ಷ ಕೆಲಸ ಮಾಡಿದರು, ಅವರು ಏನೂ ಮಾಡವುದಕ್ಕಾಗಲಿಲ್ಲ. ಯಾವ ರೀತಿ administration ಮಾಡಿ ಕಾಲ ಕಳೆದಿದ್ದಾರೆ ಎನ್ನುವುದು ಇಡೀ ರಾಜ್ಯಕ್ಕೆ ಇವತ್ತು ಗೊತ್ತಿದೆ ಹಿಂದೆ ಮತ್ತೊಬ್ಬರ ಸರ್ಕಾರ ಬಂತು. ಪಾಪ 11 ತಿಂಗಳಲ್ಲಿ 21 ಖಾತೆಗಳನ್ನು ನಿರ್ವಹಿಸಿ ರೈತರ ಪರವಾಗಿ ಯಾವ ರೀತಿ ನಿರ್ಲಕ್ಷ್ಯ ಮಾಡಿದರು ಎನ್ನುವುದು ಗೊತ್ತಾಯಿತು. ಮಾನ್ಯ ಜಗದೀಶ್ ಶೆಟ್ಟರ್ ಮುಖ್ಯಮಂತ್ರಿಗಳಾಗಿ, ಶ್ರೀ ಈಶ್ವರಪ್ಪ ಮತ್ತು ಶ್ರೀ ಅಶೋಕ್‌ರವರು ಉಪ ಮುಖ್ಯಮಂತ್ರಿಗಳಾಗಿ ಈ ರಾಜ್ಯಕ್ಕೆ ಬಂದಿದ್ದಾರೆ. ಇವತ್ತು ಅವರನ್ನು ನಾವು ಸ್ವಾಗತ ಮಾಡುತ್ತೇವೆ. ಇವತ್ತು ರಾಜ್ಯ ಕಣ್ಣೆತ್ತಿ ನೋಡುತ್ತಿದೆ. 4 ವರ್ಷ 4 ತಿಂಗಳಲ್ಲಿ ಏನೂ ಕೆಲಸ ಆಗಿಲ್ಲ. ಇವತ್ತು 20/20 ಮ್ಯಾಚ್ ಮುಗಿದು ಟೆಸ್ಟ್ ಮ್ಯಾಚ್ ಕೂಡು ಮುಗಿದು ಹೋಯಿತು. ಇವತ್ತು ನೀವು ಇಬ್ಬರೂ ಸೇರಿ ರಾಜ್ಯದ ಜನತೆಗೆ ಒಂದೊಂದು ಬಾರಿಗೆ ಚೆಕ್ಕಾ, ಚೌಕಾ ಹೊಡೆದರೆ ಏನಾದರೂ ಅನುಕೂಲ ಆಗುತ್ತದೆ. ಇಲ್ಲವೆಂದರೆ ರಾಜ್ಯದ ಜನ ರೈತರು ಯಾವ ರೀತಿಯ ಆಶೆಯನ್ನೂ ಇಟ್ಟುಕೊಳ್ಳುವುದಿಲ್ಲ. ಈ ಸರ್ಕಾರ ನಾಲ್ಕೂವರೆ ವರ್ಷದಲ್ಲಿ ಏನೂ ಮಾಡಲಿಲ್ಲ ಉಳಿದಿರುವ 6 ತಿಂಗಳನಲ್ಲಿ ಏನು ಮಾಡುತ್ತೀರಿ ಎನ್ನುವ ಭಾವನೆ ಇದೆ, ಆ ನಿಟ್ಟಿನಲ್ಲಿ ಜನ ನಿರಾಶೆಯಾಗಿ ಕುಳಿತಿದ್ದಾರೆ. ಇವತ್ತು ಪಾಪ ಅವರು ಅಷ್ಟೊಂದು ದುಃಖದಲ್ಲಿದ್ದಾರೆ. ಬೀದರ್‌ನಲ್ಲಿ ಒಬ್ಬ ರೈತ ಹೊಲದಲ್ಲಿ ಮೆಣಸಿನಕಾಯಿ ಮತ್ತೊಂದು ಹಾಕಿ ಕರೆಂಟ್ ಕರೆಕ್ಟಾಗಿ ಸಿಗದೆ 4 ಎಕೆರೆ ನೀರಾವರಿಯಲ್ಲಿರುವ ಬೆಳೆ ಬರದೆ ನನ್ನ ಸಾಲ ಭಾದೆಯಾಗಿದೆ ಎಂದು ಹೇಳಿ ಮುಖ್ಯಮಂತ್ರಿಯವರ ಹೆಸರಿನ ಮೇಲೆ ಅಂದರೆ ಸರ್ಕಾರದ ಮೇಲೆ ಈ ರೀತಿ ನನಗೆ ಕಷ್ಟವಾಗಿದೆ ಎಂದು ಪತ್ರ ಬರೆದಿದ್ದಾನೆ. ಆಗ ನಾನು ಇದೇ ಸದನದಲ್ಲಿ ಇದೇ ಪ್ರಸ್ತಾಪ ಮಾಡಿದ್ದೆ. ಇವರಿಗೆ ಸಾಲ ಮನ್ನಾ ಮಾಡುವುದರ ಬಗ್ಗೆ ನೆನಪು ಬರಲಿಲ್ಲ. ಇವತ್ತು ಮಾಡಿದ್ದಾರೆ ಬಹಳ ಸಂತೋಷ. ಏಕೆಂದರೆ at-least ಈ ನಾಯಕರಿಗಾದರೂ credit ಸಿಗಲಿ. ಮಾನ್ಯ ಎ.ಎಸ್. ಪಾಟೀಲ್ (ನಡಹಳ್ಳಿ)ಯವರು, ಬಹಳಷ್ಟು ಜನ ಮಾನ್ಯ ರಾಮಕೃಷ್ಣ ಹೆಗಡೆಯವರನ್ನು

ಹಿಡಿದುಕೊಂಡು ಯಾರ್ಯಾರು ಸಾಲವನ್ನು ಮನ್ನಾ ಮಾಡಿದ್ದಾರೆಂದು ಹೇಳಿದರು. ಇವತ್ತು ನಿಜಕ್ಕೂ ಹೇಳಬೇಕಾದರೆ ರೈತರಿಗೆ direct ಮತ್ತು indirect ಯಾವ ರೀತಿಯ ಸೌಲಭ್ಯವೂ ಸಿಕ್ಕಿಲ್ಲ. ಬೀಜದ ಸಬ್ಸಿಡಿ ಮೊದಲು 75% ಇದ್ದದ್ದು ಈಗ 50%ಕ್ಕೆ ಮಾಡಿದ್ದೀರಿ. ರೈತರ ಉಪಕರಣಗಳು, ಸಮ್ಮಿಶ್ರ ಸರ್ಕಾರದಲ್ಲಿ ಟ್ರ್ಯಾಕ್ಟರ್‌ಗೆ ಸಬ್ಸಿಡಿ ಇತ್ತು. ಈ ಸರ್ಕಾರದಲ್ಲಿ ಅದಕ್ಕೆ ಸಬ್ಸಿಡಿ ಇಲ್ಲ. ಇವತ್ತು ಕೃಷಿ ಸಚಿವರು ಇಲ್ಲ. ಇವತ್ತು Weather Insurance correct ಆಗಿ ಆಗಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಹೇಳಿದರು. Parametric Rain Gauge System every ಗ್ರಾಮ ಪಂಚಾಯಿತಿಗೆ ಅಳವಡಿಸಬೇಕೆಂದು ಹೇಳಿದರು. It is mandatory, it should be adopted. ಇವತ್ತಿನವರೆಗೂ ಆ ಕೆಲಸ ಆಗಿಲ್ಲ. ಇಡೀ ರಾಜ್ಯಕ್ಕೆ 5–6 ಕೋಟಿ ರೂ.ಗಳಲ್ಲಿ ಮುಗಿದು ಹೋಗುತ್ತದೆ. ಒಂದೊಂದು ಪಂಚಾಯತಿಗೆ 50,000 ರೂ.ಗಳಲ್ಲಿ ಅದು ಮುಗಿದು ಹೋಗುತ್ತದೆ. ಹಾಗಾಗಿ ಇವರು ಆ ನಿಟ್ಟಿನಲ್ಲಿ ರೈತರಿಗೆ ಸ್ಪಂದಿಸಿ ಅವರ ಕಷ್ಟಸುಖಗಳಲ್ಲಿ ಭಾಗಿಯಾಗಬೇಕು. ಇವತ್ತು ನಾಲ್ಕೂವರೆ ವರ್ಷವಾಯಿತು. ನಾವು ಟಿವಿ ನೋಡಿದರೆ ಒಬ್ಬರು ರೆಸಾರ್ಟ್‌ನಲ್ಲಿ , ಒಬ್ಬರು ಅಲ್ಲಿ, ಒಬ್ಬರು ಇಲ್ಲಿ, ಒಬ್ಬರ ಮನೆಯಲ್ಲಿ ಊಟ, ಒಬ್ಬರ ಮನೆಯಲ್ಲಿ ಟಿಫಿನ್, ಇದಕ್ಕೆ ನಿಮ್ಮ ನಾಯಕರು ನಿಮಗೆ certificate ಕೊಟ್ಟು ಬಿಟ್ಟರು, ಯಾವ ಮಂತ್ರಿಯೂ success ಆಗಿಲ್ಲ, all ICve failed. ಹೊಸಬರಿಗೆ ಅಷ್ಟೇ ಅವಕಾಶವಿದೆ, ಏಕೆಂದರೆ ನೀವು ಹಿಂದೆ ಮಂತ್ರಿಗಳಾಗಿ ಇರಲಿಲ್ಲ. ಇವತ್ತು ನಾನು ವಿಶೇಷವಾಗಿ ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಡಿಸಿಎಂ ರವರೆಗೆ ಪ್ರಾರ್ಥನೆ ಮಾಡುತ್ತೇನೆ. ನಾವೆಲ್ಲಾ ಇವತ್ತು ಬರಗಾಲ ಪ್ರದೇಶದಿಂದ ಬಂದವರು. ಬೀದರ್‌ನಲ್ಲಿ ಇವತ್ತು ಭೀಕರ ಬರಗಾಲ ಇದೆ. ಬಿಜಾಪೂರ ಜಿಲ್ಲೆಯವರು ಆಲಮಟ್ಟಿ ಡ್ಯಾಂ ಇರುವುದರಿಂದ ಅವರು ಬಾಲಿ ಹೊಡೆದು ಅಲ್ಲಿ ಇಲ್ಲಿ ಸ್ವಲ್ಪ ನೀರು ಇರುವುದರಿಂದ ಸಂತೋಷದಲ್ಲಿದ್ದೀರಿ. ನಮಗೆ ಇರುವುದು ಕಾರಂಜಾ ಒಂದೇ ಒಂದು ಇರುವುದು. ಅದಕ್ಕೆ ಮಾನ್ಯ ಈಶ್ವರ ಖಂಡ್ರೆಯವರು, ನಮಗೂ ಸ್ವಲ್ಪ ನೀರು ಬೇಕು ಎಂದು ಅವರು ಸ್ವಲ್ಪ ತೆಗೆದುಕೊಂಡು ಬಿಟ್ಟರು. ಹಿಂದೆ submerge ನೀರು complete ಖಾಲಿ

ಆಗಿ ಬೀದರ್ ಜಿಲ್ಲೆಯಲ್ಲಿ 250 ಅಡಿಗೆ ಬೋರ್‌ವೆಲ್ ಕೊರೆದಾಗ ನೀರು ಸಿಗುತ್ತಾ ಇದ್ದಿದ್ದು ಇವತ್ತು 500 ಅಡಿಗೆ ಹೋಗಿದೆ. ಹಾಗಾಗಿ ಇವತ್ತು scarcity ಯಲ್ಲಿ ಬರೀ ಬೋರ್‌ವೆಲ್ ಕೊರೆಸುವುದು ಅಷ್ಟೇ ಅಲ್ಲ. ನಾವು ಇವತ್ತು water conservation ಗೋಸ್ಕರ ಇನ್ನೂ ಸ್ವಲ್ಪ ಹಣ ಇಡಬೇಕಾಗುತ್ತದೆ. ಇವತ್ತು ನಿಮಗೆ ಹೇಳಬೇಕಾದರೆ ಶಾಸಕರ ನಿಧಿಯಿಂದ 30 ಲಕ್ಷ ರೂ.ಗಳನ್ನು ಈ ಸಲ ನಾನು ಬೋರ್‌ವೆಲ್ ಹೊಡೆಯುವುದಕ್ಕೆ ಕೊಟ್ಟಿರುತ್ತೇನೆ. ನಾನು ಡಿಸಿ ಯವರಿಗೆ ನಿನ್ನೆ ದಿವಸ ಮಾತನಾಡಿದೆ. ಇವರು ಒಂದು ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದಾರೆ, ಆ ಹಣ ಇನ್ನೂ ಬಂದಿಲ್ಲ. ಬರೀ ಆರ್ಡರ್ ಬಂದಿದೆ ಅಷ್ಟೆ. ಮೇವಿನ ಬಗ್ಗೆ ಬಹಳಷ್ಟು ಜನ ಶಾಸಕರು ಚರ್ಚೆ ಮಾಡಿದರು. ಮಾನ್ಯ ಸದಾನಂದಗೌಡರು ಮುಖ್ಯ ಮಂತ್ರಿಯಾಗಿದ್ದಾಗ ನಮ್ಮ ಬೀದರ್ ಜಿಲ್ಲೆಗೆ ಬಂದಿದ್ದರು. ನಮ್ಮ in-charge ಮಂತ್ರಿಯಾಗಿ ಶ್ರೀ ರೇವುನಾಯಕ್ ಬೆಳಮಗಿಯವರು ಇದ್ದರು. ಅಲ್ಲಿ ಕುಳಿತುಕೊಂಡಾಗ ಎಲ್ಲಾ ಕಡೆ ಮೇವು ಸ್ಟಾಕ್ ಆಗಿದೆ, ಇದಕ್ಕೆ 50% ಸಬ್ಸಿಡಿ ಕೊಡುವುದರಿಂದ ಈ ಸಮಸ್ಯೆಯ ಹೋಗುವುದಿಲ್ಲ ಮೇವು ಕೆ.ಜಿ.ಗೆ ಅಲ್ಲಿ 6 ರೂ.ಗಳಿಗೆ ಮಾರುತ್ತಿದ್ದಾರೆ, ಅದು ಆ ಊರಿನಲ್ಲಿಯೇ 6 ರೂ.ಗಳಿಗೆ ಕೆ.ಜಿ. ಸಿಗುತ್ತದೆ. ಇಲ್ಲಾ ಅದು ಕರೆಕ್ಟಾಗಿದೆ 50% ಎಂದು announce ಮಾಡುತ್ತೇವೆಂದು ಹೇಳಿದರು. ಇದಕ್ಕೆ ಒಂದು ಆದೇಶ ಕಳುಹಿಸಿ ಎಂದು ಹೇಳಿದೆವು. ಅವರು ಹೇಳಿದ word ಹೇಳುತ್ತೇನೆ. See ನಾನು ಮುಖ್ಯಮಂತ್ರಿ, my word is an order ಎಂದು ಹೇಳಿದರು. ಅವರ ಪಕ್ಕದಲ್ಲಿ ಮಾನ್ಯ ರೇವುನಾಯಕ್ ಬೆಳಮಗಿಯವರು ಪಶುಸಂಗೋಪನೆ ಸಚಿವರು ಕುಳಿತಿದ್ದರು. ಮಾನ್ಯ ವಲ್ಯಾಪುರೆಯವರು ಇಲ್ಲಿ ಇಲ್ಲ. ಮೊನ್ನೆ ಅವರು ಹೊಸದಾಗಿ ಮಂತ್ರಿಯಾಗಿ 5–6 ದಿವಸ ಮುಂಚೆ ಬೀದರ್‌ಗೆ ಬಂದು ರಿವ್ಯೂ ಮಾಡಿದರು. Till today ಇದು 50% ಸಬ್ಸಿಡಿ ಇನ್ನುವರೆಗೆ ಸರ್ಕಾರಿ ಆದೇಶವಾಗಿಲ್ಲ. ಇದು ಯಾವ ಸರ್ಕಾರ, ಯಾವ ಮುಖ್ಯಮಂತ್ರಿ, ಯಾವ ಆರ್ಡರ್, ಯಾವ ಮಂತ್ರಿ, ಯಾರು ಈ ಕೆಲಸ ಮಾಡುತ್ತಿದ್ದಾರೆ? ಎಂದು ಹೇಳಿದರು. ಮುಖ್ಯಮಂತ್ರಿ ಎಂದರೆ ಅವರು ಬಹಳ busy ಇರುತ್ತಾರೆ. ಅವರಿಗೆ ನೆನಪು ಹೋಗಬಹುದು. ಪಕ್ಕದಲ್ಲಿ ಕುಳಿತ

ಪಶುಸಂಗೋಪನೆ ಸಚಿವರು at-least ಮುಖ್ಯಮಂತ್ರಿಗಳ ಹತ್ತಿರ ಹೋಗಿ ಸರ್ ನೀವು ಮಾತನಾಡಿದ್ದೀರಿ. ಇದನ್ನು ಮಾಡಬೇಕಾಗುತ್ತದೆ ಎನ್ನುವ ನಿಟ್ಟಿನಲ್ಲಿ ಒಂದು ಆರ್ಡರ್ ಹಾಕಿಸಿಕೊಂಡು ಇವತ್ತಿನವರೆಗೂ ಬಂದಿಲ್ಲ. ಬೀದರ್‌ನಲ್ಲಿ 67 ಟನ್ ಮೇವು ಮೇವು ಬ್ಯಾಂಕಿನಲ್ಲಿ ಸ್ಟಾಕ್ ಇವೆ. ಇವತ್ತಿನವರೆಗೆ ಅಲ್ಲಿಂದ ಬರೀ 2 ಟನ್ ಮೇವು ಹೋಗಿದೆ. ನೀವು ಎಲ್ಲವನ್ನೂ ಗಂಭೀರವಾಗಿ ಪರಿಗಣಿಸಿ ಮತ್ತೆ ವಿಶೇಷವಾಗಿ Employment Generation Scheme ಏನಿದೆ ಅದು ಯಾವ ಪಂಚಾಯಿತಿಯಲ್ಲಿಯೂ ಕಾರ್ಯರೂಪಕ್ಕೆ ಬಂದಿಲ್ಲ. ಕೇಂದ್ರ ಸರ್ಕಾರದ ಹಣವನ್ನು ಇವತ್ತು ನಾವು ಪ್ರಾಮಾಣಿಕತೆಯಿಂದ ಉಪಯೋಗ ಮಾಡಿಕೊಂಡರೆ ಅದು ನಮ್ಮ ಜನರಿಗೆ, ನಾಡಿನ ಅಭಿವೃದ್ಧಿಗೆ ಒಳ್ಳೆಯದಾಗುತ್ತದೆ. ಆ ನಿಟ್ಟಿನಲ್ಲಿ ಯಾವ ಅಧಿಕಾರಿಯೂ ಕೆಲಸ ಮಾಡುತ್ತಿಲ್ಲವೆನ್ನುವುದನ್ನು ಹೇಳುವುದಕ್ಕೆ ಬಯಸುತ್ತೇನೆ. ನಾವು ಏನೂ ಹೆಚ್ಚಿಗೆ ಸಲಹೆ ಕೊಡುವುದಿಲ್ಲ. ಏಕೆಂದರೆ, ನೀವು ನಾಲ್ಕೂವರೆ ವರ್ಷವನ್ನು ಕಳೆದುಕೊಂಡಿರುತ್ತೀರಿ. ರೈತರು, ಅಲ್ಪಸಂಖ್ಯಾತರ, ಬಡವರು ಎಲ್ಲರೂ ಇವತ್ತು ನಿರಾಶೆ ಆಗಿದ್ದಾರೆ. ಇವರೇನೂ ಮಾಡುವುದಿಲ್ಲ, ಬ್ಯಾಟಿಂಗ್ ಆಯಿತು, ಬೌಲಿಂಗ್ ಆಯಿತು, ಈಗೆಲ್ಲಾ ಮುಗಿದು ಹೋಯಿತು. ಈಗ ನಿಮ್ಮನ್ನು ಯಾರೂ ಕ್ಷಮಿಸುವುದಿಲ್ಲ., ಈ ರಾಜ್ಯದ ರೈತರು ನಿಮಗೆ ಶಾಪ ಹಾಕುತ್ತಾರೆ. ಆದುದರಿಂದ ನಾನು ಹೇಳುವುದೇನೆಂದರೆ, ಇವತ್ತು ನಿಜಕ್ಕೂ ನೀವು ಎಷ್ಟು ದಿವಸಗಳ ಕಾಲ ಅಧಿಕಾರದಲ್ಲಿರುತ್ತೀರಿ ಎಂಬುದು ಮುಖ್ಯವಲ್ಲ. ಈಗಾಗಲೇ ಎ.ಎಸ್. ಪಾಟೀಲರು ಮಾತನಾಡುತ್ತಾ ಐದಾರು ಜನರುಗಳಲ್ಲಿ, ಕೆಲವರು ಹದಿನೆಂಟು ತಿಂಗಳು ಅಧಿಕಾರ ನಡೆಸಿದ್ದಾರೆ. ಕೆಲವರು ಇಪ್ಪತ್ತು ತಿಂಗಳು ಅಧಿಕಾರ ನಡೆಸಿದ್ದಾರೆ. ಕೆಲವರು ಮೂರುವರೆ ವರ್ಷಗಳ ಕಾಲ ಅಧಿಕಾರ ನಡೆಸಿದ್ದಾರೆಂದರು. ಈಗ ನಿಮಗೆ 8 ತಿಂಗಳುಗಳ ಅವಕಾಶ ಸಿಕ್ಕಿದೆ. ಆದುದರಿಂದ ನಿಜವಾಗಿಯೂ ನೀವು ರೈತರ ಬಗ್ಗೆ ಕಾಳಜಿ ವಹಿಸಿ ಉತ್ತರವನ್ನು ಕೊಡಬೇಕು. ನೀವು ಕೊಡುವ ಉತ್ತರ ನಮಗೆ ಮಾತ್ರವಲ್ಲ, ಇಡೀ ರಾಜ್ಯದ ಜನತೆ ನಿಮ್ಮಿಂದ ಒಳ್ಳೆಯದನ್ನು ಅಪೇಕ್ಷೆ ಮಾಡುತ್ತಿದ್ದಾರೆ. ನಿನ್ನೆ ನೀವು ಹೇಳಿದ್ದನ್ನು ನಾವು ನೋಡಿದ್ದೇವೆ. ಏಕೆಂದರೆ ನಿನ್ನೆ ನೀವು

ಹೇಳಿದ್ದನ್ನು ನಾವು ನೋಡಿದಾಗ ಕಳೆದ ಮೂರುವರೆ ವರ್ಷದಲ್ಲಿ ಯಾರೂ ಮಾಡಲಾಗದ್ದನ್ನು ಮಾಡುತ್ತೇನೆ ಎನ್ನುವ ರೀತಿಯಲ್ಲಿ ಮುಖ್ಯಮಂತ್ರಿಗಳು ತಮ್ಮ ಆಡಳಿತ ವೈಖರಿಯಲ್ಲಿ ಅವರಿಗೆ ಛಾಟಿ, ಇವರು ಛಾಟಿ ಹೊಡೆದಂತೆ ಆಗಿದೆ ಎನ್ನುವುದನ್ನು ಎಲ್ಲಾ ಪೇಪರ್‌ಗಳಲ್ಲಿ ನಾನು ನೋಡಿದ್ದೇನೆ. ನಮ್ಮ ಹೈದ್ರಾಬಾದ್-ಕರ್ನಾಟಕದಲ್ಲಿ ಒಂದು ಗಾದೆ ಹೇಳುತ್ತಾರೆ. **ದೇರ್ ಆಯಾ ದುರಸ್ತ್ ಆಯಾ** ಎನ್ನುತ್ತಾರೆ. ಏಕೆಂದರೆ ಹಿಂದುಗಡೆಯಿಂದ ಕುಳಿತುಕೊಂಡು ಒಳ್ಳೆಯ ರೀತಿಯಲ್ಲಿ ಎಲ್ಲವನ್ನೂ ಸಮೀಕ್ಷೆ ಮಾಡಿ ಕಡೇ ಪಕ್ಷ ಇವತ್ತಾದರೂ ರಾಜ್ಯದ ರೈತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಮತ್ತು ವಿಶೇಷವಾಗಿ ರಾಜ್ಯದಲ್ಲಿ ಭೀಕರ ಬರಗಾಲ ಬಂದಿರುವಾಗ ಸರ್ಕಾರ ತನ್ನ ಉತ್ತರದಲ್ಲಿ ಒಳ್ಳೆಯ ರೀತಿಯಲ್ಲಿ ಕೂಡಿದ ಸಂದೇಶವನ್ನು ರಾಜ್ಯದ ರೈತರಿಗೆ ಕೊಡಬೇಕೆಂದು ಮನವಿ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಈಶ್ವರ ಭೀಮಣ್ಣ ಖಂಡ್ರೆ (ಭಾಲ್ಕಿ) : ಮಾನ್ಯ ಅಧ್ಯಕ್ಷರೆ, ಬರಗಾಲದ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟ ತಮಗೆ ವಂದಿಸುತ್ತೇನೆ. ಕರ್ನಾಟಕ ರಾಜ್ಯದ ಇತಿಹಾಸದಲ್ಲಿಯೇ ಕಂಡರಿಯದಂಥ ಭೀಕರ ಬರಗಾಲ ಬಂದಿವೆ. ಆದಾಗ್ಯೂ ಕೂಡ ಭಗವಂತನ ಕೃಪೆ ಎನ್ನಬಹುದು. ನಮ್ಮ ಜಿಲ್ಲೆಯಲ್ಲಿ ಅಲ್ಪಸ್ವಲ್ಪ ಮಳೆಯಾಗಿದೆ. ಸ್ವಲ್ಪ ಮಟ್ಟಿಗೆ ಮಳೆಯಾದರೂ ಕೂಡ ಇನ್ನೂ ಮಳೆಯ ಕೊರತೆ ನಮ್ಮ ಜಿಲ್ಲೆಯಲ್ಲಿದೆ. ನಮ್ಮಲ್ಲಿ ಇನ್ನೂ ಅನೇಕ ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. ಬರಗಾಲ ಬಂದಿರುವಾಗ ಈ ಸಮಸ್ಯೆಯನ್ನು ಯಾವ ರೀತಿಯಲ್ಲಿ ಸರ್ಕಾರ ಎದುರಿಸುತ್ತಿದೆ ಎನ್ನುವ ಬಗ್ಗೆ ನಾವು ವಿಚಾರ ಮಾಡಬೇಕಾಗಿದೆ. ಏಕೆಂದರೆ ನಾವು ಬೆಂಗಳೂರಿನಿಂದ ಕೇವಲ ದುಡ್ಡನ್ನು ಕಳುಹಿಸುತ್ತೇವೆ, ಇದರಿಂದಾಗಿ ಕುಡಿಯುವ ನೀರಿಗೆ ಏನೂ ತೊಂದರೆಯಿಲ್ಲವೆನ್ನುವ ಹೇಳಿಕೆಗಳನ್ನು ನಾವೆಲ್ಲರೂ ನೋಡಿದ್ದೇವೆ. ಕಳೆದ ವರ್ಷ ನಮ್ಮ ಜಿಲ್ಲೆಯಲ್ಲಿ, ಅದರಲ್ಲಿಯೂ ವಿಶೇಷವಾಗಿ ನಮ್ಮ ಭಾಲ್ಕಿ ತಾಲ್ಲೂಕಿನಲ್ಲಿ ಸಾಕಷ್ಟು ಮಳೆ ಅಭಾವದಿಂದ ನೂರಾರು ಹಳ್ಳಿಗಳಲ್ಲಿ ಕುಡಿಯುವ ನೀರಿಗೆ ತೊಂದರೆಯಾಯಿತು. ಸರ್ಕಾರದಿಂದ ಬರ ಪರಿಹಾರ ಯೋಜನೆಯಡಿಯಲ್ಲಿ ಹಣವೇನೋ ಸ್ವಲ್ಪ ಮಟ್ಟಿಗೆ ಬಿಡುಗಡೆಯಾಯಿತು. ಅದರೆ ಅವಶ್ಯಕತೆಯಿರುವಷ್ಟು ಹಣ

ಬಿಡಗಡೆಯಾಗಿಲ್ಲ. ನಾನು ಅನೇಕ ಸಲ ಸರ್ಕಾರಕ್ಕೆ ಮನವಿಗಳನ್ನು ಮಾಡಿದ್ದೇನೆ. ಪ್ರಸ್ತಾವನೆಗಳನ್ನು ಕಳುಹಿಸಿದ್ದೇನೆ. ನಮ್ಮಲ್ಲಿ ಈಗ ಏನು ಹಣ ಬಿಡುಗಡೆಯಾಗಿರುವಂಥದ್ದರಲ್ಲಿ 115 ಕೊಳವೆ ಬಾವಿಗಳನ್ನು ಹಾಕಿದ್ದರೂ ಕೂಡ, ಇನ್ನೂ ಸುಮಾರು 40 ಕೊಳವೆಬಾವಿಗಳಲ್ಲಿ ನೀರಿನ ಲಭ್ಯವಿದೆ. ಆದರೆ ಮೋಟಾರ್ ಅಳವಡಿಸುವುದಕ್ಕೆ ಹಣವಿಲ್ಲವೆಂದು ಹೇಳಿ ಕಳೆದ ಎರಡೂವರೆ ತಿಂಗಳುಗಳಿಂದ 40 ಬೋರ್‌ವೆಲ್‌ಗಳಿಗೆ ಸಿಂಗಲ್ ಫೇಸ್/ಥ್ರೀ ಫೇಸ್ ಮೋಟಾರ್‌ನ್ನು ಅಳವಡಿಸಿಲ್ಲ. ನಾನು ಇದರ ಬಗ್ಗೆ ಜಿಲ್ಲಾಧಿಕಾರಿಗಳ ಜೊತೆಯಲ್ಲಿ, ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿದಾಗ ಗ್ರಾಮ ಪಂಚಾಯಿತಿಯಿಂದ 13ನೇ ಹಣಕಾಸು ಆಯೋಗದಿಂದ ಹಣವನ್ನು ಕೊಡಿಸುತ್ತೇವೆಂದು, ಈಗಾಗಲೇ ಆದೇಶವನ್ನು ಹೊರಡಿಸಿದ್ದೇವೆಂದು ಹೇಳಿದರು. ಗ್ರಾಮ ಪಂಚಾಯಿತಿಯವರು ನಮ್ಮಲ್ಲಿ ದುಡ್ಡಿಲ್ಲವೆಂದು ಹೇಳುತ್ತಾರೆ. ಈ ನಿಟ್ಟಿನಲ್ಲಿ ಸರ್ಕಾರ ಪ್ರಸ್ತಾವನೆಯನ್ನು ಕಳುಹಿಸಿದಾಗ ಇನ್ನೂ ಅನುದಾನ ಬಂದಿಲ್ಲದಿರುವುದರಿಂದ ಆಡಳಿತ್ಮಾತಕ ಅನುಮೋದನೆಯನ್ನು ಕೊಡುವುದಕ್ಕೆ ಆಗಿಲ್ಲವೆಂದು ಹೇಳುತ್ತಾರೆ. ಈಗಾಗಲೇ ಬೋರ್‌ವೆಲ್ ಕೊರೆಸಿ ಅಲ್ಲಿ ಸರ್ಕಾರದ ಹಣವನ್ನು ವ್ಯಯ ಮಾಡಿ ಈಗಾಗಲೇ ಎರಡು ತಿಂಗಳು, ಮೂರು ತಿಂಗಳು, ಆರು ತಿಂಗಳುಗಳಾಗಿವೆ. ಕಳೆದ ವರ್ಷವೂ ಕೂಡ ಇದೇ ಪರಿಸ್ಥಿತಿ ಇತ್ತು. ಸನ್ಮಾನ್ಯ ಇಂದಿನ ಮುಖ್ಯಮಂತ್ರಿಗಳು, ಹಿಂದಿನ ಪಂಚಾಯತ್ ರಾಜ್ ಸಚಿವರು ನಡೆಸಿದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಕೂಡ ನಾನು ಈ ವಿಷಯವನ್ನು ಹೇಳಿದ್ದೇನೆ. ಈಗಾಗಲೇ ಬೋರ್‌ವೆಲ್ ಕೊರೆಸಿರುವುದರಲ್ಲಿ ನೀರಿನ ಲಭ್ಯತೆ ಇದ್ದರೂ ಕೂಡ ಅವುಗಳಿಗೆ ಮೋಟಾರ್ ಅಳವಡಿಸಿಲ್ಲ, ವಿದ್ಯುತ್ ಸಂಪರ್ಕವನ್ನು ಒದಗಿಸಿಲ್ಲ, ಸರ್ಕಾರದ ಹಣವೂ ಕೂಡ ವ್ಯಯವಾಗುತ್ತದೆ, ಜನರಿಗೆ ಕೇವಲ ತೋರಿಸುವುದಕ್ಕೆ ಶಾಸಕರೇನೋ ಬೋರ್ ಕೊರೆಸಿದರಪ್ಪಾ ಆದರೆ ಆದರಿಂದ ನೀರಾಗಲಿ, ನೀರನ್ನು ಎತ್ತುವುದಕ್ಕೆ ಮೋಟಾರ್ ಆಗಲಿ ಕೂರಿಸಲಿಲ್ಲ. lip sympathy ಗೆ ಕೇವಲ ತೋರಿಕೆಗಾಗಿ ಮಾಡುತ್ತಿದ್ದೇವೆಯೇ ಹೊರತು ನಿಜವಾಗಿಯೂ ಯಾವುದು ಒಂದು ಯೋಜನೆಯೂ ಕೂಡ ಪರಿಣಾಮಕಾರಿಯಾಗಿ

ಅನುಷ್ಠಾನವಾಗುತ್ತಿಲ್ಲವೆನ್ನುವಂತಾಗಿದೆ. ಆದುದರಿಂದ ಯೋಜನೆ ಅನುಷ್ಠಾನವಾಗಲು ಸರ್ಕಾರ ತಕ್ಷಣ ಅವಶ್ಯಕತೆ ಇರುವಂಥ ಹಣವನ್ನು ಬಿಡುಗಡೆ ಮಾಡಿ ಎಲ್ಲೆಲ್ಲಿ ಬೋರ್‌ಗಳನ್ನು ಕೊರೆಯಲಾಗಿದೆಯೋ ಅವುಗಳಿಗೆ ಮೋಟಾರ್‌ಗಳನ್ನು ಅಳವಡಿಸುವುದಕ್ಕೆ ಮತ್ತು ವಿದ್ಯುತ್ ಸಂಪರ್ಕವನ್ನು ಕೊಡುವುದಕ್ಕೆ ಶೀಘ್ರವಾಗಿ ಕ್ರಮ ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಮನವಿಯನ್ನು ಮಾಡುತ್ತಿದ್ದೇನೆ. ಇನ್ನು ಎರಡನೆಯದಾಗಿ ಈಗ ಬರಗಾಲವಿದೆಯೆಂದು ನಮ್ಮ ಭಾಗದ ಜನರು ಗುಳೆ ಹೋಗುತ್ತಿದ್ದಾರೆ. ಇದು ಬಹಳ ಗಂಭೀರವಾದಂಥ ವಿಚಾರವಾಗಿದೆ. ಇದರಲ್ಲಿ ಮಹಾತ್ಮ ಗಾಂಧಿ ಉದ್ಯೋಗ ಖಾತರಿ ಯೋಜನೆ ಯಾವ ರೀತಿಯಲ್ಲಿ ಹಳ್ಳ ಹಿಡಿದು ಹೋಗಿದೆಯೆಂದರೆ, ನಮ್ಮ ಜಿಲ್ಲೆಯಲ್ಲಿ ನಮ್ಮ ತಾಲ್ಲೂಕಿನಲ್ಲಿ 2010–2011ರಲ್ಲಿ ಸುಮಾರು ನೂರು ಕೋಟಿ ರೂ.ಗಳನ್ನು ಉದ್ಯೋಗ ಖಾತರಿ ಯೋಜನೆಯಲ್ಲಿ ಖರ್ಚು ಮಾಡಿದ್ದೇವೆಂದು, ಎಂ.ಐ.ಎಸ್. ಮಾಡಿ, ಏನೇನೋ ಆಗಿ ಇವತ್ತು ಯಾವ ಪರಿಸ್ಥಿತಿಯೆಂದರೆ, 2009–10ನೇ ಇಸವಿಯದ್ದೂ ಇನ್ನೂ ಒಂದು ಕೋಟಿ ರೂ.ಗಳ ಪಾವತಿ ಮಾಡಬೇಕಾಗಿರುವುದು ಬಾಕಿಯಿದೆ. 2010–11ನೇ ಇಸವಿಯನ್ನು ಹತ್ತು ಕೋಟಿ ರೂ.ಗಳ ಪಾವತಿ ಮಾಡಬೇಕಾಗಿರುವುದು ಇವತ್ತಿಗೂ ಬಾಕಿಯಿದೆ. ಈ ಬಗ್ಗೆ ಸರ್ಕಾರ ಯಾವ ರೀತಿಯಲ್ಲಿ ಕ್ರಮವಹಿಸುತ್ತಿದೆ? ಅಧಿಕಾರಿಗಳು ಏನು ಕೆಲಸವನ್ನು ಮಾಡುತ್ತಿದ್ದಾರೆ? ಸನ್ಮಾನ್ಯ ಜಗದೀಶ್ ಶೆಟ್ಟರ್‌ರವರು ಆರ್.ಡಿ.ಪಿ.ಆರ್. ಸಚಿವರಾಗಿದ್ದಾಗ ಪ್ರಗತಿ ಪರಿಶೀಲನಾ ಸಭೆಯಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೆ. ಒಂದು ತಿಂಗಳಲ್ಲಿ ನಾವು ತನಿಖೆಯನ್ನು ಮಾಡಿ ಹಣವನ್ನು ಬಿಡುಗಡೆ ಮಾಡಿಸುತ್ತೇವೆಂದರು. ಆದರೆ ಇವತ್ತಿನವರೆಗೂ 2009–10, 2010–11ನೇ ಸಾಲಿನ ಬಾಕಿ ಇದ್ದಂಥ 11 ಕೋಟಿ ರೂ.ಗಳ ಹಣವನ್ನು ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಬಿಡುಗಡೆ ಮಾಡಿಲ್ಲ. ಹೀಗಾದರೆ ಕೆಲಸವನ್ನು ಮಾಡಿದ ಆ ಕಾರ್ಮಿಕರುಏನು ಮಾಡಬೇಕು ಹೇಳಿ? ಅವರುಗಳು ಆತ್ಮಹತ್ಯೆ ಮಾಡಿಕೊಳ್ಳುವಂಥ ಪರಿಸ್ಥಿತಿ ಬಂದಿದೆ. ಯಾವ ರೈತರುಗಳು ಬಾವಿಯನ್ನು ತೋಡಿದ್ದಾರೆ, ಏನೋ ಒಂದಷ್ಟು ಹಣ ಬರುತ್ತದೆಂದು ಹೇಳಿ ಅಂದಾಜು

ಮಾಡಿದ್ದಾರೋ, ಸಾಹುಕಾರರ ಹತ್ತಿರ ಬಾಕಿ ಪಡೆದುಕೊಳ್ಳಲು ಬಂದಿದ್ದಾರೆ. ಈಗಾಗಲೇ ಅಂದಾಜು ಬಗ್ಗೆ Third Party ಯಿಂದ ತಪಾಸಣೆಯಾಯಿತು, ಇದಾದ ಮೇಲೆ ಜಿಲ್ಲಾ ಮಟ್ಟದ ಅಧಿಕಾರಿಗಳಿಂದ ತಪಾಸಣೆಯಾಯಿತು, ರಾಜ್ಯ ಮಟ್ಟದ ಅಧಿಕಾರಿಗಳಿಂದ ತಪಾಸಣೆಯಾಯಿತು. ಯಾವಾಗ ತಪಾಸಣೆ ಮಾಡಿದರೂ ಅಲ್ಲಿಯೂ ಅವ್ಯವಹಾರ, ಅಲ್ಲಿಯೂ ಅಕ್ರಮ, ಅಲ್ಲೆಲ್ಲಾ ದುಡ್ಡು ಹೊಡೆದು, ಇವತ್ತು ನಿಜವಾಗಿಯೂ ಉದ್ಯೋಗ ಖಾತರಿ ಯೋಜನೆಯಲ್ಲಿ ಯಾವ ರೈತರುಗಳು ಕೆಲಸವನ್ನು ಮಾಡಿದ್ದಾರೋ ಅವರುಗಳಿಗೆ ಬಿಡುಗಡೆಯಾಗಬೇಕಿರುವ 11 ಕೋಟಿ ರೂ.ಗಳ ಹಣವನ್ನು ಕೂಡಲೇ ಸರ್ಕಾರ ಬಿಡುಗಡೆ ಮಾಡಬೇಕೆಂದು ಸರ್ಕಾರೆಕ್ಕೆ ಮನವಿ ಮಾಡಿಕೊಳ್ಳುತ್ತಿದ್ದೇನೆ. ಹಣ ಬಿಡುಗಡೆ ಮಾಡದಿರುವುದು, ಇದೊಂದು criminal negligence ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ನಮ್ಮದು ಗಡಿ ಭಾಗವಾಗಿದ್ದು 750 ಕಿ.ಮೀ. ದೂರದಲ್ಲಿದ್ದೇವೆ. ಆದುದರಿಂದ ನಾವು ನಮ್ಮ ಬಗ್ಗೆ ಆದ್ಯತೆ ಕೊಟ್ಟು ನಮ್ಮ ಜನರ ಸಮಸ್ಯೆಗಳನ್ನು ಬಗೆಹರಿಸುವಂಥ ನಿಟ್ಟಿನಲ್ಲಿ ಸರ್ಕಾರಕ್ಕೆ ಆದೇಶವನ್ನು ಕೊಡಬೇಕು. ಈಗ ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದಿದೆ. ಈ ತಕ್ಷಣ ಉದ್ಯೋಗ ಖಾತರಿ ಯೋಜನೆಯಲ್ಲಿ 2009-10, 2010-11 ರ 11 ಕೋಟಿ ರೂ.ಗಳ ಬಾಕಿ ಪಾವತಿ ಹಣವನ್ನು ಬಿಡುಗಡೆ ಮಾಡಬೇಕು. ಇದುವರೆಗೂ ಬಾಕಿ ಹಣವನ್ನು ಬಿಡುಗಡೆ ಮಾಡಿದರುವುದರಿಂದ ಅಲ್ಲಿಯ ಜನರು, ಕಾರ್ಮಿಕರು ಆತ್ಮಹತ್ಯೆ ಮಾಡಿಕೊಳ್ಳುವಂಥ ಪರಿಸ್ಥಿತಿಗೆ ಬಂದಿದ್ದಾರೆ. ಹೀಗಿರುವಾಗ ಯಾವ ನೈತಿಕತೆಯಿಂದ ಉದ್ಯೋಗ ಖಾತರಿ ಯೋಜನೆಯಲ್ಲಿ ನಾವು ಕೆಲಸವನ್ನು ಮಾಡುತ್ತೇವೆಂದು ಹೇಳುವುದಕ್ಕಾಗುತ್ತದೆ ಹೇಳಿ ಇದರ ಬಗ್ಗೆ ಯಾರ ಮೇಲೋ ಗೂಬೆ ಕೂರಿಸುವಂಥದ್ದಲ್ಲ. ಲೆಕ್ಕವನ್ನು ಕೊಡದೇ ಇರುವುದಕ್ಕೆ ಸರ್ಕಾರದ ಹಣವನ್ನು ಬಿಡುಗಡೆ ಮಾಡಿಲ್ಲವೆನ್ನುವುದನ್ನು ಅರ್ಥ ಮಾಡಿಕೊಳ್ಳಬೇಕೆಂದು ಮಾನ್ಯ ಅಧ್ಯಕ್ಷರ ಮುಖೇನ ಸರ್ಕಾರಕ್ಕೆ ವಿನಂತಿ ಮಾಡುತ್ತಿದ್ದೇನೆ. ಇನ್ನು ಮೂರನೆಯದಾಗಿ ನಮ್ಮ ಭಾಗದಲ್ಲಿ ಕಳೆದ ವರ್ಷ ಕೂಡ ಮುಂಗಾರು ಬೆಳೆ ಸಂಪೂರ್ಣ ನಾಶವಾಗಿ ನಷ್ಟವಾಗಿದೆ. ರೈತರುಗಳು ಬೆಳೆ ವಿಮೆ ಹಣವನ್ನು ಕಟ್ಟಿದ್ದಾರೆ. ಆದರೆ ಇವತ್ತಿಗೂ ಕೂಡ

ಕಳೆದ ವರ್ಷದ ಬೆಳೆ ವಿಮೆ ಪರಿಹಾರದ ಹಣವನ್ನು ಬಿಡುಗಡೆ ಮಾಡಿಲ್ಲ. ಇದೊಂದು ಅಪರಾಧವೆಂದು ನಾನು ಹೇಳಬಯಸುತ್ತೇನೆ. ಇಷ್ಟೆಲ್ಲಾ ಮಾತನಾಡುತ್ತೇವೆ. ಪ್ರತ್ಯೇಕವಾಗಿ ಹತ್ತು ಸಾವಿರ ಕೋಟಿ ರೂ.ಗಳನು ಬಿಡುಗಡೆ ಮಾಡಬೇಕೆಂಮ ಹೇಳುತ್ತಿದ್ದೇವೆ, ಆದರೆ ಏಪ್ರಿಲ್, ಮೇ, ಜೂನ್, ಆದರೂ ಕೂಡ ಬಿಡುಗಡೆ ಮಾಡಬೇಕಾದ ಬೆಳೆ ವಿಮೆ ಪರಿಹಾರದ ಹಣವನ್ನು ಇನ್ನೂ ಬಿಡಗಡೆ ಮಾಡಿಲ್ಲ, ಈಗಾಗಲೇ ನಾವು ಆಗಸ್ಟ್‌ನಲ್ಲಿದ್ದೇವೆ. ಜನರು ಕಾಯುತ್ತಿದ್ದಾರೆ, ದಾರಿ ನೋಡುತ್ತಿದ್ದಾರೆ. ಇವತ್ತು ಬರುತ್ತದೆ, ಹಣ, ನಾಳೆ ಬರುತ್ತದೆಂದು ಕಾಯುತ್ತಿದ್ದಾರೆ, ಕೃಷಿ ಅಧಿಕಾರಿಗಳನ್ನು ಕೇಳಿದರೆ ಕೇಂದ್ರ ಸರ್ಕಾರದಿಂದ ಬರಬೇಕಾದ ಹಣ ಬಂದಿದೆ. ಆದರೆ ರಾಜ್ಯ ಸರ್ಕಾರದಿಂದ ಬಂದಿಲ್ಲವೆಂದು ಹೇಳುತ್ತಾರೆ. ಆದುದರಿಂದ ತಕ್ಷಣವೇ ರಾಜ್ಯ ಸರ್ಕಾರ ಬೆಳೆ ವಿಮೆ ಪರಿಹಾರದ ಹಣವನ್ನು ಬಿಡುಗಡೆ ಮಾಡಬೇಕೆಂದು ನಾನು ಸರ್ಕಾರಕ್ಕೆ ಮನವಿ ಮಾಡುತ್ತಿದ್ದೇನೆ. ಇನ್ನು ಕಡೆಯದಾಗಿ ಇವತ್ತು ಕೃಷಿ ಇಲಾಖೆಯಲ್ಲಿ ಮನವಿ ಮಾಡುವುದೇನೆಂದರೆ, ಇವತ್ತು ನಮ್ಮಲ್ಲಿ ಯೂರಿಯಾ ಕೊರತೆ ಇದೆ. ಸ್ಪ್ರೇಯರ್‌ಗಳ ಕೊರತೆ ಇದೆ. ಕೇವಲ ನೂರು ಸ್ಪ್ರೇಯರ್‌ಗಳನ್ನು ಕೊಟ್ಟಿದ್ದಾರೆ, ಆದರೆ ಒಂದು ಸಾವಿರ ಬೇಕೆಂಬ ಬೇಡಿಕೆಯಿದೆ. ಲಘು ನೀರಾವರಿ ಯೋಜನೆಯಲ್ಲಿ ನಮ್ಮಲ್ಲಿ ಸ್ಪ್ರಿಂಕ್ಲರ್‌ಗಳ ಬೇಡಿಕೆಯಿದೆ. ಒಂದು ಸಾವಿರ ಸ್ಪ್ರಿಂಕ್ಲರ್ ಬೇಕು. ಇದರ ಜೊತೆಗೆ ಅವಶ್ಯಕತೆ ಇರುವಂಥದ್ದೇನೇನು ಬೇಕಾಗಿದೆಯೋ ಅವುಗಳಿಗೆ ಬೇಕಾದ ಹಣವನ್ನು ಇನ್ನೂ ಕೊಟ್ಟಿಲ್ಲ. ಈ ಯಂತ್ರಗಳಿಗೆ ಸಬ್ಸಿಡಿ ಕೊಟ್ಟಿಲ್ಲ. ಬೇರೆ ಯಾವು ಯಾವುದಕ್ಕೋ ಹಣವನ್ನು ಕೊಡುತ್ತೀರಿ. ಆದರೆ ಅದು ಏನು ಉಪಯೋಗವಾಗುತ್ತದೆ? ಅವಶ್ಯಕತೆ ಯಾವ ಯಾವ ತಾಲ್ಲೂಕುಗಳಲ್ಲಿ, ಯಾವ ಯಾವ ಜಿಲ್ಲೆಗಳಲ್ಲಿದೆ, ರೈತರುಗಳು ಯಾವುದನ್ನು ಬೆಳೆಯುತ್ತಾರೆ, ಯಾವ ಬೆಳಗೆ ರೈತರಿಗೆ ಏನು ಅವಶ್ಯಕತೆಯಿದೆಯೋ ಅಂಥವುಗಳಿಗೆ ಸರ್ಕಾರದ ಕಡೆಯಿಂದ ಏನು ರಿಯಾಯಿತಿ ಕೊಡಬೇಕೋ ಅದನ್ನು ಕೊಡಬೇಕು ಮತ್ತು ನೀರಾವರಿ ಯೋಜನೆಗಳನ್ನು ಪೂರ್ಣ ಮಾಡಬೇಕು. ಮತ್ತು ರೈತರ ಸಾಲ ಮನ್ನಾ ಮಾಡಬೇಕು. ರೈತರ ಬೆಳೆ ಸಾಲವಿರಲಿ, ಮಧ್ಯಾಮವಧಿ ಸಾಲವಿರಲಿ,

ದೀರ್ಘಾವಧಿ ಸಾಲವಿರಲಿ, ಇವತ್ತು ದೀರ್ಘಾವಧಿ ಸಾಲವನ್ನು ಮಧ್ಯಮಾವಧಿ ಸಾಲವೆಂದು ಮಾಡಬೇಕೆಂದು ನಬಾರ್ಡ್‌ರವರು ಹೇಳಿದ್ದಾರೆ. ಆದರೆ ಯಾವ ಸಹಕಾರ ಕ್ಷೇತ್ರದ ಬ್ಯಾಂಕ್‌ನವರು ಕೂಡ ಇವತ್ತಿನವರೆವಿಗೂ ಇದನ್ನು ಅನುಷ್ಠಾನಕ್ಕೆ ತಂದಿಲ್ಲ. ಆದರೆ ಪೇಪರ್‌ನಲ್ಲಿದೆ, ಬರೇ 5 ಪ್ರತಿಶತ, 10 ಪ್ರತಿಶತ, 100 ಪ್ರತಿಶತ ಮಾಡಬೇಕೆಂದು ಹೇಳಿ ಕೇಂದ್ರ ಸರ್ಕಾರದ, ಆರ್.ಬಿ.ಐ. ಗೈಡ್‌ಲೈನ್ ಇದ್ದರೂ ಅದು ಅನುಷ್ಠಾನಕ್ಕೆ ಬರುತ್ತಿಲ್ಲ. ಈ ಗೈಡ್‌ಲೈನ್ ಯಾವುದೇ ರೀತಿಯಲ್ಲಿಯೂ ಅನುಷ್ಠಾನವಾಗುತ್ತಿಲ್ಲ. ಇದೊಂದು ಗಂಭೀರವಾದ ವಿಷಯ. ನೀವು ಕೇವಲ ಭಾಷಣ ಮಾಡಿ ಪೇಪರ್‌ಗಳಲ್ಲಿ ಹಾಕಿಸಿಕೊಂಡರೆ ಒಳ್ಳೆಯದಾಗುವುದಿಲ್ಲ. ರೈತರ ಬಗ್ಗೆ ಪಕ್ಷಾತೀತವಾಗಿ ಚರ್ಚಿಸಿ ಕ್ರಮ ತೆಗೆದುಕೊಂಡು ರೈತರ ಸಮಸ್ಯೆಗಳನ್ನು ಬಗೆಹರಿಸಿಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಸರ್ಕಾರಕ್ಕೆ ಮನವಿ ಮಾಡಿ, ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎನ್.ಎಸ್. ನಂದೀಶ್ ರೆಡ್ಡಿ (ಕೆ.ಆರ್. ಪುರ) : ಮಾನ್ಯ ಅಧ್ಯಕ್ಷರೆ, ಭೀಕರ ಬರಗಾಲದ ಬಗ್ಗೆ ಕಳೆದ ಎರಡೂ ದಿನಗಳಿಂದ ಸುದೀರ್ಘವಾದ ಚರ್ಚೆ ನಡೆಯುತ್ತಿರುವಾಗ ಬೆಂಗಳೂರಿನ ಶಾಸಕರಿಗೆ ಏನಪ್ಪಾ ಬರ ಎನ್ನುವಂಥ ಪ್ರಶ್ನೆ ಹಲವಾರು ಜನ ನಾಯಕರದ್ದಾಗಿದೆ. ಆದರಲ್ಲಿಯೂ ಸಿ.ಟಿ. ರವಿ ಸಾಹೇಬರು ಎದ್ದು ನಿಂತಿದ್ದಾರೆ. ಆದರೆ ಸನ್ಮಾನ್ಯ ಸಭಾಧ್ಯಕ್ಷರೆ, ಇಡೀ ರಾಜ್ಯ ಬರದಿಂದ ತತ್ತರಿಸುತ್ತಿರುವಂಥ ಈ ಸಂದರ್ಭದಲ್ಲಿ ನಮ್ಮ ಬೆಂಗಳೂರು ಜಿಲ್ಲೆಯ ವಿಚಾರವಾಗಿ ಬಹಳಷ್ಟು ಜನರು ಅಂದುಕೊಂಡಿರತಕ್ಕಂಥದ್ದು ಬೆಂಗಳೂರಿನವರಿಗೆ ತಾಪತ್ರಯವೇ ಇಲ್ಲವೆಂದು ತಿಳಿದುಕೊಂಡಿದ್ದಾರೆ. ಆದರೆ ಇವತ್ತು ಬೆಂಗಳೂರಿನ ಜನಸಂಖ್ಯೆ ರಾಜ್ಯದ ಜನಸಂಖ್ಯೆಯ ಶೇಕಡ 15 ರಿಂದ 20 ರಷ್ಟಿದೆ. ಇಂಥ ಬೆಂಗಳೂರಿನಲ್ಲಿರುವ ನಾಗರಿಕರಿಗೆ ಕುಡಿಯುವ ನೀರಿಗೆ ಬಹಳ ತೊಂದರೆಯಿದೆ. ರೈತರುಗಳು ಮೊದಲಿದ್ದಂಥ ಸಂದರ್ಭವನ್ನು ನೋಡಿದರೆ ತದನಂತರದಲ್ಲಿ urbanization ಆಗುತ್ತಾ ಬಹಳಷ್ಟು ರೈತರುಗಳು ಪಕ್ಕದ ಜಿಲ್ಲೆಗಳಿಗೆ ತಮ್ಮ ಜೀವನವನ್ನು ನಡೆಸುವ ನಿಟ್ಟಿನಲ್ಲಿ ಹೋದಾಗ, ಬೇರೆ

ಜಿಲ್ಲೆಗಳಿಂದ ಜನರು ಬೆಂಗಳೂರಿಗೆ ವಲಸೆ ಬಂದಿರತಕ್ಕಂಥದ್ದು ಕೂಡ ಹೆಚ್ಚಾಗಿದೆ. ರಾಜ್ಯದ ಜನಸಂಖ್ಯೆ ಶೇಕಡ 15 ರಿಂದ 20 ರಷ್ಟು ಹೊಂದಿರತಕ್ಕಂಥ ಬೆಂಗಳೂರು ನಗರದಲ್ಲಿ ಇವತ್ತು ಕುಡಿಯುವ ನೀರಿಗೆ ಯಾವ ರೀತಿ ಪರಿಸ್ಥಿತಿ ಬಂದಿದೆಯೆಂದರೆ, ಕಾವೇರಿ ನೀರು ಯಾವುದಾದರೂ ಒಂದು ಮನೆಗೆ ಬರುತ್ತದೆಂದರೆ ಅದು ವಾರಕ್ಕೊಂದು ದಿನ ಅಥವಾ ಹತ್ತು ದಿನಕ್ಕೊಂದು ದಿನ ಬರುವಂಥದ್ದಾಗಿದೆ. ಅದೂ ಕೂಡ ಮೊದಲಿದ್ದಂಥ ಬಿಎಂ.ಪಿ. ವ್ಯಾಪ್ತಿಯಲ್ಲಿ, ಅದರೆ ಬೃಹತ್ ಬೆಂಗಳೂರು ಮಹಾನಗರಪಾಲಿಕೆಯಾದ ನಂತರ, ಸುಮಾರು 800 ಚದರ ಕಿ.ಮೀ. ವ್ಯಾಪ್ತಿಯ ಪ್ರದೇಶಗಳು ಬಿ.ಬಿ.ಎಂ.ಪಿ.ಗೆ ಸೇರ್ಪಡೆಯಾದ ನಂತರ ಇವತ್ತಿನ ದಿನ ಬೆಂಗಳೂರಿನ ವಾತಾವರಣ ಬಹಳ ಭೀಕರವಾಗಿದೆ. ಇವತ್ತು ಸುಮಾರು 770 ಬೋರ್‌ವೆಲ್‌ಗಳು ಇರತಕ್ಕಂಥ ನಮ್ಮ ವಿಧಾನಸಭಾ ಕ್ಷೇತ್ರದಲ್ಲಿ ಕೇಬಲ ಅರ್ಧ ಎಂ.ಎಲ್.ಡಿ.ಯಷ್ಟು ಕಾವಾರಿ ನೀರು ಮಾತ್ರ ಬರುತ್ತಿದೆ. ಈ ಅರ್ಧ ಎಂ.ಎಲ್.ಡಿ. ಕಾವೇ ನೀರನ್ನು ತೆಗೆದುಕೊಳ್ಳಬೇಕೆಂದರೆ ದಿನನಿತ್ಯ ಬಿ.ಡಬ್ಲ್ಯೂ.ಎಸ್.ಎಸ್.ಬಿ. ಕಾರ್ಯಾಲಯಕ್ಕೆ ಹೋಗಿ ಅಲ್ಲಿ ಜಬರ್‌ದಸ್ತ್ ಮಾಡಿದರೆ ಮಾತ್ರ ಬರುತ್ತದೆ. ಇವತ್ತಿನ ಪರಿಸ್ಥಿತಿ ನಮ್ಮ ಕ್ಷೇತಗಳಲ್ಲಿ ಬೋರ್‌ವೆಲ್‌ಗಳನ್ನು ಬಿಟ್ಟು ಬೇರೆ ಯಾವುದೇ ರೀತಿಯ ಕುಡಿಯುವ ನೀರಿನ ವ್ಯವಸ್ಥೆಗಳಿಲ್ಲ. ಇಂಥ ಸಂದರ್ಭದಲ್ಲಿ ನಮ್ಮ ಭಾರತೀಯ ಜನತಾ ಪಕ್ಷದ ಸರ್ಕಾರ ಬಂದನಂತರ, ಸುಮಾರು ವರ್ಷಗಳಿಂದ ಪ್ರಯತ್ನವಾಗಿರಲಿಲ್ಲವೋ ಅಂಥದ್ದಕ್ಕೆ ಕೈಯಿಟ್ಟು ಇವತ್ತು 1192 ಕೋಟಿ ರೂ.ಗಳ ಅನುದಾನದಲ್ಲಿ ಒಂದು ಒಳಚರಂಡಿಯ ಕಾಮಗಾರಿಗೆ ಚಾಲನೆಯನ್ನು ಕೊಟ್ಟು ಅದರ ಜೊತೆ ಜೊತೆಯಲ್ಲಿಯೇ 3384 ಕೋಟಿ ರೂ.ಗಳಲ್ಲಿ ಕಾವೇರಿ ನೀರನ್ನು ತರುವಂಥ ಪ್ರಯತ್ನ ಆಗುತ್ತಿದೆ. ಹೀಗಿರುವಂಥ ಸಂದರ್ಭದಲ್ಲಿ ಸುಮಾರು 1 ಕೋಟಿ ಜನಸಂಖ್ಯೆಯಿರುವ ಬೆಂಗಳೂರು ನಗರಕ್ಕೆ ಎರಡು ಸಾವಿರ ಎಂ.ಎಲ್.ಡಿ. ಗಿಂತ ಹೆಚ್ಚು ನೀರು ಬೇಕಾಗುತ್ತದೆ. ಆದರೆ ಎಲ್ಲ ಪ್ರಯತ್ನಗಳಿಂದ ನೀರನ್ನು ತಂದರೂ ಕೂಡ 1530 ಎಂ.ಎಲ್.ಡಿ. ನೀರು ಮಾತ್ರ ದೊರೆಯುತ್ತದೆ. ಎಲ್ಲ ಪ್ರಯತ್ನಗಲು ಸಫಲವಾದರೂ ಕೂಡ ನೀರಿನ ಕೊರತೆ ಇರುತ್ತದೆ. ಅಂದರೆ

ಇವೆಲ್ಲಾ ಪ್ರಯತ್ನಗಳು ಆದರೂ ನಂತರ ಬೆಂಗಳೂರಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಸಂಪೂರ್ಣವಾಗಿ ಬಗೆಹರಿಸುವುದಕ್ಕಾಗುವುದಿಲ್ಲ. ಇದು ಬಗೆಹರಿಯಬೇಕೆಂದರೆ ಬೆಂಗಳೂರಿನಲ್ಲಿ ಮೊದಲದ್ದಂಥ ವಾತಾವರಣ ಬರಬೇಕು. ಬೆಂಗಳೂರು ಒಂದಾನೊಂದು ಕಾಲದಲ್ಲಿ ಕೆರೆಗಳ ನಗರವಾಗಿತ್ತು. ಕೆಂಪೇಗೌಡರು ಬೆಂಗಳೂರನ್ನು ಕಟ್ಟಿದ ಕಾಲದಲ್ಲಿ ಕೆರೆಗಳ ನಗರವಾಗಿದ್ದಂಥ ಬೆಂಗಳೂರು ಇವತ್ತು ಯಾವುದೇ ಕೆರೆಯಲ್ಲಿ ಮನುಷ್ಯ ಕೈ ಇಡುವುದಕ್ಕೂ ಕೂಡ ಅಸಹ್ಯ ಪಡುತ್ತಾನೆ. ಏಕೆಂದರೆ ಕೆರೆಗೆ ಕಲುಷಿತವಾದ ಸ್ಯೂಂಯೇಜ್ ನೀರನ್ನು ಕೆರೆಗಳಿಗೆ ಬಿಡುವಂಥದ್ದು ನಡೆಯುತ್ತಿದೆ. ಈ ಕೆರೆಗಳ ಬಗ್ಗೆ ಬೆಂಗಳೂರಿನ ನಾಗರಿಕರಿಗೆ ಒಂದು ವಿಶೇಷವಾದಂಥ ರೀತಿಯಲ್ಲಿ ಸರ್ಕಾರ ಗಮನವನ್ನು ಕೊಟ್ಟು ಈ ಕೆರೆಗಳ ಬಗ್ಗೆ ಅತಿ ಹೆಚ್ಚು ಕಾಳಜಿಯನ್ನು ವಹಿಸಿ ಈಗೇನು ನೀವು ಕಾವೇರಿ ನೀರಿಗಾಗಿ ಯೋಜನೆಯನ್ನು ತಂದಿದ್ದೀರಿ, ಒಳಚರಂಡಿ ಯೋಜನೆಯ ಮೂಲಕವಾಗಿ filter plants ಹಾಕುತ್ತಿದ್ದೀರಿ. ಇದರ ಮೂಲಕವಾಗಿ ಫಿಲ್ಟ್ರೇಶನ್ ಆದನಂತರ ಈ ಮಳೆಯ ನೀರನ್ನು ಕೆರೆಗಳಿಗೆ ಸಂಪೂರ್ಣವಾಗಿ ಬಿಡುವ ರೀತಿಯಲ್ಲಿ ಪ್ರಯತ್ನವಾಗಬೇಕು. ವಿಶೇಷವಾಗಿ ಕಂದಾಯ ಸಚಿವರು ಇದರ ಬಗ್ಗೆ ಗಮನವನ್ನು ಕೊಟ್ಟು ಈ ಒಂದು ವಿಚಾರದಡಿಯಲ್ಲಿ ಒತ್ತುವರಿಯಾಗಿರತಕ್ಕಂಥ ಎಲ್ಲ ರಾಜಾ ಕಾಲುವೆಗಳನ್ನು ತೆರವುಗೊಳಿಸಿ, ಕೆರೆಗಳ ಶುದ್ಧೀಕರಣ ಮಾಡಲು ಕೆರೆಗಳಲ್ಲಿರುವ ಹೂಳೆತ್ತಿಸಿ ನಮ್ಮ ಬೆಂಗಳೂರಿನ ಪರಿಸರವನ್ನು ಉಳಿಸಿಬೇಕೆನ್ನುವ ಒತ್ತಾಯವನ್ನು ಮಾಡುತ್ತೇನೆ. ಈ ವಿಚಾರಕ್ಕೆ ಪೂರಕವಾಗಿ ಒಂದೆರಡು ಅಂಶಗಳನ್ನು ಸದನದ ಗಮನಕ್ಕೆ ತರುತ್ತೇನೆ. ನಾನು ಕಳೆದ ಎರಡ್ಮೂರು ತಿಂಗಳ ಹಿಂದೆ ಅಮೆರಿಕಾ ಪ್ರವಾಸವನ್ನು ಮಾಡುತ್ತಿದ್ದಾಗ ಅಲ್ಲಿ ಹಾವರ್ತ್ ಎನ್ನುವ ಒಂದು ಹಳ್ಳಿಯಿತ್ತು. ಅಲ್ಲಿರುವ ಜನರು ಯಾವುದೇ ನದಿಯ ನೀರನ್ನು ಕುಡಿಯುತ್ತಿರಲಿಲ್ಲ. ಅವರು ಕೆರೆಯ ನೀರನ್ನು ಕುಡಿಯುತ್ತಿದ್ದರು. ಅಷ್ಟು ಮುಂದುವರಿದಿರತಕ್ಕಂಥ ಅಮೆರಿಕಾ ದೇಶದಲ್ಲಿ ಇವತ್ತಿಗೂ ಕೂಡ ಗ್ರಾಮಗಳಲ್ಲಿ ಕೆರೆಯಲ್ಲಿರುವ ನೀರನ್ನೇ ಕುಡಿಯತಕ್ಕಂಥ ಪದ್ಧತಿಯನ್ನು ಅನುಸರಿಸಿಕೊಂಡು ಬಂದಿದ್ದಾರೆ. ಆದರೆ ನಮ್ಮ ದೇಶದಲ್ಲಿ ರಾಜ್ಯದಲ್ಲಿ ಕೆರೆಗಳನ್ನೇ ಮರೆಯುವಂಥ ಪರಿಸ್ಥಿತಿ ಬಂದಿದೆ. ನಾವು

ಕೆರೆಗಳನ್ನು ಸಂಪೂರ್ಣವಾಗಿ ಕೊಲ್ಲುತ್ತಿದ್ದೇವೆ. ಆದುದರಿಂದ ಇನ್ನು ಮುಂದೆ ಕೆರೆಗಳ ಜೀರ್ಣೋದ್ಧಾರವನ್ನು ಮಾಡಬೇಕೆಂದು ಒತ್ತಾಯವನ್ನು ಮಾಡುತ್ತಾ ಬೆಂಗಳೂರಿಗೆ ಜಿಲ್ಲೆಗಳಿಂದ ಬರತಕ್ಕಂಥ ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ನಮ್ಮ ಕ್ಷೇತ್ರವನ್ನೂ ಒಳಗೊಂಡಂತೆ ರೈತ ಸಂತೆಗಳನ್ನು ಮಾಡಿಕೊಡಬೇಕೆಂದು ಮನವಿಯನ್ನು ಮಾಡುತ್ತಾ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟ ನಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಬರಗಾಲದ ಮೇಲಿನ ಚರ್ಚೆ ಪೂರ್ಣಗೊಂಡಿರುತ್ತದೆ. ಈಗ ಸರ್ಕಾರದ ಕಡೆಯಿಂದ ಉತ್ತರ.

ಶ್ರೀ ಕೆ.ಎಸ್. ಈಶ್ವರಪ್ಪ (ಉಪ ಮುಖ್ಯಮಂತ್ರಿ, ಕಂದಾಯ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನಸಭೆ ಸದಸ್ಯರಾದ ಮತ್ತು ವಿರೋಧ ಪಕ್ಷದ ನಾಯಕರಾದ ಮಾನ್ಯ ಸಿದ್ದರಾಮಯ್ಯನವರು ಮತ್ತು ಇತರ ಶಾಸಕರು ನಿಯಮ 69 ರಡಿಯಲ್ಲಿ ಬರ ಪರಿಹಾರಕ್ಕೆ ಸಂಬಂಧಪಟ್ಟಂತೆ ನಿಲುವಳಿ ಸೂಚನೆಯಲ್ಲಿ ಪ್ರಸ್ತಾಪಿಸಿರುವ ವಿಷಯಗಳ ಬಗ್ಗೆ ಉತ್ತರವನ್ನು ಕೊಡಬಯಸುತ್ತೇನೆ. ವಿಶೇಷವಾಗಿ ಪ್ರಸ್ತಾಪ ಮಾಡಿದಂಥ ಅಂಶಗಳಲ್ಲಿ ಸರ್ಕಾರವು ತೆಗೆದುಕೊಂಡಂಥ ಕ್ರಮಗಳು, ಕುಡಿಯುವ ನೀರಿನ ಬಗ್ಗೆ. ಉದ್ಯೋಗ ಸೃಜನೆ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ ಬಗ್ಗೆ, ಜಾನುವಾರುಗಳ ಸಂರಕ್ಷಣೆ ಬಗ್ಗೆ, ವಿದ್ಯುತ್ ಪೂರೈಕೆ, ಬೆಳೆ ವಿಮೆ ಬಗ್ಗೆ, ಸುವರ್ಣ ಭೂಮಿ ಯೋಜನೆ, ಮೋಡ ಬಿತ್ತನೆ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳು, ಗ್ರಾಮ ಪಂಚಾಯಿತಿಗೆ ಟೆಲಿಮೆಟ್ರಿಕ್ ರೈನ್‌ಗೇಜ್ ಅಳವಡಿಸುವ ಬಗ್ಗೆ ರೈತರ ಆತ್ಮಹತ್ಯೆಯ ಬಗ್ಗೆ, ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ಯೋಜನೆ, ಆಶ್ರಯ ಯೋಜನೆ, ರಾಜ್ಯ ಸರ್ಕಾರವು ದಿನಾಂಕ 23–7–2012 ರಂದು 19 ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶವೆಂದು ಘೋಷಣೆ ಮಾಡಿರುವ ಬಗ್ಗೆ. ರಾಜ್ಯ ಸರ್ಕಾರವು ವಿವಿಧ ಇಲಾಖೆಗಳಡಿ ಬರ ಪರಿಹಾರಕ್ಕೆ ಬಿಡುಗಡೆ ಮಾಡಿರುವ ಅನುದಾನಗಳ ವಿವರ. ಹೀಗೆ ಅನೇಕ ವಿಚಾರಗಳ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು

ಜೆಡಿಎಸ್ ಪಕ್ಷದ ನಾಯಕರಾದ ಮಾನ್ಯ ಹೆಚ್.ಡಿ. ರೇವಣ್ಣನವರು, ಬಂಡೆಪ್ಪ ಖಾಶೆಂಪೂರ್‌ರವರು ಮತ್ತು ಎಲ್ಲ ನಾಯಕರುಗಳು ಕೂಡ ಏನು ಇವತ್ತು ಪ್ರಸ್ತಾಪ ಮಾಡಿದ್ದಾರೆ ಇದಕ್ಕೆ ಸರ್ಕಾರದಿಂದ ಉತ್ತರವನ್ನು ಕೊಡತಕ್ಕಂಥ ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ, 2011–12ನೇ ಸಾಲಿನಲ್ಲಿ ಸರ್ಕಾರವು 22 ಜಿಲ್ಲೆಗಳ 123 ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶಗಳೆಂದು ಘೋಷಣೆ ಮಾಡಿದೆ. ಜೂನ್ ಒಂದರಿಂದ ಜುಲೈ 22 ರವರೆಗೆ ರಾಜ್ಯದಲ್ಲಿ ಮಳೆಯ ವಾಡಿಕೆಯ ಪ್ರಮಾಣವು 393 ಮಿ.ಮೀ.ಗಳಾಗಿದ್ದು ಪ್ರಸ್ತುತ ಅವಧಿಯಲ್ಲಿ 244 ಮಿ.ಮೀ. ಮಳೆಯಾಗಿದ್ದು ಶೇಕಡ 38 ರಷ್ಟು ಮಳೆಯ ಕೊರತೆ ಕಂಡು ಬಂದಿದೆ. ರಾಜ್ಯದ 24 ಜಿಲ್ಲೆಗಳ 147 ತಾಲ್ಲೂಕುಗಳ, 577 ಹೋಬಳಿಗಳಲ್ಲಿ ಸಾಧಾರಣದಿಂದ ತೀವ್ರ ಮಳೆ ಕೊರತೆ ಕಂಡು ಬಂದಿರುತ್ತದೆ. ಉಳಿದ ಆರು ಜಿಲ್ಲೆಗಳ 29 ತಾಲ್ಲೂಕುಗಳ 170 ಹೋಬಳಿಗಳಲ್ಲಿ ವಾಡಿಕೆ ಅಥವಾ ಅಧಿಕ ಮಳೆಯಾಗಿರುವುದನ್ನು ಕೂಡ ನಾವು ಕಾಣುತ್ತಿದ್ದೇವೆ.

ಕಳೆದ ವಾರ (ಜುಲೈ 16 ಮತ್ತು 22 ರವರೆಗೆ) ರಾಜ್ಯದ ಉತ್ತರ ಒಳನಾಡು ಮತ್ತು ದಕ್ಷಿಣ ಒಳನಾಡಿನಲ್ಲಿ ಉತ್ತಮ ಮಳೆಯಾಗಿರುತ್ತದೆ. ಈ ಅವಧಿಗೆ ರಾಜ್ಯದಲ್ಲಿ ವಾಡಿಕೆ ಮಳೆ ಪ್ರಮಾಣವು 65 ಮಿ.ಮೀ. ಆಗಿದ್ದು , ಪ್ರಸ್ತುತ ಅವಧಿಯಲ್ಲಿ 56 ಮಿ.ಮೀ. ಮಳೆಯಾಗಿದ್ದು, ಶೇಕಡ 13 ರಷ್ಟು ಕೊರತೆ ಕಂಡು ಬಂದಿರುತ್ತದೆ. ಈ ಅವಧಿಯಲ್ಲಿ 20 ಜಿಲ್ಲೆಗಳ 115 ತಾಲ್ಲೂಕುಗಳಲ್ಲಿ ಬರುವ 476 ಹೋಬಳಿಗಳಲ್ಲಿ ಮಾಮೂಲು ಅಥವಾ ಅಧಿಕ ಮಳೆಯಾಗಿರುತ್ತದೆ. ಉಳಿದ 271 ಹೋಬಳಿಗಳಲ್ಲಿ ಸಾಧಾರಣದಿಂದ ತೀವ್ರ ಮಳೆ ಕೊರತೆಯಿರುತ್ತದೆ.

ಪ್ರಸ್ತುತ ರಾಜ್ಯದ 124 ತಾಲ್ಲೂಕುಗಳಲ್ಲಿ ಮಳೆ ಕೊರತೆ ಸತತ 4 ವಾರ ಮತ್ತು ಅಧಿಕ ಶುಷ್ಕ ವಾತಾವರಣ ಹಾಗೂ ತೇವಾಂಶ ಕೊರತೆ ಉಂಟಾಗಿದೆ.

ಸರ್ಕಾರ ಈ ಕೆಳಕಂಡಂತೆ ಕ್ರಮವನ್ನು ಜರುಗಿಸಿರುತ್ತದೆ. ದಿನಾಂಕ : 6–1–2012, ದಿ. 22–02–2012, ದಿ. 3–04–2012 ಮತ್ತು ದಿ. 13–07–2012 ರಂದು ಎಲ್ಲಾ ಜಿಲ್ಲಾಧಿಕಾರಿಗಳ ಹಾಗೂ ಮುಖ್ಯ ಕಾರ್ಯನಿರ್ವಾಹಕ

ಅಧಿಕಾರಿಗಳೊಂದಿಗೆ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಇತರೆ ಸಚಿವರು ನೇರವಾಗಿ ವೀಡಿಯೋ ಸಂವಾದವನ್ನು, ನಡೆಸಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಸೂಚಿಸಲಾಗಿದೆ. ಎಲ್ಲಾ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಪ್ರತಿ ತಿಂಗಳು ಬರ ಪರಿಸ್ಥಿತಿಯ ವಿಮರ್ಶೆ ಸಭೆಗಳನ್ನು ನಡೆಸಿ ಪರಿಹಾರ ಕಾರ್ಯಗಳನ್ನು ಯುದ್ಧೋಪಾದಿಯಲ್ಲಿ ಜಾರಿಗೊಳಿಸಲು ಸಹ ತಿಳಿಸಲಾಗಿದೆ.

ಸಕಾಲದಲ್ಲಿ ಮಳೆಯಾಗದೆ 2012 ರ ಮುಂಗಾರು ಹಂಗಾಮಿನಲ್ಲಿ ಒಟ್ಟು 74.70 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಬಿತ್ತನೆ ಗುರಿ ಹೊಂದಿದ್ದು, 28.03 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮಾತ್ರ ಕೃಷಿ ಬಿತ್ತನೆಯಾಗಿದೆ. 2.48 ಲಕ್ಷ ಹೆಕ್ಟೇರ್ ಪ್ರದೇಶಗಳು ಬೆಳೆಗಳು ಮಳೆ ಕೊರತೆಯಿಂದ ಒಣಗಿದ್ದು, ಅಂದಾಜು ಬೆಳೆ ಹಾನಿಯ ಮೊತ್ತ 297.60 ಕೋಟಿ ರೂಪಾಯಿಗಳಾಗಿರುತ್ತದೆ. ಈ ಬೆಳೆ ನಷ್ಟವನ್ನು NDRF ಮಾರ್ಗಸೂಚಿಗಳ ಪ್ರಕಾರ ಪರಿಹರಿಸಲು 74.40 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗುವುದು.

ಮುಂಗಾರು ಹಂಗಾಮಿನಲ್ಲಿ 24.45 ಲಕ್ಷ ಟನ್ ವಿವಿಧ ರಸಗೊಬ್ಬರ ಬೇಡಿಕೆ ಇದ್ದು, ದಿನಾಂಕ : 23-7-2012 ರವರೆಗೆ 7.70 ಲಕ್ಷ ಟನ್ ಸರಬರಾಜಾಗಿರುತ್ತದೆ. 6.73 ಲಕ್ಷ ಟನ್ ದಾಸ್ತಾನು ಲಭ್ಯವಿದೆ. ಮುಂಗಾರು ಹಂಗಾಮಿನ ವಿವಿಧ ಬೆಳೆಗಳ ಬಿತ್ತನೆ ಬೀಜದ ಬೇಡಿಕೆ 8.30 ಲಕ್ಷ ಕ್ವಿಂಟಾಲ್ ಗಳಷ್ಟಿದ್ದು. ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳಲ್ಲಿ 9.50 ಲಕ್ಷ ಕ್ವಿಂಟಾಲ್ ಪ್ರಮಾಣಿತ ಹಾಗೂ ಗುಣಮಟ್ಟದ ಬೀಜಗಳು ಲಭ್ಯವಿದೆ. ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ವಿವಿಧ ಯೋಜನೆಗಳಡಿ ಶೇಕಡ 50 ರ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ ಪೂರೈಸಲಾಗುತ್ತಿದೆ ದಿನಾಂಕ : 23-7-2012 ರವರೆಗೆ 12.31 ಲಕ್ಷ ರೈತರಿಗೆ 3.33 ಲಕ್ಷ ಕ್ವಿಂಟಾಲ್ ಬಿತ್ತನೆ ಬೀಜವನ್ನು ವಿತರಿಸಲಾಗಿದೆ ಹಾಗೂ 2.03 ಲಕ್ಷ ಟನ್ ಬಿತ್ತನೆ ಬೀಜಗಳು ವಿವಿಧ ರೈತ ಸಂಪರ್ಕ ಕೇಂದ್ರ / ಮಾರಾಟ ಕೇಂದ್ರಗಳಲ್ಲಿ ಲಭ್ಯವಿರುತ್ತದೆ. ರಸಗೊಬ್ಬರ ಮತ್ತು ಬಿತ್ತನೆ ಬೀಜದ ಕೊರತೆಯಿರುವುದಿಲ್ಲ.

ಕುಡಿಯುವ ನೀರಿನ ಬಗ್ಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಗ್ರಾಮೀಣ ನೀರು ಪೂರೈಕೆ.

ಕೇಂದ್ರ ಮತ್ತು ರಾಜ್ಯದ ವಲಯಗಳ ಅಡಿ 2011-12ನೇ ಸಾಲಿಗೆ NRDWP ಯಡಿ Opening balance 470 ಕೋಟಿ ರೂಪಾಯಿ ಸೇರಿ ಲಭ್ಯವಾಗಿದ್ದ ಅನುದಾನ 1,500 ಕೋಟಿ ರೂಪಾಯಿ, ರಾಜ್ಯದ ಉತ್ತಮ O & M ವ್ಯವಸ್ಥೆ ಹಾಗೂ ಪ್ರಗತಿ ಆಧರಿಸಿ ಮಾರ್ಚ್ 2012ರಲ್ಲಿ ಕೇಂದ್ರದಿಂದ ಸ್ವೀಕೃತವಾದ ಪ್ರೋತ್ಸಾಹಧನ ಮತ್ತು ತಡವಾಗಿ ಬಂದ ಎರಡನೇ ಕಂತಿನ ಬಾಕಿ ಅನುದಾನ 156.75 ಕೋಟಿ ರೂಪಾಯಿ. ಹೀಗಾಗಿ 2011-12ನೇ ಸಾಲಿಗೆ ಕುಡಿಯುವ ನೀರಿನ ಬಾಬ್ತಿಗಾಗಿ ಲಭ್ಯವಾದ ಒಟ್ಟು ಹಣ 1,656.75 ಕೋಟಿ ರೂಪಾಯಿಗಳು ತುರ್ತು ಕುಡಿಯುವ ನೀರಿನ ಕಾಮಗಾರಿಗಳಿಗಾಗಿ ಆಗಿರುವ ವೆಚ್ಚ (ಟಾಸ್ಕ್‌ಫೋರ್ಸ್ ಕಮಿಟಿ ವರ್ಕ್ಸ್) 175 ಕೋಟಿ ರೂಪಾಯಿಗಳು. ವಾರ್ಷಿಕ ಕ್ರಿಯಾಯೋಜನೆ ಅನ್ವಯ ಆಗಿರುವ ವೆಚ್ಚ 1,006.53 ಕೋಟಿ ರೂಪಾಯಿಗಳು. 2011-12ರಲ್ಲಿ ಕುಡಿಯುವ ನೀರಿನ ಬಾಬ್ತಿಗಾಗಿ ಒಟ್ಟು ವೆಚ್ಚವಾದ ಅನುದಾನ 1,181.53 ಕೋಟಿ ರೂಪಾಯಿಗಳು. ವರ್ಷಾಂತ್ಯದಲ್ಲಿ (ಮಾರ್ಚ್ 2012ರಲ್ಲಿ ರಾಜ್ಯ ಮತ್ತು ಕೇಂದ್ರ ವಲಯದಡಿ ಬಿಡುಗಡೆಯಾದ ಹಣ 375 ಕೋಟಿ ರೂಪಾಯಿ) ಬಾಕಿಯುಳಿದಿದ್ದ ಅನುದಾನ ಒಟ್ಟು 475 ಕೋಟಿ ರೂಪಾಯಿ. 2012-13ರ ಮೇ-ಜೂನ್ 2012 ರಲ್ಲಿ ಕೇಂದ್ರ ಮತ್ತು ರಾಜ್ಯ ವಲಯದಡಿ ಲಭ್ಯವಿದ್ದ ಒಟ್ಟು opening balance ಸಂಪೂರ್ಣವಾಗಿ ವಿನಿಯೋಗವಾಗಿ ಕೇಂದ್ರಕ್ಕೆ ವರದಿ ಮಾಡಿರುವ ವೆಚ್ಚ 475 ಕೋಟಿ ರೂಪಾಯಿಗಳು. ಕೇಂದ್ರ ಸರ್ಕಾರ 2012-13ನೇ ಸಾಲಿಗೆ ರಾಜ್ಯಕ್ಕೆ ಕಳೆದ ಸಾಲಿಗಿಂತ ಹೆಚ್ಚಿನ ಅನುದಾನದ ಹಂಚಿಕೆ, 881 ಕೋಟಿ ರೂಪಾಯಿಗಳು. ಹೀಗೆ ಪ್ರಸಕ್ತ ಸಾಲಿಗೆ opening balance ಸೇರಿ ಲಭ್ಯವಾಗಿರುವ ಒಟ್ಟು ಅನುದಾನ 1,846 ಕೋಟಿ ರೂಪಾಯಿಗಳು. 2012-13ರಲ್ಲಿ ಎಲ್ಲಾ ಸಮಸ್ಯಾತ್ಮಕ ಗ್ರಾಮಗಳನ್ನು ಆವರಿಸಲು 2,100 ಕೋಟಿ ರೂ. ಅಂದಾಜಿನ ಕ್ರಿಯಾಯೋಜನೆಗೆ ಅನುಮೋದನೆ ನೀಡಿದೆ. ಈ ಸಲುವಾಗಿ 900 ಕೋಟಿ ರೂಪಾಯಿ ಅನುದಾನವಿದ್ದು, ಈಗಾಗಲೇ ಕೇಂದ್ರ ಮತ್ತು ರಾಜ್ಯ ಸರ್ಕಾರದ್ದು ಸೇರಿ ಬಿಡುಗಡೆಯಾಗಿದೆ. ವೆಚ್ಚ 475 ಕೋಟಿ

ರೂಪಾಯಿ ಆಗಿದೆ. 2012–13ನೇ ಸಾಲಿಗೆ ತುರ್ತು ಕುಡಿಯುವ ನೀರಿನ ಯೋಜನೆಗಳಿಗಾಗಿ ಬಿಡುಗಡೆಯಾದ ಅನುದಾನ (ಅನುಮೋದಿತ ಕ್ರಿಯಾ ಯೋಜನೆಯನ್ವಯ ಕಾಮಗಾರಿಗಳು ಅನುಷ್ಠಾನವಾಗುತ್ತಿದೆ) ಅದಕ್ಕೆ 59.38 ಕೋಟಿ ರೂಪಾಯಿಗಳನ್ನು ಇಡಲಾಗಿದೆ. ಕುಡಿಯುವ ನೀರಿನ ಬಗ್ಗೆ 2011, 2012–13ನೇ ಸಾಲಿನಲ್ಲಿ ಕುಡಿಯುವ ನೀರಿನ ಸಮಸ್ಯಾತ್ಮಕ ಗ್ರಾಮಗಳಿಗೆ ಸಮರ್ಪಕ ನೀರು ಸರಬರಾಜಿಗಾಗಿ ಪಂಪು ಮೋಟಾರು ಮತ್ತು ಪೈಪ್‌ಲೈನ್‌ಗಳ ದುರಸ್ತಿ ಕಾರ್ಯಗಳು, ನೀರು ಸಾಗಾಣಿಕೆ ಮಾಡಲು S.D.R.F. ನಿಧಿಯಿಂದ 459.75 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ.

2012–13ನೇ ಸಾಲಿನಲ್ಲಿ ನಗರಾಭಿವೃದ್ಧಿ ಇಲಾಖೆಯಿಂದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಪರಿಹರಿಸಲು S.F.C. ಅನುದಾನದಿಂದ 24 ಕೋಟಿ ರೂಪಾಯಿಗಳನ್ನು ಮತ್ತು N.D.R.F. ನಿಂದ 40 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ.

2011–12 ರಲ್ಲಿ opening balance 470.55 ಕೋಟಿ ರೂಪಾಯಿ ಸೇರಿ ರಾಜ್ಯ ಮತ್ತು ಕೇಂದ್ರ ವಲಯದಡಿ (2011–12ನೇ ಸಾಲಿನಲ್ಲಿ ರಾಜ್ಯದಲ್ಲಿನ O & M ವ್ಯವಸ್ಥೆ ಮತ್ತು ರಾಜ್ಯದ ಉತ್ತಮ ಪ್ರಗತಿ ನೋಡಿ ಕೇಂದ್ರ ನೀಡಿದ ಹೆಚ್ಚುವರಿ ಪ್ರೋತ್ಸಾಹ ಧನ 96.17 ಕೋಟಿ ರೂಪಾಯಿಗಳು) ಕುಡಿಯುವ ನೀರಿನ ಬಾಬ್ತಿಗಾಗಿ ಲಭ್ಯವಾದ ಒಟ್ಟು ಅನುದಾನ 1,656.75 ಕೋಟಿ ರೂಪಾಯಿ.

2011–12ರಲ್ಲಿ (ಮಾರ್ಚ್‌ನಲ್ಲಿ 2012ರಲ್ಲಿ ರಾಜ್ಯ ಮತ್ತು ಕೇಂದ್ರ 375 ಕೋಟಿ ರೂಪಾಯಿ ಅನುದಾನ ಬಿಡುಗಡೆಯಾದ ಕಾರಣ) ಈ ಪೈಕಿ ಆಗಿರುವ ಒಟ್ಟು ವೆಚ್ಚ 1,182 ಕೋಟಿ ರೂಪಾಯಿಗಳು.

ಇದರಿಂದ 1980-PWS, 1970-MWS, 900-HP Borewells ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. 7,262 ಸಮಸ್ಯಾತ್ಮಕ ಗ್ರಾಮಗಳನ್ನು ಆವರಿಸಲಾಗಿದೆ. 1,495 ನೀರಿನ ಗುಣಮಟ್ಟದ (ಅಧಿಕ ಫ್ಲೋರೈಡ್ ಇತ್ಯಾದಿ) ಬಾಧೆಗೊಳಗಾದ ಜನವಸತಿಗಳಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ

ಮಾಡಿದೆ. ಒಟ್ಟು 8,757 ಸಮಸ್ಯಾತ್ಮಕ ಜನವಸತಿಗಳಿಗೆ ಸಮರ್ಪಕ ಕುಡಿಯುವ ನೀರಿನ ವ್ಯವಸ್ಥೆ ಮಾಡಿದೆ. 5,338 ಗ್ರಾಮೀಣ ಶಾಲೆಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಿದೆ. 4,093 ಅಂತರ್ಜಲ ಮರುಪ್ರವಹಿಸುವ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ.

ತುರ್ತು ಕುಡಿಯುವ ನೀರಿನ ಸಂಬಂಧ ಟಾಸ್ಕ್‌ಫೋರ್ಸ್ ಕಾಮಗಾರಿಗಳಿಗಾಗಿ ಬಿಡುಗಡೆಯಾದ ಅನುದಾನ 174.826 ಕೋಟಿ ರೂಪಾಯಿಗಳು. ಇದರಿಂದ 6,988 ಬೋರ್‌ವೆಲ್‌ಗಳನ್ನು ಕೊರೆಯಲಾಗಿದೆ. (ಈ ಪೈಕಿ 5,783 ಸಫಲವಾಗಿದೆ. 1,205 ಕೊಳವೆ ಬಾವಿಗಳು ವಿಫಲವಾಗಿದೆ) 1,461 ಪುನಃಶ್ಚೇತನ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. 1,103 ಪೈಪ್‌ಲೈನ್ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿದೆ.

2012–13ರ ಪ್ರಸ್ತುತ ಸಾಲಿಗೆ opening balance 475 ಕೋಟಿ ರೂಪಾಯಿಗಳು ಸೇರಿ 1,846 ಕೋಟಿ ರೂಪಾಯಿ ಅನುದಾನ ರಾಜ್ಯ ಮತ್ತು ಕೇಂದ್ರ ವಲಯಗಳಡಿ ಕುಡಿಯುವ ನೀರಿನ ವಿವಿಧ ಘಟಕಗಳಡಿ ಲಭ್ಯವಿದ್ದು, 2,100 ಕೋಟಿ ರೂಪಾಯಿ ಮೊತ್ತದ ಕ್ರಿಯಾಯೋಜನೆ ರೂಪಿಸಿ (6,027 ಸಮಸ್ಯಾತ್ಮಕ ಗ್ರಾಮಗಳು ಮತ್ತು 2,318 ನೀರಿನ ಗುಣಮಟ್ಟದ ಸಮಸ್ಯೆಯಿರುವಂತಹ ಗ್ರಾಮಗಳು ಹಾಗೂ 5,261 ಗ್ರಾಮೀಣ ಶಾಲೆಗಳನ್ನು ಆವರಿಸುವುದು ಮತ್ತು 3,679 ಅಂತರ್ಜಲ ಮರುಪೂರಣ ಕಾಮಗಾರಿಗಳು) ಅನುಮೋದನೆ ನೀಡಲಾಗಿದೆ.

ಈಗಾಗಲೇ 475 ಕೋಟಿ ರೂಪಾಯಿ ವೆಚ್ಚವಾಗಿದ್ದು, 900 ಕ್ಕೂ ಹೆಚ್ಚು ಜನವಸತಿಗಳನ್ನು ಆವರಿಸಲಾಗಿದೆ.

ಪ್ರಸ್ತುತ ಹತ್ತು ಜಿಲ್ಲೆಗಳ 732 ಗ್ರಾಮೀಣ ಜನವಸತಿಗಳಲ್ಲಿ ಕುಡಿಯುವ ನೀರನ್ನು 1,056 ಟ್ಯಾಂಕ್‌ಗಳ ಸಾಗಾಣಿಕೆ ಮುಖೇನ ಪೂರೈಸಲಾಗುತ್ತಿದ್ದು, ಸದರಿ ಸಮಸ್ಯಾತ್ಮಕ ಗ್ರಾಮಗಳಿಗೂ ಸಹ 2012–13ನೇ ಸಾಲಿನ ಕ್ರಿಯಾಯೋಜನೆಯಡಿ 57.84 ಕೋಟಿ ರೂಪಾಯಿ ಅಂದಾಜು ವೆಚ್ಚದಲ್ಲಿ ಅಗತ್ಯವಿರುವ 1,438 ಪುನಃಶ್ಚೇತನ ಕಾಮಗಾರಿಗಳನ್ನು ಮಂಜೂರು ಮಾಡಲಾಗಿದೆ.

ಜೊತೆಗೆ 2012–13ನೇ ಸಾಲಿನಲ್ಲಿ ಈಗಾಗಲೇ 59.38 ಕೋಟಿ ರೂಪಾಯಿ ಅನುದಾನವನ್ನು ಬರದ ಸಲುವಾಗಿ ತುರ್ತು ಕುಡಿಯುವ ನೀರಿನ ಯೋಜನೆಗೆ ಅನುಷ್ಠಾನದ ಸಲುವಾಗಿ ಹೆಚ್ಚುವರಿಯಾಗಿ ಹಣವನ್ನು ಬಿಡುಗಡೆ ಮಾಡಲಾಗಿದೆ. ತುರ್ತು ಕಾಮಗಾರಿಗಳು ಟಾಸ್ಕ್ ಫೋರ್ಸ್ ಸಮಿತಿಗಳಿಂದ ಅನುಮೋದನೆಯಾದಂತೆ ಅನುಷ್ಟಾನವಾಗುತ್ತಿದೆ.

ರಾಜ್ಯ ಆಯೋಗದಿಂದ ವಿದ್ಯುದ್ದೀಕರಣ ಸಲುವಾಗಿ ಬರಪೀಡಿತ ಜಿಲ್ಲೆಗಳಿಗೆ ತಲಾ ಒಂದೂವರೆ ಕೋಟಿ ರೂ.ಗಳಂತೆ ವಿನಿಯೋಗಿಸಲು ಆದೇಶಿಸಿದೆ. ರಾಜ್ಯದ್ಯಂತ ಜವನರಿ 2012 ರಿಂದ ಜುಲೈ 12 ರವರೆಗೆ 5,589 ದೂರುಗಳು ದಾಖಲುಗಳನ್ನು control room ನಲ್ಲಿ ಸ್ವೀಕರಿಸಲಾಗಿದ್ದು, ಇವುಗಳ ಪೈಕಿ 4,803 ದೂರುಗಳಿಗೆ ಸ್ಥಳೀಯ ಇಂಜಿನಿಯರಿಂಗ್ ವಿಭಾಗವು ಸ್ಪಂದಿಸಿದೆ. ಉಳಿದುವುಗಳಿಗೆ ಸೂಕ್ತ ಜಲ ಮೂಲದ ಅನ್ವೇಷಣೆ ನಡೆದಿದೆ. ಯೋಜನೆಗಳ ನಿರಂತರತೆ ಮತ್ತು ಆರ್ಥಿಕ ಹಾಗೂ ತಾಂತ್ರಿಕ ಕಾರ್ಯ ಸಿದ್ದತೆಯನ್ನು ನೋಡಿ ಶಾಶ್ವತ ಕುಡಿಯುವ ನೀರಿನ ಸಮಸ್ಯೆಗಾಗಿ ಭೂಮಿಯ ಮೇಲ್ಮೆಯ ಜಲಮೂಲಗಳನ್ನು ಆಧರಿಸಿ ಬಹುಗ್ರಾಮ ಯೋಜನೆಗಳನ್ನು ಅನುಷ್ಟಾನಗೊಳಿಸಲು ಸರ್ಕಾರ ಆದ್ಯತೆ ನೀಡುತ್ತಿದೆ. ಈ ಸಂಬಂಧ 519 ಬಹುಗ್ರಾಮ ಯೋಜನೆಗಳನ್ನು 4,608 ಕೋಟಿ ರೂ.ಗಳ ಅಂದಾಜು ಮೊತ್ತದಲ್ಲಿ ಮಂಜೂರು ಮಾಡಲಾಗಿದ್ದು, 121 ಯೋಜನೆಗಳು ಪೂರ್ಣಗೊಂಡಿದೆ. 185 ಯೋಜನೆಗಳು ಪ್ರಗತಿಯಲ್ಲಿವೆ ಹಾಗೂ ಇನ್ನು ಉಳಿದ 213 ಯೋಜನೆಗಳ ಡಿ.ಪಿ.ಆರ್. ತಯಾರಿಕೆ ಮತ್ತು ಟೆಂಡರ್ ಪ್ರಕ್ರಿಯೆ ನಡೆದಿದೆ. ಪ್ರಸ್ತುತ ಅಂದಾಜಿನ ಪ್ರಕಾರ ಈಗಾಗಲೇ ರೂಪಿಸಿರುವ ಬಹುಗ್ರಾಮ ಯೋಜನೆಗಳನ್ನು ಅನುಷ್ಠಾನಗೊಳಿಸಿ ಪೂರ್ಣಗೊಳಿಸಲು ಮತ್ತು ಸಮಸ್ಯಾತ್ಮಕ ಗ್ರಾಮಗಳ ಯೋಜನೆಗಳನ್ನು ಪುನಃಶ್ಚೇತನಗೊಳಿಸಲು ಸುಮಾರು 6,450 ಕೋಟಿ ರೂ.ಗಳ ಅನುದಾನದ ಆವಶ್ಯಕತೆ ಇದೆ. 2,015 ಕಾಮಗಾರಿಗಳನ್ನು Millennium Development Goal ಆಡಿ ಉದ್ದೇಶ ಸಾಧನೆ ಮಾಡಲು ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದೆ. ಉದ್ಯೋಗ ಸೃಜನೆ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ NREGS ರಲ್ಲಿ 2011–12ನೇ ಸಾಲಿಗೆ ಒಟ್ಟು

ಜಿಲ್ಲಾವಾರು ಹಂಚಿಕೆ 1,928.55 ಕೋಟಿ, 2011–12 ಸಾಲಿನ ಒಟ್ಟು ಸಾಧನೆ ವೆಚ್ಚ 2,197.11 ಕೋಟಿ ಆಗಿದ್ದು, ಶೇ. 114 ರಷ್ಟು ಆಗಿದೆ. ಜಿಲ್ಲಾವಾರು ಹಂಚಿಕೆ ಮತ್ತು ಸಾಧನೆಗಳ ವಿವರಗಳು. ಬರಪೀಡಿತ ಜಿಲ್ಲೆಗಳಲ್ಲಿ ಬೀದರ್‌ನಲ್ಲಿ 6,143.12 ಇದ್ದು ಸಾಧನೆ 6,891, ಚಿತ್ರದುರ್ಗ 12,843.15 ಇದ್ದು ಸಾಧನೆ 18,457, ದಾವಣಗೆರೆ 11,835.6 ಇದ್ದು ಸಾಧನೆ 18,680.17, ಗುಲ್ಬರ್ಗಾದಲ್ಲಿ 9,797.57 ಇದ್ದು 11,236.35, ರಾಯಚೂರು 11,004.02 ಇದ್ದು ಸಾಧನೆ 14,173.96, ಬೆಳಗಾಂ 20,888.02 ಸಾಧನೆ 22,476.05, ಬಳ್ಳಾರಿ 3,927.06 ಇದ್ದು ಸಾಧನೆ 3,962.72, ಚಿಕ್ಕಮಗಳೂರು 5,571.87 ಸಾಧನೆ 5,046.04, ಹಾಸನ 5,886.08 ಸಾಧನೆ 9,299.84 ಸಾಧನೆ 9,299.84, ಬಾಗಲಕೋಟೆ 6,228.63 ಸಾಧನೆ 7,881.12, ಬೆಂಗಳೂರು ಗ್ರಾಮಾಂತರ 2,378.94 ಸಾಧನೆ 2,053.75, ಬಿಜಾಪೂರ 8,682.89 ಸಾಧನೆ 13,448.12, ಚಾಮರಾಜನಗರ 4,279.96 ಸಾಧನೆ 4,492.50, ಚಿಕ್ಕಬಳ್ಳಾಪುರ 3,313.82 ಸಾಧನೆ 2,978.47, ಧಾರವಾಡ 5,204.08 ಸಾಧನೆ 5,863.51, ಗದಗ್ 4,192.07 ಸಾಧನೆ 3,676.01, ಸಾಧನೆ 3,766.01, ಹಾವೇರಿ 6,294.66 ಸಾಧನೆ 8,482.78, ಕೋಲಾರ 5,889.96 ಸಾಧನೆ 6,997.72, ಕೊಪ್ಪಳ 8,080.41 ಸಾಧನೆ 8,526.54, ಮಂಡ್ಯ 5,748 ಸಾಧನೆ 5,338.89, ಮೈಸೂರು 5,297.42 ಸಾಧನೆ 3,920.75, ರಾಮನಗರ 4,984.91 ಸಾಧನೆ 6,880.01, ತುಮಕೂರು 11,863.96 ಸಾಧನೆ 5,571.18, ಯಾದಗಿರಿ 5,857.01 ಸಾಧನೆ 7,654.54 ಇತರೆ ಜಿಲ್ಲೆಗಳು ಬರ ಪೀಡಿತವಲ್ಲದೇ ಇರುವ ಜಿಲ್ಲೆಗಳು ಕೊಡಗು 2,079.21 ಸಾಧನೆ 2,482.76, ಶಿವಮೊಗ್ಗ 5,273.27 ಸಾಧನೆ 5,571.33 ಬೆಂಗಳೂರು ನಗರ 808.76 ಸಾಧನೆ 207.13, ದಕ್ಷಿಣ ಕನ್ನಡ 2,337.41 ಸಾಧನೆ 2,001.61, ಉಡುಪಿ 1,789.08 ಸಾಧನೆ 260.47, ಉತ್ತರ ಕನ್ನಡ 4,184.46 ಸಾಧನೆ 260.47. ಒಟ್ಟಾರೆ 1,92,855.45 ಬರಪೀಡಿತ ಜಿಲ್ಲೆಗಳಿಗೆ ಹಂಚಿಕೆಯಾಗಿದ್ದರೆ, ಸಾಧನೆ 21,09,711.90 ಅಂದರೆ ಶೇ. 114 ರಷ್ಟು ಸಾಧನೆಯಾಗಿರುವಂಥದ್ದುನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತಿದ್ದೇವೆ. ಪ್ರಾರಂಭ ಯೋಜನೆಗಳ ಸಾಧನೆಗಳು 2006–07 ರಲ್ಲಿ ಉದ್ಯೋಗ ಚೀಟಿ

ವಿತರಣೆ 7.96 ಲಕ್ಷವಿದ್ದು, ಉದ್ಯೋಗ ಒದಗಿಸಲಾದ ಕುಟುಂಬಗಳು 5.45 ಲಕ್ಷ ಉತ್ಪತ್ತಿಯಾದ ಮಾನವ ದಿನಗಳು ಲಕ್ಷಗಳಲ್ಲಿ 222.01. ಸರಾಸರಿ ಮಾನವಾದಿ ಕುಟುಂಬ 40.72, ಒಟ್ಟು 24,829.67 ಲಕ್ಷಗಳಲ್ಲಿ ವೆಚ್ಚವಾಗಿದೆ. ಅದೇ ರೀತಿಯಲ್ಲಿ 2007–08 ರಲ್ಲಿ ಉದ್ಯೋಗ ಚೀಟಿ ವಿತರಣೆ 15.23 ಲಕ್ಷ ಉದ್ಯೋಗ ಒದಗಿಸಲಾದ ಕುಟುಂಬಗಳು 5.49 ಲಕ್ಷ ಉತ್ಪತ್ತಿಯಾದ ಮಾನವ ದಿನಗಳು 197.79 ಲಕ್ಷ ಸರಾಸರಿ ಮಾನವಾದಿ ಪ್ರತಿ ಕುಟುಂಬಕ್ಕೆ 35.96, ಒಟ್ಟು 23,650.54 ಲಕ್ಷಗಳು ಇವೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಮಾನ್ಯ ಉಪ ಮುಖ್ಯಮಂತ್ರಿಯವರು ವಾಸ್ತವಾಗಿರುವಂಥ ಅಂಕಿ–ಅಂಶಗಳ್ನು ಕೊಡುತ್ತಿದ್ದಾರೆ. ಇಲ್ಲಿ ಏನು ಸಮಸ್ಯೆ ಯಾಗುತ್ತಿದೆಯೆಂದರೆ, 2011–12, 2012–13 ರಲ್ಲಿ 2012–13ರಲ್ಲಿ ಸಾಲಿಗೆ ಸಂಬಂಧಪಟ್ಟಿರುವಂಥದ್ದು ಬಹಳ ಮುಖ್ಯವಾಗುತ್ತದೆ ಇಲ್ಲಿ ಕಳೆದ ವರ್ಷದ್ದು ಈ ವರ್ಷದ್ದು ಎರಡೂ ಮಿಕ್ಸ ಮಾಡಿ ಅಂಕಿ–ಅಂಶಗಳನ್ನು ಕೊಡುವುದರಿಂದ confusion ಆಗುತ್ತದೆ. ದಯಮಾಡಿ ನಾನು ತಮಗೆ ಹೇಳುವಂಥದ್ದು ಏನೆಂದರೆ, ತಾವು ಈಗ ಕೊಡುತ್ತಿರುವಂಥ ಉತ್ತರದ written copy ಯನ್ನು ನಮಗೆ circulate ಮಾಡಿದರೆ ನಮಗೆ ಖಂಡಿತವಾಗಿಯೂ ಸಹಾಯವಾಗುತ್ತದೆ. ನಾವು ನಾಳೆ demands ಮೇಲೆ ಮಾತನಾಡುವ ಸಂದರ್ಭದಲ್ಲಿ ಇದನ್ನು ಆಧರಿಸಿ ಮಾತನಾಡುವುದಕ್ಕೆ ಅನುಕೂಲವಾಗುತ್ತದೆ. ಈ ರೀತಿಯಾಗಿ ತಾವು ಆ ಕಾಪಿಯನ್ನು ಕೊಡುವಾದರೆ ಬಹಳಷ್ಟು safe ಆಗುತ್ತದೆ. ನಾವು ಇದನ್ನು ಓದಿಕೊಳ್ಳುವುದಕ್ಕೆ ಅನುಕೂಲವಾಗುತ್ದೆ. But, utlimately 2012-13 ರಲ್ಲಿ ಸಾಧನೆ ಏನಿದೆ, ಪರಿಸ್ಥಿತಿ ಏನಿದೆ ಎಂಬ ಬಗ್ಗೆ. ಈಗ ಬರದ ಬಗ್ಗೆ ಪರಿಸ್ಥಿತಿ ಏನಿದೆಯೆಂಬುದು ಗೊತ್ತಿದೆ. ಇದಕ್ಕೆ ಏನು ಆಗುತ್ತದೆ. ಏನು ಮಾಡುತ್ತೀರೆಂಬ ಬಗ್ಗೆ ಸಂಕ್ಷಿಪ್ತವಾಗಿ ಹೇಳಿದರೆ ಒಳ್ಳೆಯದಾಗುತ್ತದೆ. ಈಗ ಈ ಅಂಕಿ–ಅಂಶಗಳು ಏನು ಇದೆ. ಉದ್ಯೋಗ ಖಾತ್ರಿಗೆ ಸಂಬಂಧಪಟ್ಟ ಹಾಗೆ ನಾಲ್ಕು ವರ್ಷಗಳ ಮಾಹಿತಿಯನ್ನು ಕೊಟ್ಟಿದ್ದೀರಿ. ಕುಡಿಯುವ ನೀರಿನ ಬಗ್ಗೆಯೂ ನಾಲ್ಕು ವರ್ಷಗಳ ಮಾಹಿತಿಯನ್ನು ಕೊಟ್ಟಿದ್ದೀರಿ. ಇದರ ಒಟ್ಟಾರೆ ಸಾಧನೆಯ ಸಾರಾಂಶವಾಗುತ್ತದೆ. ಅದಕ್ಕಿಂತ ಮುಖ್ಯವಾಗಿ ನಾಳೆ ಜನರಿಗೆ

ಏನು ನೀಡಬೇಕೆಂಬುದು ಮುಖ್ಯವಾಗುತ್ತದೆ. ಆದ್ದರಿಂದ ತಾವು ಇದರ written copy ಯನ್ನು ನಮಗೆ ಕೊಟ್ಟು ಬಿಟ್ಟರೆ ಬಹಳ ಅನುಕೂಲವಾಗುತ್ತದೆ. ಇನ್ನೊಂದು ವಿಷಯವೇನೆಂದರೆ ಪ್ರಶ್ನೆಯನ್ನು ಕೂಡ ಇದನ್ನು ಆಧರಿಸಿ ಬರೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ತಾವು ನೋಡಿ, ಈಗ ಎಲ್ಲಿ fast ಆಗಿ ಓದುತ್ತಿರುವುದನ್ನು reporters ಬರೆದುಕೊಳ್ಳುವುದಕ್ಕೆ ಆಗುತ್ತಿಲ್ಲ. ಆ ರೀತಿಯಾಗುತ್ತದೆ. ಆದ್ದರಿಂದ record purpose ಗೆ written copy ಯನ್ನು ಕೊಟ್ಟರೆ ಬಹಳ ಒಳ್ಳೆಯದಾಗುತ್ತದೆ.

ಶ್ರೀ ವೈ.ಎನ್. ರುದ್ರೇಶ್ ಗೌಡ : ಮಾನ್ಯ ಮಂತ್ರಿಯವರು ಹತ್ತು ಸಾವಿರ ಕೋಟಿ ರೂ.ಗಳ ಬಗ್ಗೆ ಏನೂ ಮಾತನಾಡಲಿಲ್ಲ.

ಅಧ್ಯಕ್ಷರು : ಆ ವಿಷಯವನ್ನು ಆಮೇಲೆ ಕೇಳಿ.

ಶ್ರೀ ಕೆ.ಎಸ್. ಈಶ್ವರಪ್ಪ : ಎಲ್ಲರ ಗುರಿಯೂ ಹತ್ತು ಸಾವಿರ ಕೋಟಿ ರೂ.ಗಳ ಮೇಲಿದೆ ಎಂಬುದು ನನಗೆ ಗೊತ್ತಿದೆ. ವಿರೋಧ ಪಕ್ಷದ ಉಪ ನಾಯಕರಾದ ಮಾನ್ಯ ಜಯಚಂದ್ರರವರು ಹೇಳಿದ ಪ್ರಕಾರ 2012–13 ನೇ ಸಾಲಿನ ವಿವರಗಳನ್ನು ಕೊಡುವುದಕ್ಕೆ ಮಾತ್ರ ಇಷ್ಟಪಡುತ್ತಿದ್ದೇನೆ. 2012–13ನೇ ಸಾಲಿನ ಅನುಮೋದಿತ ಆಯವ್ಯಯ 2,442.97 ಕೋಟಿ ರೂ.ಗಳು ಆರಂಭದ ಶಿಲ್ಕು 83 ಲಕ್ಷ ರೂ.ಗಳಿವೆ. ಭಾರತ ಸರ್ಕಾರದ ಅನುದಾನ 700 ಕೋಟಿ ರೂ.ಗಳು ಕರ್ನಾಟಕ ರಾಜ್ಯ ಸರ್ಕಾರದ ಅನುದಾನ 37.82 ಕೋಟಿ ರೂ.ಗಳು. ಇತರೇ 5.19 ಕೋಟಿ ರೂ.ಗಳು ಒಟ್ಟು 739.84 ಕೋಟಿ ರೂ.ಗಳು ಪಂಚಾಯತ್ ರಾಜ್ ಸಂಸ್ಥೆಗಳಿಗೆ ಬಿಡುಗಡೆಯಾದ ಅನುದಾನ 643.72 ಇದ್ದು. ಒಟ್ಟು ಖರ್ಚಿನ ವಿವರ ಈ ದಿವಸದವರೆಗೆ 31903 ಕೋಟಿ ರೂ.ಗಳು ಉದ್ಯೋಗ ಚೀಟಿ ವಿತರಣೆ 52.03 ಕೋಟಿ, ಉದ್ಯೋಗ ಒದಗಿಸಲಾದ ಕುಟುಂಬಗಳು ಒಂದು ಕೋಟಿ ಹನ್ನೊಂದು ಲಕ್ಷವಿದ್ದು ಉತ್ಪತ್ತಿಯಾದ ಮಾನವ ದಿನಗಳು 18.18 ಕೋಟಿ ನೂರು ದಿನಗಳಲ್ಲಿ ಪೂರೈಸಿರುವ ಕುಟುಂಬಗಳ ಸಂಖ್ಯೆ 316 ಕೋಟಿ, ಒಟ್ಟು ಕಾಮಗಾರಿಗಳ ಸಂಖ್ಯೆ 2,49,457 ಕೋಟಿ, ಪೂರ್ಣಗೊಂಡ ಕಾಮಗಾರಿಗಳ ಸಂಖ್ಯೆ 10,979. ಈ ಯೋಜನೆಯ ಅನುಷ್ಠಾನದ ತೊಂದರೆಗಳು ತಮಗೆ ಗೊತ್ತಿದೆ. ಇದಕ್ಕೆ ಮಾಹಿತಿ ಕೊರತೆ, ಅನುಷ್ಠಾನ ಸಿಬ್ಬಂದಿಗಳು, ತಾಂತ್ರಿಕ ಸಿಬ್ಬಂದಿಗಳ

ಕೊರತೆ, ಈ ಯೋಜನೆಯ ಅನುಷ್ಠಾನಕ್ಕೆ ಕೆಲವು ತೊಂದರೆಗಳು ಕಂಡು ಬಂದಿದೆ. ಈಗಾಗಲೇ ಮಾನ್ಯ ಜಯಚಂದ್ರರೊಂದಿಗೆ ತುಮಕೂರಿನಲ್ಲಿ ಮಾತನಾಡಿದ ಪ್ರಕಾರ ಕೇಂದ್ರ ಸರ್ಕಾರದಿಂದಲೂ ಸಣ್ಣ ಪುಟ್ಟ ತೊಂದರೆಗಳು ಏನಿದೆ. ಇದರ ಬಗ್ಗೆಯೂ ಅಲ್ಲಿಗೆ ಹೋಗಿ ಮಾತನಾಡಿ, ಈ ತೊಂದರೆಗಳನ್ನು ಸರಿಪಡಿಸಿಕೊಳ್ಳುವ ದಿಕ್ಕಿನಲ್ಲೂ ಕೂಡ ನಾವು ಖಂಡಿತವಾಗಿ ಪ್ರಯತ್ನವನ್ನು ಮಾಡುತ್ತೇವೆಂಬ ವಿಷಯವನ್ನು ತಿಳಿಸಲಿಚ್ಛಿಸುತ್ತೇನೆ. ಕ್ರಿಯಾ ಯೋಜನೆ ಮುಖಾಂತರ ಪ್ರಸಕ್ತ ಸಾಲಿನಲ್ಲಿ ಒಟ್ಟು 2,40,738 ಕಾಮಗಾರಿಗಳನ್ನು ಕೈಗೊಂಡಿದ್ದು ಅದರಲ್ಲಿ 11,693 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿರುತ್ತದೆ.

ಶ್ರೀ ಸಿದ್ದರಾಮಯ್ಯ : ಅಧಿಕಾರಿಗಳು ಬರೆದು ಕೊಟ್ಟಿರುವುದನ್ನು ನೀವು ಓದುತ್ತಿದ್ದೀರಿ. ನಾವು ಏನೇನು ಪ್ರಶ್ನೆಗಳನ್ನು ಕೇಳಿದ್ದವು. ಅವುಗಳಿಗೆ ನೀವು ಉತ್ತರ ಹೇಳಬೇಕಲ್ಲವೇ ? ನಾನು ಏನು ಹೇಳಿದ್ದೆ ಎಂದರೆ, ಏಪ್ರಿಲ್ ಒಂದನೇ ತಾರೀಖಿನಿಂದ ಇವತ್ತಿನವರೆಗೆ ಅನೇಕ ಜಿಲ್ಲೆಗಳಲ್ಲಿ Action Plan approve ಆಗಿಲ್ಲ. ನಾನು ಹೋಗಿ review ಮಾಡಿದೆ. ಮೈಸೂರು ಜಿಲ್ಲೆಯಲ್ಲಿ ಎಲ್ಲಿಯೂ Action Plan ಜಿಲ್ಲಾ ಪಂಚಾಯಿತಿಯಿಂದ approve ಆಗಿಲ್ಲ. ಸುಮಾರು 300 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ, ಕೆಲಸ ಕೊಟ್ಟಿದ್ದೇವೆ ಎನ್ನುತ್ತೀರಿ. Action Plan approve ಆಗದೇ ಎಲ್ಲಿ ಕೆಲಸ ಕೊಟ್ಟಿದ್ದೀರಿ ? ಖರ್ಚು ಮಾಡಿರುವುದು ಯಾವ ಹಣ ? ಎರಡನೆಯದಾಗಿ, ನಮಗೆ ಬೇಕಾಗಿರುವುದು ಏನೆಂದರೆ, ಹೋದ ವರ್ಷ ಅಕ್ಟೋಬರ್ ತಿಂಗಳಲ್ಲಿ ರಾಜ್ಯದಲ್ಲಿ ಬರಗಾಲವಿದೆ ಎಂದು ಡಿಕ್ಲೇರ್ ಮಾಡಿದಿರಿ. ನವಂಬರ್, ಡಿಸೆಂಬರ್, ಜನವರಿ, ಫೆಬ್ರವರಿ ಮತ್ತು ಮಾರ್ಚ್ ತಿಂಗಳುಗಳಲ್ಲಿ ಭೀಕರವಾದಂತ ಬರಗಾಲವಿತ್ತು. ಆ ಕಾಲದಲ್ಲಿ ಜನ ಗುಳೇ ಹೋಗುವುದನ್ನು ತಪ್ಪಿಸಲು ಏನು ಮಾಡಿದಿರಿ? ಬಳ್ಳಾರಿ ಜಿಲ್ಲೆ ಕೂಡ್ಲಿಗೆಗೆ ನಾನು ಡಿಸೆಂಬರ್ ತಿಂಗಳಲ್ಲಿ ಹೋಗಿದ್ದೆ. ಎರಡು ವರ್ಷಗಳಿಂದ ಅಲ್ಲಿ NREGS ರಲ್ಲಿ ಕೆಲಸವೇ ನಡೆದಿಲ್ಲ. ಹೀಗಿರುವಾಗ ಕೂಡ್ಲಿಗಿಯವರಿಗೆ ಕೆಲಸ ಎಲ್ಲಿ ಕೊಟ್ಟಿದ್ದೀರಿ?

ಶ್ರೀ ಕೆ.ಎಸ್. ಈಶ್ವರಪ್ಪ : ನಾನು ಏನು ಹೇಳುವುದಕ್ಕೆ ಹೊರಟಿದ್ದೆ ಎಂದರೆ, ಅವರು ಏನೇನು ಪ್ರಶ್ನೆಗಳನ್ನು ಕೇಳಿದ್ದರು, ಅವುಗಳಿಗೆಲ್ಲ ಉತ್ತರವನ್ನು ರೆಡಿ ಮಾಡಿಕೊಂಡಿದ್ದೇವೆ. ಉತ್ತರವವನ್ನು ನಾವು ಕೊಡುತ್ತೇವೆ.

ಶ್ರೀ ಸಿದ್ದರಾಮಯ್ಯ : ನಮಗೆ ಬೇರೆ ಉತ್ತರವನ್ನು ಕೊಡುತ್ತೀರಾ?

ಶ್ರೀ ಕೆ.ಎಸ್. ಈಶ್ವರಪ್ಪ : ಬಾಯಲ್ಲಿ ಈಗ ಹೇಳುತ್ತಿರುವ ಉತ್ತರವಲ್ಲದೆ ಮತ್ತೆ ಬೇರೆ ಕೊಡಬೇಕೇ / ನೀವು ಕೇಳಿರುವುದಕ್ಕೆಲ್ಲ ಇದರಲ್ಲೇ ಉತ್ತರ ಸಿಗುತ್ತದೆ. ಮತ್ತೆ ಬೇಕಾದರೆ clarification ಕೊಡುತ್ತೇವೆ. ನಾವು ಏನೇನು ಉತ್ತರ ಕೊಡುತ್ತೇವೆ. ಅದಕ್ಕೆ ಮತ್ತೆ ನಿಮಗೆ clarification ಬೇಕು ಎಂದರೆ ಅದಕ್ಕೂ ಉತ್ತರ ಕೊಡುತ್ತೇವೆ. ಇಲ್ಲವೆಂದರೆ, ಏನು ಮಾಡಬೇಕೆಂದು ಹೇಳಿ.

ಶ್ರೀ ಸಿದ್ದರಾಮಯ್ಯ : As on today, NREGS Action Plan for 2012-13 ಯಾವ ಯಾವ ಜಿಲ್ಲೆಗಳಲ್ಲಿ ಅಪ್ರೂವಲ್ ಆಗಿದೆ. ಯಾವ ಯಾವ ಜಿಲ್ಲೆಲಯಲ್ಲಿ ಅಪ್ರೂವಲ್ ಆಗಿಲ್ಲ ಎನ್ನುವುದನ್ನು ಹೇಳಿ. ಅಪ್ರೂವರ್ ಆಗಿದ್ದರೆ ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಉದ್ಯೋಗವನ್ನು ಸೃಷ್ಟಿ ಮಾಡಿದ್ದೀರಿ? ಕಳೆದ ವರ್ಷ ಇದೇ ಕಾಲದಲ್ಲಿ ಬರಗಾಲವಿರಲಿಲ್ಲ. ಕಳೆದ ವರ್ಷ ಬರಗಾಲವಿಲ್ಲದೇ ಇದ್ದಾಗ ನೀವು ಎಷ್ಟು ಖರ್ಚು ಮಾಡಿದ್ದೀರಿ? ಬರಗಾಲ ಬಂದ ಮೇಲೆ ಜನರು ಗುಳೆ ಹೋಗುವುದನ್ನು ತಪ್ಪಿಸಲಿಕ್ಕೆ ಎಷ್ಟು ಖರ್ಚು ಮಾಡಿದ್ದೀರಿ ? ಈ ರೀತಿಯ ಪ್ರಶ್ನೆಗಳಿಗೆ ನಮಗೆ ಉತ್ತರ ಬೇಕು. ಅದನ್ನು ಬಿಟ್ಟು ಈ ವರ್ಷ 1,923 ಕೋಟಿ ರೂಪಾಯಿ ಇತ್ತು. ಅದರಲ್ಲಿ ನಾವು 1,922 ಕೋಟಿ ಖರ್ಚು ಮಾಡಿದ್ದೇವೆ. 100% performance ಆಗಿದೆ ಎಂದರೆ what is this? ಆ ರೀತಿ ಹೇಳಿದರೆ ಆಗುವುದಿಲ್ಲ ಈಶ್ವರಪ್ಪನವರೇ? ನಾವು ಏನು ಹೇಳುತ್ತೇವೆ ಎಂದರೆ, ಜನರು ಕೆಲಸವಿಲ್ಲದೇ ಗುಳೆ ಹೋಗುತ್ತಿದ್ದಾರೆ. ಜನರು ಗುಳೆ ಹೋಗುವುದು ಸತ್ಯವಲ್ಲವೆ? ಕೊಪ್ಪಳದವರು ಗುಳೆ ಹೋಗುವಾಗ train accident ಆಗಿ 50 ಜನರು ಸತ್ತುಹೋದರು. ಅವರು ಪಿಕ್‌ನಿಕ್‌ಗೆ ಹೋಗುತ್ತಿದ್ದರೇ? ಪಾಪ, ಅವರು ಕೆಲಸವಿಲ್ಲದೇ, ಕೆಲಸ ಹುಡುಕಿಕೊಂಡು ಹೋಗುತ್ತಿದ್ದರು. Train accident ಆಗಿ ಸತ್ತಂತಹ ಜನರು ಗುಳೆ ಹೋಗುತ್ತಿದ್ದಂಥವರು. ರಾಜ್ಯದಲ್ಲಿ ಬರಗಾಲ

ಬಂದ ಮೇಲೆ ಇಷ್ಟು ಜನ ಗುಳೆ ಹೋಗುವುದನ್ನು ತಪ್ಪಿಸಿದ್ದೇವೆ. ಈ ರೀತಿ ಜಾನುವಾರುಗಳನ್ನು ರಕ್ಷಣೆ ಮಾಡಿದೆವು. ಇಷ್ಟು ಉದ್ಯೋಗವನ್ನು ಸೃಷ್ಟಿ ಮಾಡಿದೆವು ಎನ್ನುವ ಉತ್ತರ ಬೇಕು. ಅದನ್ನು ಬಿಟ್ಟು ಅಧಿಕಾರಿಗಳು ಬರೆದು ಕೊಟ್ಟಿರುವ ಉತ್ತರವನ್ನು ಹೇಳಿದರೆ ಆದರಿಂದ ಉಪಯೋಗವೂ ಆಗುವುದಿಲ್ಲ. ರಾಜ್ಯದ ಜನಗಳಿಗೆ ಸಮಾಧಾನವಾಗುವುದಿಲ್ಲ. ನಮಗೂ ಸಮಾಧಾನವಾಗುವುದಿಲ್ಲ ಎನ್ನುವುದನ್ನು ಹೇಳಿ ಬಿಡುತ್ತೇನೆ.

ಡಾ॥ ಹೆಚ್.ಸಿ. ಮಹದೇವಪ್ಪ : ಈಶ್ವರಪ್ಪನವರೇ, ನೀವು ಹೇಳುತ್ತಿರುವುದು 2011-12 ರದ್ದು ಇರಬಹುದು. ಕೆಲವು ಕಡೆ MIS ಆಗಿಲ್ಲ, ಪೇಮೆಂಟೂ ಆಗಿಲ್ಲ. 2012-13ರಲ್ಲಿ Action Plan approve ಆಗದೇ ಇದ್ದ ಮೇಲೆ ಹಣವನ್ನು ಖರ್ಚು ಮಾಡುವ ಪ್ರಶ್ನೆಯೇ ಬರುವುದಿಲ್ಲ. By chance ಮಾಡಿದ್ದರೆ ಆದರ ವಿವರಗಳನ್ನು ಕರೆಕ್ಟಾಗಿ ಕೊಟ್ಟರೆ ಸರಿಹೋಗುತ್ತದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ : 2011-12ರ spill-over works ಗೆ ಖರ್ಚು ಮಾಡುತ್ತಿರಬೇಕು. ಬಂದಂಥ ಹಣ 2011-12 ರದ್ದು. 2012-13ರ Action Plan ಆಗದೇ ಹಣ ಹೇಗೆ ಖರ್ಚಾಗುತ್ತದೆ? ಖರ್ಚಾಗಲು ಸಾಧ್ಯವೇ ಇಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಉದ್ಯೋಗ ಖಾತರಿ ಯೋಜನೆಯಲ್ಲಿ ಕೆಲವು ಜಿಲ್ಲೆಗಳಲ್ಲಿ Action Plan ಆಗಿಲ್ಲ ಎಂದು ತಾವು ಹೇಳಿದಿರಿ. ಕೆಲವು ಜಿಲ್ಲೆಗಳಲ್ಲಿ ಆಗಿಲ್ಲ ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಬಹುತೇಕ ಜಿಲ್ಲೆಗಳಲ್ಲಿ Action Plan ಆಗಿದೆ.

ಶ್ರೀ ಸಿದ್ದರಾಮಯ್ಯ : ಅದರ ವಿವರಗಳನ್ನೇ ಕೊಡಿ. ಇಂಥಿಂಥ ಜಿಲ್ಲೆಯಲ್ಲಿ Action Plan ಆಗಿದೆ, ಇಂಥಿಂಥ ಜಿಲ್ಲೆಗಳಲ್ಲಿ Action Plan ಆಗಿಲ್ಲ. Action Plan ಆಗಿಲ್ಲದಿರುವ ಕಡೆಗಳಲ್ಲಿ ನಾವು ಉದ್ಯೋಗ ಕೊಡಲು ಏನು ಮಾಡಿದ್ದೇವೆ ಎನ್ನುವುದನ್ನು ಹೇಳಿ.

ಶ್ರೀ ಜಗದೀಶ್ ಶೆಟ್ಟರ್ : ನಾನು ಕಂಪ್ಲೀಟ್ ಮಾಡುವುದಕ್ಕಾದರೂ ಅವಕಾಶ ಕೊಡಿ. ಸ್ಪಷ್ಟೀಕರಣ ಕೇಳಿದಿರಿ. ನಾನು ಹೇಳುತ್ತಿದ್ದೇವೆ.

ಶ್ರೀ ಸಿದ್ದರಾಮಯ್ಯ : ನಮ್ಮ ಜಿಲ್ಲೆಯಲ್ಲಿ ಆಗಿಲ್ಲ. ಕೊಪ್ಪಳ ಜಿಲ್ಲೆಯಲ್ಲಿ ಆಗಿಲ್ಲ ಎಂದು ಹೇಳುತ್ತಿದ್ದಾರೆ. ಮೈಸೂರು ಜಿಲ್ಲೆಯಲ್ಲಿ ಬರಗಾಲವಿದೆ. Action Plan ಆಗದೇ ಏಪ್ರಿಲ್ ಒಂದರಿಂದ ಇವತ್ತಿನವರೆಗೆ ಏನು ಕೆಲಸ ನಡೆದಿದೆ? ಅದಕ್ಕೆ ಯಾವ ದುಡ್ಡು ಖರ್ಚು ಮಾಡಿದ್ದೀರಿ? ಅದು ಎಲ್ಲಿಂದ ಬಂತು ಎನ್ನುವುದನ್ನು ಹೇಳಬೇಕಲ್ಲವೇ ? ನಮಗೆ ಗೊತ್ತಾಗ ಬೇಡವೇ?

ಶ್ರೀ ಜಗದೀಶ್ ಶೆಟ್ಟರ್ : ಕೆಲವು ಜಿಲ್ಲೆಗಳಲ್ಲಿ ಆಗಿರಲಿಕ್ಕಿಲ್ಲ. ಮೊನ್ನೆ ನಾನು P.C. ಮತ್ತು C.E.O.U ಗಳೊಂದಿಗೆ video conferance ಮಾಡಿದ್ದೇನೆ. ಕೆಲವು ಜಿಲ್ಲೆಗಳಲ್ಲಿ ಆಗದೇ ಇದ್ದ ಸಂದರ್ಭದಲ್ಲಿ ....

(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರಾದ ಶ್ರೀ ಸಿದ್ದರಾಮಯ್ಯನವರು ಮಾತನಾಡಲು ಪ್ರಯತ್ನ ಪಟ್ಟರು)

ಶ್ರೀ ಜಗದೀಶ್ ಶೆಟ್ಟರ್ : ನಾನು ಕಂಪ್ಲೀಟ್ ಮಾಡುವುದಕ್ಕಾದರೂ ಬಿಡಿ. ಇಲ್ಲದಿದ್ದರೆ ನಾನು ಮಾತನಾಡುವುದಿಲ್ಲ ಬಿಡಿ.

ಶ್ರೀ ಸಿದ್ದರಾಮಯ್ಯ : ಶೆಟ್ಟರ್‌ರವರೇ, ನಿಮಗೆ ಉಳಿದಿರುವುದು ಎಂಟೇ ತಿಂಗಳು. ನೀವು ಬೇಸರ ಮಾಡಿಕೊಂಡರೆ ಹೇಗೆ?

ಶ್ರೀ ಜಗದೀಶ್ ಶೆಟ್ಟರ್ : ನಾನು ಕಂಪ್ಲೀಟ್ ಮಾಡಲಿಕ್ಕೇ ಬಿಡುತ್ತಿದ್ದರಲ್ಲ ನೀವು?

ಶ್ರೀ ಸಿದ್ದರಾಮಯ್ಯ : Which are the districts where Action Plan for NREGS works are approved ? If approved, when ? And which are the districts where Action Plan for NREGS works are not approved ? ಈ ಪ್ರಶ್ನೆಗಳಿಗೆ ದಯವಿಟ್ಟು ಉತ್ತರ ಕೊಡುವಿರಾ ?

ಶ್ರೀ ಟಿ.ಬಿ. ಜಯಚಂದ್ರ : ತಾವು ಉತ್ತರ ಕೊಡುವುದಕ್ಕೆ ಮುಂಚೆ ಈ ರೀತಿ split up ಮಾಡಿಕೊಳ್ಳಿ Action Plan approve ಆಗಿರುವುದು ಒಂದು ಕಡೆ. ನಂತರ ಅದಕ್ಕೆ ಆಡಳಿತಾತ್ಮಕ ಮಂಜೂರಾತಿ ಸಿಗುವುದು ಬಹಳ ಮುಖ್ಯ. ಅದರಲ್ಲಿ material component ಎಷ್ಟು labour component ಎಷ್ಟು? ಏಕೆಂದರೆ, ನೀವು material component progress

ತೋರಿಸಬಹುದು. ಆದರೆ labour component ಆಗಿರುವುದಿಲ್ಲ. ಆದ್ದರಿಂದ material component ಎಷ್ಟು labour component ಎಷ್ಟು progress ಎಷ್ಟಾಗಿದೆ ಎನ್ನುವುದನ್ನು split up ಮಾಡಿ ಕೊಟ್ಟರೆ ಅನುಕೂಲವಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ಜಯಚಂದ್ರರವರೆ, ಉದ್ಯೋಗ ಖಾತರಿ ಯೋಜನೆಯಲ್ಲಿ ಯಾವ ರೀತಿ ಕೆಲಸವಾಗುತ್ತಿದೆ ಎನ್ನುವುದು ನಿಮಗೂ ಗೊತ್ತಿದೆ. ಪ್ರತಿಪಕ್ಷದ ನಾಯಕರಿಗೂ ಗೊತ್ತಿದೆ. ನಾನು ಒಂದು ವಿಷಯವನ್ನು ಹೇಳುತ್ತೇನೆ. ಏಪ್ರಿಲ್ ಒಂದರ ನಂತರ ಎಲ್ಲ ಕಡೆಗಳಲ್ಲಿಯೂ Action Plan ready ಮಾಡಿಕೊಳ್ಳಬೇ ಮತ್ತು ಅದಕ್ಕೆ approval ತೆಗೆದುಕೊಳ್ಳಬೇಕೆಂದು ನಾವು instruction ಕೊಟ್ಟಿದ್ದೇವೆ. ಕಳೆದ ವರ್ಷದ on going works ಸಹ ಇವೆ. ಇವತ್ತು ಯಾವುದೇ ಒಂದು ಜಿಲ್ಲೆಯಲ್ಲಿ ಅಥವಾ ಯಾವುದೇ ಒಂದು ಗ್ರಾಮದಲ್ಲಿ ಯಾರೇ ಕೆಲಸ ಕೇಳಿಕೊಂಡು ಬಂದರೂ, ಅವರಿಗೆ ಕೆಲಸವಿಲ್ಲ ಎಂದು ಹೇಳಿ ವಾಪಸ್ಸು ಕಳುಹಿಸಿಲ್ಲ. ಏಕೆಂದರೆ, on-going works ಸಾಕಷ್ಟು ಇವೆ. Action Plan ready ಮಾಡಿಕೊಂಡು approve ಮಾಡಿಸಿಕೊಳ್ಳುವ ಹೊತ್ತಿಗೆ on-going works ಮುಗಿಯುತ್ತವೆ. ಅವು ಮುಗಿದ ಮೇಲೆ ಮತ್ತೆ ಅಲ್ಲಿ ಯಾವುದೂ vaccum ಉಳಿಯಬಾರದು. ಆ ದೃಷ್ಟಿಯಿಂದ Action Plan ಗೆ approval ತೆಗೆದುಕೊಂಡಿರಬೇಕು. on-going works ಮುಗಿದ ತಕ್ಷಣ ಅದನ್ನು ತೆಗೆದುಕೊಳ್ಳಬೇಕೆಂದು instruction ಕೊಟ್ಟಿದ್ದೇವೆ. ಇದು ಪ್ರಸಕ್ತ ನಡೆಯುತ್ತಿರುವುದು. ಉದ್ಯೋಗ ಖಾತರಿ ಯೋಜನೆಯಲ್ಲಿ ನಡೆಯುವುದೇ ಹೀಗೆ. ಕಳೆದ ವರ್ಷವೂ ಹಾಗೇ ಇದೆ. ಎಲ್ಲ ರಾಜ್ಯಗಳಲ್ಲಿಯೂ ಇದೇ ರೀತಿಯ ಸಿಸ್ಟಂ ಇದೆ. ಅದನ್ನು ನಾವು ಮಾಡುತ್ತಿದ್ದೇವೆ. ಯಾವಾಗ ಕಂಪ್ಲೀಟ್ ಆಗುತ್ತದೋ, ಆಗ immediately MIS ರಲ್ಲಿ ಅದು entry ಆಗುತ್ತದೆ. ನಾವು ಎಷ್ಟು ಖರ್ಚು ಮಾಡುತ್ತೇವೆ. ತಕ್ಷಣವೇ ಕೇಂದ್ರ ಸರ್ಕಾರದವರು ನಮಗೆ ಹಣವನ್ನು ಕಳುಹಿಸುತ್ತಾರೆ. ಅದನು ನಾವು ಎಲ್ಲ ಕಡೆಯೂ ಮಾಡುತ್ತಿದ್ದೇವೆ.

ಶ್ರೀ ಸಿದ್ದರಾಮಯ್ಯ : NREGS ಬಗ್ಗೆ ನಾವು ನಾರ್ಮಲ್ ಆಗಿ ಪ್ರಶ್ನೆ ಕೇಳುತ್ತಿಲ್ಲ. This is not just a general discussion. We are facing a severe drought. ಇಂಥ ಪರಿಸ್ಥಿತಿಯಲ್ಲಿ ನೀವು ಉದ್ಯೋಗ ಕೊಡಲಿಕ್ಕೆ ಏನೇನು ವಿಶೇಷವಾದಂಥ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೀರಿ ? ಗುಳೆ ಹೋಗುವುದನ್ನು ತಪ್ಪಿಸಿರುವಿರಾ? ಎನ್ನವುದು ಬೇಕು. ಏಪ್ರಿಲ್ ಒಂದರಿಂದ ಹೊಸವರ್ಷ ಪ್ರಾರಂಭವಾಗಿದೆ. ಏಪ್ರಿಲ್ ಒಂದರಿಂದ ಕೆಲಸ ಮಾಡಬೇಕಾದರೆ Action Plan ಬೇಕು. Action Plan ಇಲ್ಲವೇ ಯಾವ ಪಂಚಾಯಿತಿಯವರೂ ಕೆಲಸ ಮಾಡುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ನಾನು ಆಗಲೇ ಹೇಳಿದೆ. on-going works ಇದೆ. ಯಾರಾದರೂ ಜನರು ಕೆಲಸ ಬೇಕು ಎಂದು ಕೇಳಿಕೊಂಡು ಬಂದವರಿಗೆ ಕೂಲಿ ಕೆಲಸ ಇಲ್ಲವೆನ್ನುವ ಪರಿಸ್ಥಿತಿ ಇಲ್ಲ.

ಶ್ರೀ ಟಿ.ಬಿ. ಜಯಚಂದ್ರ : ಈಶ್ವರಪ್ಪನವರು ತುಮಕೂರಿಗೆ ಬಂದಿದ್ದರು. on-going works ಇದ್ದಾಗ್ಯೂ ಕೂಡ ಪ್ರೋಗ್ರೆಸ್ ಎಷ್ಟಾಗಿದೆ ಎಂದರೆ ಇಡೀ ನಾಲ್ಕು ತಿಂಗಳಿಂದ 96 ಲಕ್ಷ ಮಾತ್ರ.

ಶ್ರೀ ಸಿದ್ದರಾಮಯ್ಯ : ಅಧ್ಯಕ್ಷರೆ, ನೀವು ಬೇಕಾದರೆ ಮಾಹಿತಿ ತರಿಸಿಕೊಳ್ಳಿ, ನಂಜನಗೂಡು ತಾಲ್ಲೂಕಿನಲ್ಲಿ ಕಳೆದ ಏಪ್ರಿಲ್‌ಗಿಂತ ಇವತ್ತಿನವರೆಗೆ ಬರೀ 5 ಲಕ್ಷ ಖರ್ಚಾಗಿದೆ. ಅದು ಯಾವ on-going works? ಅಲ್ಲಿ ಬರಗಾಲವಿಲ್ಲವೇ? Entire ನಂಜನಗೂಡು ತಾಲ್ಲೂಕಿನಲ್ಲಿ ಕಳೆದ 5 ತಿಂಗಳಿನಿಂದ ಕೇವಲ 5 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. Is the the way to giving the job? ಬೇಕಾದರೆ figures ತರಿಸಿ. ನಾನು ಮೊನ್ನೆ reveiew ಮಾಡಿದ್ದೇನೆ. Get the figures from Mysore Taluk, get the figures from T. Narasipura Taluk. ಸ್ವಲ್ಪ ನೋಡಿಕೊಂಡೇ ಹೇಳುತ್ತಿರುವುದು. Review ಮಾಡಿ ಹೇಳುತ್ತಿದ್ದೇನೆ. ಅದಕ್ಕೆ ಮೈಸೂರು ಜಿಲ್ಲೆಯಲ್ಲಿ action plan appove ಆಗಲಿಲ್ಲ. ನೀವು on-going wokrs ಗೆ ಹೋಗುತ್ತಿದ್ದೇವೆ, 5 ಲಕ್ಷ ರೂಪಾಯಿ ಖರ್ಚಾಗುತ್ತದೆನ್ನುತ್ತೀರಿ. Approve ಆಗಿದ್ದರೆ ಕೇವಲ 5

ಲಕ್ಷ ರೂಪಾಯಿ ಮಾತ್ರ ಏಕೆ ಖರ್ಚಾಗುತ್ತಿತ್ತು ? What has happened to on-going works?

ಶ್ರೀ ಕೆ.ಎಸ್. ಈಶ್ವರಪ್ಪ (ಉಪ ಮುಖ್ಯಮಂತ್ರಿ ಹಾಗೂ ಕಂದಾಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು) : ಮಾನ್ಯ ವಿರೋಧ ಪಕ್ಷದ ನಾಯಕರೆ, ಇದರಲ್ಲಿ ಎರಡು ತರಹ ಇದೆ. ತಾವು ಹೇಳಿದಹಾಗೆ, 2011–12 ರ on-going works ಏನಿದೆ ಅದನ್ನು ಮೊದಲು continue ಮಾಡಿಕೊಂಡಿದ್ದೇವೆ. ಇದು ತಮಗೆ ಗೊತ್ತಿದೆ. ಮತ್ತೆ ಇದಕ್ಕೆ ಅನುಮೋದನೆ ಬೇಕಾದ ಅವಶ್ಯಕತೆ ಇಲ್ಲ. ಆದರೆ, ಅನೇಕ ಜಿಲ್ಲೆಗಳಲ್ಲಿ ಕ್ರಿಯಾ ಯೋಜನೆ ಕೂಡ ಆಗಿದೆ. ಅನೇಕ ಜಿಲ್ಲೆಗಳಲ್ಲಿ ನಾವು ಕ್ರಿಯಾ ಯೋಜನೆಗಳನ್ನು ಮಾಡಿಕೊಂಡು ಕೆಲಸಗಳನ್ನು ಪ್ರಾರಂಭ ಮಾಡಿದ್ದೇವೆ.

ಶ್ರೀ ಹೆಚ್.ಡಿ. ರೇವಣ್ಣ : ನಾನು ನಮ್ಮ ಜಿಲ್ಲೆಯಲ್ಲಿ review ಮಾಡಿದ್ದೇನೆ. On-going works ಅನ್ನು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. Last year ನದ್ದು ಈ ವರ್ಷ ಮತ್ತೆ ಪಂಚಾಯಿತಿಯಲ್ಲಿ ಸೇರಿಸಿದರೆ ಮಾತ್ರ ತೆಗೆದುಕೊಳ್ಳಬಹುದೇ ಹೊರತು ಇಲ್ಲದಿದ್ದರೆ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಇವತ್ತಿನವರೆಗೂ on-going works approve ಆಗಿಲ್ಲ 2011–12 ರದ್ದು ಸಹ approve ಆಗಿಲ್ಲ. Payment ಬಾಕಿ ಇದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಗಳು) : On-going works approve ಆಗಿದ್ದರೂ ...

(ಗೊಂದಲ)

ಅಧ್ಯಕ್ಷರು : Let us go to Mysore District.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಅಲ್ಲಿ ಎಲ್ಲಿಯಾದರೂ ನಡೆಯುತ್ತಿದೆ ಎಂದರೆ ಅಲ್ಲಿಯೇ ನಿಮ್ಮ ಎದುರುಗಡೆಯೇ ನಾನು ರಾಜಿನಾಮೆ ಕೊಟ್ಟು ಹೋಗುತ್ತೇನೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : Last year work ಮಾಡುವುದಕ್ಕೆ ಬರುವುದಿಲ್ಲ.

(ಗೊಂದಲ)

ಅಧ್ಯಕ್ಷರು : ಅವರು ಮಾತನಾಡಿ ಮುಗಿಸಲಿ.

(ಗೊಂದಲ)

ಅಧ್ಯಕ್ಷರು : Let him complete

ಶ್ರೀ ಕೆ.ಎಸ್. ಈಶ್ವರಪ್ಪ : ನಾನು ಪ್ರಾರಂಭದಲ್ಲಿಯೇ ಹೇಳಿದೆ.

ಶ್ರೀ ಸಿದ್ದರಾಮಯ್ಯ : ನೀವು ಈಗ ಮಂತ್ರಿಯಾದವರು. ಮಾನ್ಯ ಮುಖ್ಯಮಂತ್ರಿಯವರು NREGS ಅನ್ನು ನೋಡಿಕೊಳ್ಳುತ್ತಿದ್ದರು. ನಿಮಗಿಂತ ಹೆಚ್ಚು ಅವರಿಗೆ ಮಾಹಿತಿ ಇರುತ್ತದೆ. ನೀವು ಇನ್ನೂ ರಾಜ್ಯದಾದ್ಯಂತ ಹೋಗಿ ನೋಡುವುದಕ್ಕಾಗಿಲ್ಲ. ಇತ್ತೀಚೆಗೆ ನೀವು ಚಿತ್ರದುರ್ಗ, ದಾವಣಗೆರೆ ಜಿಲ್ಲೆಗಳಿಗೆ ಹೋಗಿ ನೋಡಿದ್ದೀರಿ. ಐಮಂಗಲಕ್ಕೆ ಹೋದಾಗ ಉಪ್ಪು ನೀರು ಕುಡಿಯುತ್ತಿದ್ದೇವೆಂದು ನಿಮಗೆಲ್ಲ ತೋರಿಸಿದರು. ಅದು ಐಮಂಗಲದಲ್ಲಿ ಅಲ್ಲವೇ ? ನಾವೆಲ್ಲ ಉಪ್ಪು ನೀರು ಕುಡಿಯುತ್ತಿದ್ದೇವೆ, ನೋಡಿ ಎಂದು ಹೆಣ್ಣುಮಕ್ಕಳೆಲ್ಲ ನಿಮಗೆ ಘೇರಾವ್ ಮಾಡಿ ನಿಮಗೆ ಕೊಟ್ಟರು. ಆ ತರಹ ಅನೇಕ ಕಡೆಗಳಲ್ಲಿದೆ. ಅಲ್ಲಿ ಶುದ್ಧವಾದ ನೀರು ಕುಡಿಯಲಿಕ್ಕೆ ನೀವು ವ್ಯವಸ್ಥೆ ಮಾಡಿಕೊಡಲೇ ಇಲ್ಲ. You go to Hagaribommanahalli

ಶ್ರೀ ಕೆ.ಎಸ್. ಈಶ್ವರಪ್ಪ : ನಿನ್ನೆ ಪತ್ರಿಕೆಗಳಲ್ಲಿ ನೋಡಿದ್ದು, ಘೇರಾವ್ ಮಾಡಿದ್ದು ಈ ರೀತಿ ಪ್ರಸ್ತಾಪವಾಗುತ್ತಿದೆ.

ಶ್ರೀ ಸಿದ್ದರಾಮಯ್ಯ : ಪತ್ರಿಕೆಯಲ್ಲಿ ಬಂದಿರುವುದನ್ನು ಹೇಳಿದೆ.

ಶ್ರೀ ಕೆ.ಎಸ್. ಈಶ್ವರಪ್ಪ : You are right ಇಲ್ಲ ಎಂದು ಹೇಳುತ್ತಿಲ್ಲ. ಅದನ್ನೇ ನಾನು ಹೇಳುತ್ತಿರುವುದು. ನಾಯಕರು ಮಂತ್ರಿಗಳು ಹೋದಲ್ಲಿ ಜನ ಸೇರಿದರೆ ಅದನ್ನು ಘೇರಾವ್ ಎಂದು ಕರೆಯುವುದೇ ಅಭ್ಯಾಸ. ಇದರಲ್ಲಿ ಏನು ಅನುಮಾನವಿಲ್ಲ. ನಾನು, ನನ್ನ ಜೊತೆ ಬಂದಂಥ ಶಾಸಕರುಗಳೂ ಕೂಡ ಅವರ ಜೊತೆಗೆ ಜಿಲ್ಲಾ ಪರಿಷತ್ ಅಧ್ಯಕ್ಷರು, ಅಲ್ಲಿಯ ಸದಸ್ಯರು ಎಲ್ಲರನ್ನೂ ಕರೆದುಕೊಂಡು ಆ ಭಾಗಕ್ಕೆ ನಾವು ಹೋಗಿದ್ದೆವು. ಆಲ್ಲಿಗೆ ಜನ, ಹೆಣ್ಣುಮಕ್ಕಳೆಲ್ಲ ಬಂದರು. ಇವತ್ತಿನಿಂದಲ್ಲ. ಬಹಳ

ವರ್ಷಗಳಿಂದ ನಮಗೆ ನೀರಿನ ಸಮಸ್ಯೆ ಇದೆ ಎಂದು ಹೇಳಿದರು. ಸರ್ಕಾರ ಏನು ಮಾಡಿದೆ ಎಂದರೆ, ಈ ವಾರದಲ್ಲಿಯೇ ನಾಲ್ಕು borewell ಗಳನ್ನು ಕೊರೆದಿದ್ದೇವೆ. 4 ರಲ್ಲಿ 3 borewell ನಲ್ಲಿ ಅದೇ ತರಹದ ಉಪ್ಪು ನೀರು ಬಂದಿದೆ. ಕೊನೆಗೆ ಏನು ಮಾಡಿದೆವು ಎಂದರೆ ಸ್ವಲ್ಪ ಪಕ್ಕದಲ್ಲಿ ಕೊರೆಯುವಂಥ ಪ್ರಯತ್ನ ಮಾಡಿದೆವು. 4ನೇ borewell ನಲ್ಲಿ ಸಿಹಿ ನೀರು ಬಂದಿದೆ. ಸಿಹಿ ನೀರು ಬಂದಿದೆ ಎಂದು ಅವರಿಗೆ ಹೇಳಿದೆವು. ಆ ಹೆಣ್ಣುಮಕ್ಕಳು ಸಹ ಒಪ್ಪಿಕೊಂಡರು. ಇನ್ನೂ 2–3 ದಿವಸಗಳಲ್ಲಿ ಅಲ್ಲಿ pipeline ಹಾಕಿ power connection ಕೊಟ್ಟು ಖಂಡಿತ ಮಾಡುತ್ತೇವೆಂದು ಹೇಳಿದಾಗ ಅವರು ಸಮಾಧಾನಗೊಂಡರು. ಸಮಾಧಾನವಾಗಿರುವುದು ಪತ್ರಿಕೆಯಲ್ಲಿ ಬರಲಿಲ್ಲ. ನೀರು ಕುಡಿಯಿರಿ, ನೀರು ಕುಡಿಯಿರಿ ಎಂದು ಹೇಳಿರುವುದು ಪತ್ರಿಕೆಯಲ್ಲಿ ಬಂದಿದೆ. ನಾನೂ ಸಹ ಆ ನೀರು ಕುಡಿದೆ.

ಶ್ರೀ ಸಿದ್ದರಾಮಯ್ಯ : ಅಲ್ಲಿ ಕುಡಿದ ನೀರು ಉಪ್ಪು ನೀರು ಆಗಿತ್ತಲ್ಲವೇ?

ಶ್ರೀ ಕೆ.ಎಸ್. ಈಶ್ವರಪ್ಪ : 4 borewell ನಲ್ಲಿ 3 borewell ನಲ್ಲಿ ಬಂದಿದ್ದ ನೀರು ಉಪ್ಪು ನೀರು ಆಗಿತ್ತು. ನಾನು ಇಲ್ಲ ಎಂದು ಹೇಳಿಲ್ಲ. ಆದರೆ 4ನೇ borewell ನಲ್ಲಿ ಬಂದಿರುವ ನೀರು ಅದು ಸಿಹಿನೀರು. ಅದು ನಿಮಗೆ ಗೊತ್ತಿರಲಿ.

ಶ್ರೀ ಸಿದ್ದರಾಮಯ್ಯ : I am not disputing.

ಶ್ರೀ ಕೆ.ಎಸ್. ಈಶ್ವರಪ್ಪ : ನೀವು ಹೇಳುತ್ತಿರುವುದು ಸರಿ ಇದೆ. ನಾನು ಹೇಳುವುದಕ್ಕೆ ಹೊರಟಿದ್ದು. ಏನೆಂದರೆ, ಇಲ್ಲಿ ಏನು ಪ್ರಾಮಾಣಿಕ ಪ್ರಯತ್ನ ನಡೆಯುತ್ತಿದೆ. ಒಂದು ಹಳ್ಳಿಯಲ್ಲಿ 4–4 borewell ಗಳನ್ನು ಕೊರೆದು ಪ್ರಯತ್ನ ಮಾಡಿದ್ದೇವೆಂದು ಹೇಳಿದ ಮೇಲೆ, ನಾವು ಅಲ್ಲಿ ನೀರು ಕುಡಿದ ಮೇಲೆ, ಖಂಡಿತ ನೀವು ಮನುಷ್ಯರು, ನಾವು ಮನುಷ್ಯರು, ಹೊಸದಾಗಿ ಪಕ್ಕದಲ್ಲಿ ಬೋರ್‌ವೆಲ್ ಕೊರೆದಿದ್ದೇವೆ, ಅಲ್ಲಿ ಸಿಹಿನೀರು ಬಂದಿದೆ ಎಂದು ಹೇಳಿ ಆ ನೀರನ್ನು ಅವರಿಗೆ ತೋರಿಸಿದೆವು. ಒಳ್ಳೆಯ ಪ್ರಯತ್ನ ಆಗಿದೆ ಸರ್ ಎಂದು ಅದನ್ನು ಅವರು ಒಪ್ಪಿಕೊಂಡರು. ಘೇರಾವ್

ಮಾಡಿದರು ಎಂದು ಪತ್ರಿಕೆಯಲ್ಲಿ ಬರುವುದು ಸ್ವಾಭಾವಿಕ. ಘೇರಾವ್ ಮಾಡಿಸಿಕೊಂಡು ನಿಮಗೂ ಅಭ್ಯಾಸವಿದೆ. ನಾವು ಈಗ ಶುರು ಮಾಡಿಕೊಂಡಿದ್ದೇವೆ. ನಾನು ಹೇಳುವುದೇನೆಂದರೆ, ಯಾವ್ಯಾವ ಯೋಜನೆಗಳನ್ನು ಏನೆಂದು ಮಾಡುತ್ತಿದ್ದೇವೆನ್ನುವುದನ್ನು 14 ಇಲಾಖೆಗಳ ಬಗ್ಗೆ ನಾವು ಸ್ಪಷ್ಟವಾಗಿ ಇಲ್ಲಿ ಉತ್ತರವನ್ನು ಕೊಡುತ್ತಿದ್ದೇವೆ. ಇನ್ನೂ ಏನೇನು clarification ಬೇಕು ಎನ್ನುವುದನ್ನು ಖಂಡಿತ ಹೇಳಿ. ಅದಕ್ಕೂ ಉತ್ತರ ಕೊಡುತ್ತೇವೆ. ಇಲ್ಲ ಎಂದರೆ ಬೇರೆ ದಾರಿ ಏನಿದೆ ?

ಶ್ರೀ ಟಿ.ಬಿ. ಜಯಚಂದ್ರ : ತಾವು ಏನು ಉತ್ತರ ಕೊಡುತ್ತಿದ್ದೀರಿ ಅದರ ಕಾಪಿ ಕೊಟ್ಟರೆ ಒಳ್ಳೆಯದು.

ಶ್ರೀ ಕೆ.ಎಸ್. ಈಶ್ವರಪ್ಪ : ಕಾಫಿ ಕೊಡಿ ಎಂದು ಕೇಳುತ್ತಿದ್ದೀರಿ. ಆದರೆ, ಈ ನಿಮಿಷದವರೆಗೂ ಸಹ ನಮ್ಮ ಗೌರವಾನ್ವಿತ ಸದಸ್ಯರು ಬರದ ಬಗ್ಗೆ ಮಾತನಾಡಿದರು.

ಶ್ರೀ ಟಿ.ಬಿ. ಜಯಚಂದ್ರ : ಒಟ್ಟಾಗಿ ನಿಮ್ಮ programme ಅನ್ನು ಏನು implementation ಮಾಡಿದೆ. ಏನು ಸಾಧನೆಯಾಗಿದೆ ಎಂದು ಕೊಟ್ಟರೆ ಒಳ್ಳೆಯದು.

ಶ್ರೀ ಕೆ.ಎಸ್. ಈಶ್ವರಪ್ಪ : ಈ ನಿಮಿಷದವರೆಗೂ ಏನೇನು ಮಾತನಾಡಿದ್ದಾರೆ. ಅದನ್ನು note ಮಾಡಿಕೊಂಡಿದ್ದೇವೆ. ಅದಕ್ಕೆ ಉತ್ತರ ರೆಡಿ ಮಾಡಿಕೊಂಡಿದ್ದೇವೆ.

ಶ್ರೀ ಟಿ.ಬಿ. ಜಯಚಂದ್ರ : ಅದಕ್ಕೆ ಬೇರೆ ಉತ್ತರ ಕೊಡಿ. Totally Government programmes ಎಷ್ಟು implement ಆಗಿದೆ ? ಎಷ್ಟು spend ಆಗಿದೆ? ಇತ್ಯಾದಿ ಲಿಖಿತ statistics ಕೊಟ್ಟರೆ ಒಳ್ಳೆಯದು.

ಶ್ರೀ ಕೆ.ಎಸ್. ಈಶ್ವರಪ್ಪ : ನಮ್ಮದೇನು ಅಭ್ಯಂತರವಿಲ್ಲ. ನಾನು ಈಗ ಏನು ಹೇಳುತ್ತಿದ್ದೇನೆ. ಅದನ್ನು print ಮಾಡಿ ವಾಪಸ್ಸು ಎಲ್ಲರಿಗೂ ಕಾಪಿ ಕೊಡುವುದಕ್ಕೆ ಹೊರಟರೆ ಪುನಃ ನಾಳೆಗೆ ಈ ಚರ್ಚೆ ಮುಂದಕ್ಕೆ ಹೋಗುತ್ತದೆ. ಇದೇ ತಿಂಗಳು 27ನೇ ತಾರೀಖಿಗೆ Finance Bill Pass ಆಗಬೇಕು. ನಾಳೆ 25ನೇ ತಾರೀಖು ಅಂದರೆ ಇನ್ನು ಒಂದೂವರೆ ದಿವಸ

ಉಳಿಯುತ್ತದೆ. ಅದರ ಜೊತೆಗೆ question hour ಇದೆ. ಹೀಗಾಗಿ ಯಾವುದನ್ನು ಚರ್ಚೆ ಮಾಡುವುದು. ಯಾವುದನ್ನು ಬಿಡುವುದು?

ಡಾ|| ಹೆಚ್.ಸಿ. ಮಹದೇವಪ್ಪ : ಮಾನ್ಯ ಉಪಮುಖ್ಯಮಂತ್ರಿಯವರೆ, you are the Senior Policitician. You are near to the RDPR Minister. ಈ ಯೋಜನೆ ಏನೇನಾಗಿದೆ ಎಂದು clean ಆಗಿ ನಿಧಾನವಾಗಿ ಹೇಳಿದರೆ ಸಾಕು.

ಶ್ರೀ ಕೆ.ಎಸ್. ಈಶ್ವರಪ್ಪ : ಅದಕ್ಕೆ ವಿರೋಧ ಪಕ್ಷದ ನಾಯಕರು ಅನುಮತಿ ಕೊಟ್ಟರೆ ನಾನು ಉತ್ತರ ಮುಂದುವರೆಸುತ್ತೇನೆ. ಅದು ಬಿಟ್ಟು ನಿಮಗೆ ಇದರ copies ಬೇಕೆಂದರೆ ನನ್ನದೇನೂ ಅಭ್ಯಂತರವಿಲ್ಲ. ಕಾಪಿ ಬೇಕೆಂದರೆ ರೆಡಿ ಮಾಡಿಕೊಡುತ್ತೇವೆ.

ಶ್ರೀ ಸಿದ್ದರಾಮಯ್ಯ : ಕಾಪಿ ಬೇಡ, ರಾಜ್ಯದ ಜನತೆಗೆ ಸಮಾಧಾನವಾಗುವ ಹಾಗೆ ಉತ್ತರ ಕೊಡಿ.

ಶ್ರೀ ಕೆ.ಎಸ್. ಈಶ್ವರಪ್ಪ : ಖಂಡಿತ ಕೊಡುತ್ತೇನೆ. ನಿಮಗೆ ಸಮಾಧಾನವಾದರೆ ರಾಜ್ಯದ ಜನತೆಗೆ ಸಮಾಧಾನವಾಗುತ್ತದೆ.

ಶ್ರೀ ಸಿದ್ದರಾಮಯ್ಯ : We are representing them.

ಶ್ರೀ ಕೆ.ಎಸ್. ಈಶ್ವರಪ್ಪ : Yes, ನಾನು ಅದನ್ನೇ ಹೇಳಿರುವುದು, ಬೇರೇ ಹೇಳಿದ್ದೇನೆಯೇ? ನೀವು ಹೇಳಿದನ್ನೇ ನಾನು ಹೇಳುತ್ತಿದ್ದೇನೆ. ಒಂದೇ ಸಲಕ್ಕೆ ಏಕೆ ಎದ್ದು ಕೂಗುತ್ತೀರಿ? ನೀವು ಹೇಳಿರುವುದು ಸರಿ ಇದೆ. ಮತ್ತೆ ವಿರೋಧ ಪಕ್ಷದ ನಾಯಕರು ಏನು ಹೇಳಬೇಕೋ ಅದೇ ರೀತಿ ಕೂಗುತ್ತಿದ್ದೀರಿ. ನಾನು ಒಪ್ಪುತ್ತೇನೆ. ನಾನು ಮಂತ್ರಿಯಾದ ಮೇಲೆ ಸ್ವಲ್ಪ ಮೆತ್ತಗಾಗಿದ್ದೇನೆ.

ಶ್ರೀ ಸಿದ್ದರಾಮಯ್ಯ : ನಾನು ಹೇಳುತ್ತಿರುವುದೇನೆಂದರೆ, ನೀವು Deputy Chief Minister ಆದಮೇಲೆ ಕೂಗುತ್ತಿದ್ದೀರಲ್ಲಾ!

ಶ್ರೀ ಕೆ.ಎಸ್. ಈಶ್ವರಪ್ಪ : ಇಲ್ಲ, ಕೂಗಲೇ ಇಲ್ಲ. ಇನ್ನೂ ಪ್ರಾರಂಭ ಮಾಡಿಯೇ ಇಲ್ಲ. ಇದು ಕೂಗು ಎಂದರೆ ನಾನು ನಿಜವಾಗಿ ಕೂಗು ಹಾಕಿದರೆ ಹೇಗಿರಬಹುದೆಂದು ಲೆಕ್ಕ ಹಾಕಿ. ನಾನು ಈಗ ಪ್ರಾರಂಭ

ಮಾಡುತ್ತಿದ್ದೇನೆ. ಇದನ್ನೇ ನೀವು ಕೂಗು ಎಂದು ಹೇಳುತ್ತೀರಾ ? ನನ್ನ ಕೂಗನ್ನು ನೀವು ನೋಡಿದ್ದೀರಿ. ಸತ್ಯವನ್ನು ಒಪ್ಪಿಕೊಳ್ಳಿ.

ಶ್ರೀ ಸಿದ್ದರಾಮಯ್ಯ : ಕೂಗಿ, ಹೇಗಿರುತ್ತದೆಂದು ನೋಡೋಣ!

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ನನಗೆ ಒಪ್ಪಿಗೆ ಕೊಟ್ಟರೆ ನಾನು ಉತ್ತರ ನೀಡುವುದನ್ನು ಮುಂದುವರೆಸುತ್ತೇನೆ. ಇನ್ನೂ ಏನೇನು clarification ಬೇಕು ಎಂಬುದನ್ನು ಕೇಳಲಿ.

ಕ್ರಿಯಾ ಯೋಜನೆ : ಪ್ರಸ್ತುತ ಸಾಲಿನಲ್ಲಿ ಒಟ್ಟು 246738 ಕಾಮಗಾರಿಗಳನ್ನು ಕೈಗೊಂಡಿದ್ದು 11693 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿರುತ್ತದೆ. ಇದರ ಪೈಕಿ 235045 ಕಾಮಗಾರಿಗಳು ಮುಂದುವರೆದ ಕಾಮಗಾರಿಗಳಾಗಿರುತ್ತದೆ. ಸದರಿ ಕಾಮಗಾರಿಗಳನ್ನು 2012–13ನೇ ಸಾಲಿನಲ್ಲಿ ಮುಂದುವರೆಸಲು ಯಾವ ಅನುಮೋದನೆಯ ಆವಶ್ಯಕತೆ ಇರುವುದಿಲ್ಲ. ಆದರೂ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಕ್ರಿಯಾಯೋಜನೆಗೆ (ಕಾಮಗಾರಿಗಳ ಗುಚ್ಛಗಳಿಗೆ) ಆನುಮೋದನೆ ನೀಡಿದ್ದು, ಆದರಂತೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ನಿಗದಿತ ಆವಧಿಯಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಆನುಮೋದನೆ ನೀಡದಿದ್ದರೂ ಸಹ ಮಾರ್ಗಸೂಚಿಯ ಕಂಡಿಕೆ : 4.4.11 ರಂತೆ ಕಾಮಗಾರಿಗಳ ಗುಚ್ಛಗಳು ಅನುಮೋದನೆಯಾಗಿದೆ ಎಂದು ಭಾವಿಸಬೇಕಾಗಿದೆ. ಮುಂದುವರೆದ ಕಾಮಗಾರಿಗಳ ಜೊತೆ ಹೊಸ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕ್ರಮವಹಿಸಲಾಗಿದೆ.

ಊ. ಯೋಜನೆ ಸಮರ್ಪಕ ಅನುಷ್ಠಾನಕ್ಕಾಗಿ ರಾಜ್ಯ ಸರ್ಕಾರವು ಕೈಗೊಂಡಿರುವ ಕ್ರಮಗಳ ವಿವರಗಳು :

- ರಾಜ್ಯದಲ್ಲಿ ಗ್ರಾಮ ಪಂಚಾಯತಿಯ ಪ್ರಮುಖ ಅನುಷ್ಠಾನ ಸಂಸ್ಥೆಗಳಾಗಿದ್ದು, ಅದರ ಜೊತೆಗೆ ಅರಣ್ಯ, ತೋಟಗಾರಿಕೆ, ಸಣ್ಣ ನೀರಾವರಿ ಮತ್ತು ಜಲಾನಯನ ಇಲಾಖೆಗಳು ಅನುಷ್ಠಾನ ಸಂಸ್ಥೆಗಳಾಗಿವೆ. ಯಾವುದೇ ಖಾಸಗೀ ಸಂಸ್ಥೆಗಳು ಅನುಷ್ಠಾನ ಸಂಸ್ಥೆಗಳನ್ನಾಗಿ ನೇಮಕ ಮಾಡಲಾಗಿಲ್ಲ.

- ಗ್ರಾಮ ಪಂಚಾಯಿತಿಗಳು ಈ ಯೋಜನೆಯ ಅನಷ್ಠಾನದಲ್ಲಿ ಬಹಳಷ್ಟು ಪ್ರಮುಖ ಪಾತ್ರವಹಿಸುತ್ತಿದ್ದು, ಕಾರ್ಯಕ್ರಮ ಅನುಷ್ಠಾನಾಧಿಕಾರಿ (ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ) ಮತ್ತು ಜಿಲ್ಲಾ ಕಾರ್ಯಕ್ರಮ ಸಮನ್ವಯ ಅಧಿಕಾರಿಗಳಿಗೆ (ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು) ಈ ಯೋಜನೆಯ ಅನುಷ್ಠಾನದ ಸಂಪೂರ್ಣ ಜವಾಬ್ದಾರಿಯನ್ನು ನೀಡಿಲಾಗಿದೆ.
- ಆಡಳಿತಾತ್ಮಕ ಹಾಗೂ ತಾಂತ್ರಿಕ ಅನುಮೋದನೆ ನೀಡುವ ಅಧಿಕಾರಗಳನ್ನು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ವಿಕೇಂದ್ರಿಕರಣಗೊಳಿಸಿದೆ.
- ಅನುಷ್ಠಾನ ವಿಷಯದಲ್ಲಿ ರಾಜ್ಯದಿಂದ ಯಾವುದೇ ರೀತಿಯ ಅನುಮತಿ ಜಿಲ್ಲೆಗಳಿಗೆ ಮತ್ತು ತಾಲ್ಲೂಕುಗಳು ಮತ್ತು ಗ್ರಾಮ ಪಂಚಾಯಿತಿಗಳಿಗೆ ಬೇಕಾಗಿರುವುದಿಲ್ಲ.
- ಜನ ಜಾಗೃತಿ ಕುರಿತಂತೆ, ಅಕಾಶವಾಣಿ ಮತ್ತು ದೂರದರ್ಶನಗಳ ಮೂಲಕ ಪ್ರಚಾರಗೊಳಿಸಲಾಗುತ್ತಿದೆ. ವಿವಿಧ ಪಾಲುದಾರರಿಗೆ (Stake Holders) ತರಬೇತಿಯನ್ನು ANERSSIRD ಮೈಸೂರು ಇವರ ಮೂಲಕ ನೀಡಲಾಗುತ್ತಿದೆ.
- ಉಪಗ್ರಹ ಆಧಾರಿತ ತರಬೇತಿಯನ್ನು ಅಧಿಕಾರಿಗಳಿಗೆ, ಸಿಬ್ಬಂದಿಗಳಿಗೆ ಮತ್ತು ಚುನಾಯಿತ ಪ್ರತಿನಿಧಿಗಳಿಗೆ ಮೇಲಿಂದ ಮೇಲೆ ನೀಡಲಾಗುತ್ತಿದೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಕುರಿತು ಕರ್ನಾಟಕ ವಿಕಾಸ ಪತ್ರಿಕೆಯಲ್ಲಿ ವಿಶೇಷ ಸಂಚಿಕೆಯನ್ನಾಗಿ ಹೊರಡಿಸಲಾಗಿದೆ.
- ರಾಜ್ಯದ 7 ಜಿಲ್ಲೆಗಳಲ್ಲಿ ಇಎಫ್‌ಎಂಎಸ್ ತಂತ್ರಾಂಶದ ಮೂಲಕ ನೇರವಾಗಿ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಜಮೆ ಮಾಡಲು ಕ್ರಮವಹಿಸಲಾಗಿದೆ.

- ಕಾಯಕ ಸಿಂಧು (ಮೇಟ್) ಪದ್ಧತಿಯನ್ನು ಜಾರಿಗೆ ತರಲಾಗಿದೆ ಇವರ ಕೂಲಿ ಪಾವತಿಸಲು ಯೋಜನೆಯಡಿ ಅವಕಾಶ ಕಲ್ಪಿಸಲಾಗಿದೆ.
- ಜಿಲ್ಲಾ ಮಟ್ಟದಲ್ಲಿ ಲೋಕಸಭೆ ಸದಸ್ಯರ ಅಧ್ಯಕ್ಷತೆಯಲ್ಲಿ ಜಿಲ್ಲಾ ಉಸ್ತುವಾರಿ ಸಮಿತಿ ರಚಿತವಾಗಿದ್ದು, ಕಾಲಕಾಲಕ್ಕೆ ಯೋಜನೆಯ ಬಗ್ಗೆ ಪರಿಶೀಲನೆ ನಡೆಸುತ್ತಿದೆ. ಹಾಗೂ ಆದಕ್ಕೆ ಸೂಚನೆಗಳನ್ನು ಸಲಹೆಗಳನ್ನು ನೀಡಲಾಗುತ್ತಿದೆ.
- ರಾಜ್ಯ ಮಟ್ಟದಲ್ಲಿ ಜಾಗೃತಿ ಉಸ್ತುವಾರಿ ಸಮಿತಿ ಈ ಯೋಜನೆಯ ಬಗ್ಗೆ ಚರ್ಚಿಸಿ ಸಲಹೆ ಸೂಚನೆಗಳನ್ನು ಮತ್ತು ಕೇಂದ್ರ ಸರ್ಕಾರಕ್ಕೆ ಹೊಸದಾಗಿ ತೆಗೆದುಕೊಳ್ಳಬಹುದಾದ ಯೋಜನೆಗಳ ಬಗ್ಗೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ನೀಡುತ್ತಿದೆ. ಉದಾಹರಣೆಗೆ ಶೌಚಾಲಯಗಳು ನಿರ್ಮಾಣ 200 ದಿವಸಗಳ ವರೆಗೆ ಕೆಲಸಕ್ಕೆ ಅವಕಾಶ. ಹೆಚ್ಚುವರಿ ಸಿಬ್ಬಂದಿಗಳ ನೇಮಕ ಇತ್ಯಾದಿ.

ಕೆಲವು ಜಿಲ್ಲೆಗಳಲ್ಲಿ ಪ್ರಗತಿ ಕುಂಠಿತವಾಗಿರುವುದು ನಿಜ. ಈ ಸಾಲಿನಲ್ಲಿ ಶೇಕಡಾ 100% ಸಾಧನೆ ಮಾಡಲು ಸಂಬಂಧಿತ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗುವುದು. ಸದ್ಯದಲ್ಲಿ ಜನಪ್ರತಿನಿಧಿಗಳ ಹಾಗೂ ಅಧಿಕಾರಿಗಳನ್ನೊಳಗೊಂಡ ರಾಜ್ಯ ಉದ್ಯೋಗ ಪರಿಷತ್ತಿನ ಸಭೆಯನ್ನು ಕರೆದು ಹೆಚ್ಚಿನ ರೀತಿ ಪ್ರಗತಿ ಸಾಧಿಸಲು ಯೋಜನೆ ಹಮ್ಮಿಕೊಳ್ಳಲಾಗುವುದು.

ಸರ್ಕಾರ ಈ ಯೋಜನೆಯನ್ನು ಸಂಪೂರ್ಣವಾಗಿ ಗ್ರಾಮೀಣ ಪ್ರದೇಶ ಅಭಿವೃದ್ಧಿಗಾಗಿ ಬಳಸಿ ಗ್ರಾಮೀಣ ಪ್ರದೇಶಧ ಜೀವನೋಪಾಯದ ಸ್ವತ್ತುಗಳನ್ನು ಸೃಜೀಸುವಲ್ಲಿ ಎಲ್ಲಾ ಕ್ರಮಗಳನ್ನು ಕೈಗೊಳ್ಳತ್ತಿದೆ.

ಮಾನ್ಯ ವಿಧಾನಸಭಾ ಸದಸ್ಯರು ತಮ್ಮ ತಮ್ಮ ಗ್ರಾಮ ಪಂಚಾಯಿತಿಗಳೊಂದಿಗೆ ವಿಸ್ತೃತವಾಗಿ ಚರ್ಚಿಸಿ ಗ್ರಾಮ ಪಂಚಾಯಿತಿಗಳಿಗೆ ಮಾರ್ಗದರ್ಶನ ನೀಡುವಂತೆ ಕೋರಿದೆ.

ಜಾನುವಾರು ಸಂರಕ್ಷಣೆ :

ರಾಜ್ಯದಲ್ಲಿ ಒಟ್ಟು 1,39,52,974 ಮೇವು ಅವಲಂಬಿತ ಜಾನುವಾರಗಳಿದ್ದು 55,93,131 ಟನ್ ಮೇವು ಲಭ್ಯವಿದೆ. ಲಭ್ಯವಿರುವ ಮೇವು ಮುಂದಿನ 11 ವಾರಗಳಿಗೆ ಸಾಕಾಗುತ್ತದೆ. ಚಿಕ್ಕಬಳ್ಳಾಪುರ, ಚಿತ್ರದುರ್ಗ, ಶಿವಮೊಗ್ಗ, ಚಾಮರಾಜನಗರ, ಬೆಳಗಾವಿ, ಗುಲ್ಬರ್ಗ, ಕೊಪ್ಪಳ ಮತ್ತು ಬೀದರ್ ಜಿಲ್ಲೆಗಳಲ್ಲಿ ಲಭ್ಯವಿರುವ ಮೇವು ಮುಂದಿನ 5–6 ವಾರಗಳಿಗೆ ಮಾತ್ರ ಸಾಕಾಗುತ್ತದೆ. ಲಭ್ಯವಿರುವ ಮೇವಿನ ದಾಸ್ತಾನು ಕಡಿಮೆ ಇರುವುದರಿಂದ ಪಂಜಾಬ್, ಹರಿಯಾಣ ರಾಜ್ಯಗಳಿಂದ 10 ರೇಕ್ ಮೇವನ್ನು ತರಿಸಲಾಗುವುದು 2–3 ವಾರದಲ್ಲಿ ಆ ಮೇವು ಬರಲಿದೆ.

ದಿನಾಂಕ 25–7–2011 ರಲ್ಲಿ 99.12 ಲಕ್ಷ ಮೆಟ್ರಿಕ್ ಟನ್ ಮೇವಿನ ದಾಸ್ತಾನು ಇದ್ದು, ದಿನಾಂಕ : 20–7–2012 ರಂದು 55,51 ಲಕ್ಷ ಮೆ.ಟನ್ ಮೇವು ಲಭ್ಯವಿರುತ್ತದೆ. ಇದುವರೆಗೆ, ಗೋಶಾಲೆಗಳ ಮೂಲಕ 39015 ಮೆ.ಟನ್. ಮೇವನ್ನು ವಿತರಸಲಾಗಿದೆ. 69 ಮೇವು ಬ್ಯಾಂಕ್‌ಗಳಲ್ಲಿ 1113 ಮೆ.ಟನ್ ಮೇವು ಲಭ್ಯವಿದೆ. 24 ಜಿಲ್ಲೆಗಳಲ್ಲಿ ಆವಶ್ಯವಿದ್ದೆಡೆ 112 ಗೋಶಾಲೆಗಳನ್ನು ಸ್ಥಾಪಿಸಲಾಗಿದೆ. ಇದರಲ್ಲಿ 1,06,000 ಜಾನುವಾರುಗಳನ್ನು ಸಂರಕ್ಷಿಸಲಾಗಿದೆ ಹಾಗು 69 ಮೇವಿನ ಬ್ಯಾಂಕ್‌ಗಳನ್ನು ಸ್ಥಾಪಿಸಲಾಗಿದೆ. 90 ಹೆಚ್ಚುವರಿ ಗೋಶಾಲೆಗಳನ್ನು ಸ್ಥಾಪಿಸಲು ತೀರ್ಮಾನಿಸಲಾಗಿದೆ. 90 ದಿನಗಳಿಗೆ ತಲಾ ಗೋಶಾಲೆಗೆ 500 ಜಾನುವಾರಗಳಂತೆ ರೂ. 48.00 ಕೋಟಿ ರೂ. ವೆಚ್ಚ ಆಗಲಿದೆ. ಹೆಚ್ಚುವರಿಯಾಗಿ ರೂ. 15.00 ಕೋಟಿಯಂತೆ ವೆಚ್ಚ ಮಾಡಲು ತೀರ್ಮಾನಿಸಲಾಗಿದೆ. ದಿನವೊಂದಕ್ಕೆ 5 ಕೆಜಿ ಮೇವನ್ನು ಪೂರೈಸುತ್ತಿದ್ದು, ಇದರ ಪ್ರಮಾಣವನ್ನು 8 ಕೆಜಿಗೆ ಏರಿಸಲು ಕ್ರಮ ವಹಿಸಲಾಗಿದೆ. ಗೋಶಾಲೆಯಲ್ಲಿನ ಜಾನುವಾರುಗಳಿಗೆ ದಿನವೊಂದಕ್ಕೆ 30 ಗ್ರಾಂನಂತೆ ಖನಿಜ ಮಿಶ್ರಣವನ್ನು ನೀಡಲು ಕ್ರಮ ವಹಿಸಲಾಗುತ್ತದೆ. ಈ ಮಿಶ್ರಣವನ್ನು ಕೆ.ಎಂ.ಎಫ್. ನಿಂದ ಖರೀದಿಸಲು ಉದ್ದೇಶಿಸಿದೆ.

ಪಶುಸಂಗೋಪನೆ ಇಲಾಖೆಯಿಂದ 2011–12ನೇ ಸಾಲಿನಲ್ಲಿ ವಿಶೇಷ ಅನುದಾನದಡಿಯಲಿ ಮೇವಿನ ಬೀಜದ ಪೊಟ್ಟಣಗಳನ್ನು ರೂ. 4.98 ಕೋಟಿ ವೆಚ್ಚದಲ್ಲಿ ರೈತರಿಗೆ ಈಗಾಗಲೇ ಪೂರೈಸಲಾಗಿದೆ. ಪ್ರಸಕ್ತ

ಸಾಲಿನಲ್ಲಿ ಪಶು ಸಂಗೋಪನೆ ಇಲಾಖೆಯಿಂದ 500 ಎಕರೆ ಪ್ರದೇಶದಲ್ಲಿ ಮೇವು ಬೆಳೆಯಲು ಉದ್ದೇಶಿಸಲಾಗಿದೆ. ಆರ್.ಕೆ.ವಿ.ವೈ. ಯೋಜನೆಯಡಿಯಲ್ಲಿ ಮೇವು ಉತ್ಪಾದನೆಯನ್ನು ಉತ್ತೇಜಿಸಲು ರೂ. 15.00 ಕೋಟಿ ವೆಚ್ಚದಲ್ಲಿ 15 ಲಕ್ಷ ಮೇವಿನ ಬೀಜಗಳ ಕಿರು ಪೊಟ್ಟಣ ಚೀಲಗಳನ್ನು ರೈತರಿಗೆ ವಿತರಸಲು ಕ್ರಮ ವಹಿಸಲಾಗುತ್ತಿದೆ.

ಕಂದಾಯ ಇಲಾಖೆಯ ಎಸ್.ಡಿ.ಆರ್.ಎಫ್. ನಿಧಿಯಡಿ ಜಾನುವಾರುಗಳಿಗೆ ರೋಗ ನಿರೋಧಕ ಲಸಿಕೆ, ಗೋಶಾಲೆಗಳ ಸ್ಥಾಪನೆ / ನಿರ್ವಹಣೆ, ಮೇವು ಖರೀದಿಗೆ ರೂ. 10.61 ಕೋಟಿ ವೆಚ್ಚ ಮಾಡಲಾಗಿದೆ.

ಮೇವು ಖರೀದಿ ಮತ್ತು ಮೇವು ಸರಬರಾಜಿಗೆ ಸಂಬಂಧಪಟ್ಟಂತೆ ದರ ಪಟ್ಟಿಯನ್ನು ಕಳೆದ ಆರು ವರ್ಷಗಳಿಂದ ಪರಿಷ್ಕೃತವಾಗದಿದ್ದು ಈಗ್ಗೆ ಅವಶ್ಯಕತೆ ಮನಗೊಂಡು ಸರ್ಕಾರವು ದರ ಪಟ್ಟಿಯನ್ನು ಪರಿಷ್ಕರಣೆ ಮಾಡಿದೆ. ಪುನಃ ದರವನ್ನು ಗರಿಷ್ಠ 6000 ರವರೆಗೆ ಪರಿಷ್ಕರಿಸಲು ಕ್ರಮ ವಹಿಸಲಾಗಿದೆ ಸಾಗಾಣಿಕೆ ದರವನ್ನು ರೂ. 1.25 ರಿಂದ ರೂ. 1.50 ಕ್ಕೆ ಪ್ರತಿ ಕಿಮಿಗೆ ಹೆಚ್ಚಿಸಲು ತೀರ್ಮಾನಿಸಲಾಗಿದೆ.

ಅಣೆವಾರಿ ಪ್ರಕಾರ 24 ಜಿಲ್ಲೆಗಳಲ್ಲಿ ಭೂಕಂದಾಯ ಮನ್ನಾ ಮಾಡಲು ಕ್ರಮ ವಹಿಸಲಾಗಿದೆ.

ಅನುಬಂಧ – 2

ರಾಜ್ಯದಲ್ಲಿ ಸ್ಥಾಪನೆಯಾದ ಗೋಶಾಲೆ ಮತ್ತು ಮೇವಿನ ಬ್ಯಾಂಕ್‌ಗಳ ವಿವರ

ದಿನಾಂಕ : 25–7–2012 ವಾರಾಂತ್ಯಕ್ಕೆ

ಕ್ರಮ ಸಂಖ್ಯೆ	ಜಿಲ್ಲೆ	ಗೋಶಾಲೆಗಳ ಸಂಖ್ಯೆ	ಗೋಶಾಲೆಯಲ್ಲಿರುವ ಜಾನುವಾರುಗಳ ಸಂಖ್ಯೆ	ಮೇವಿನ ಬ್ಯಾಂಕ್‌ಗಳ ಸಂಖ್ಯೆ
1	ಬೆಳಗಾವಿ	37	34346	
2	ಬಿಜಾಪುರ	15	11386	
3	ಚಾಮರಾಜನಗರ			3
4	ಚಿತ್ರದುರ್ಗ	4	3260	
5	ಚಿಕ್ಕಬಳ್ಳಾಪುರ	1	1300	15
6	ಧಾರವಾಡ	1	93	2
7	ದಾವಣಗೆರೆ	1	440	
8	ಗದಗ	5	621	
9	ಕೊಪ್ಪಳ	20	28399	
10	ಮೈಸೂರು			3
11	ರಾಯಚೂರು	5	310	19
12	ಬಾಗಲಕೋಟೆ	3	5168	
13	ಯಾದಗಿರಿ	1	26	10
14	ಗುಲ್ಬರ್ಗಾ	2	426	15
15	ಬೀದರ್			30
	ಒಟ್ಟು	**95**	**85775**	**97**

ಮಾಹೆವಾರು ಗೋಶಾಲೆಗಳನ್ನು ತೆರೆದಿರುವ ವಿವರ

	ಅಕ್ಟೋಬರ್	ನವೆಂಬರ್	ಡಿಸೆಂಬರ್	ಜನವರಿ	ಫೆಬ್ರವರಿ	ಮಾರ್ಚ್	ಏಪ್ರಿಲ್
ಗೋಶಾಲೆಗಳು	15	12	13	31	25	44	55
ಸಂರಕ್ಷಿಸಿದ ಜಾನುವಾರುಗಳು	9627	2649	8066	13470	16441	26098	24573

	ಮೇ	ಜೂನ್	ಜುಲೈ 23ಕ್ಕೆ
ಗೋಶಾಲೆಗಳು	71	76	95
ಸಂರಕ್ಷಿಸಿದ ಜಾನುವಾರುಗಳು	26009	48253	85775

ವಿದ್ಯುತ್ ಪೂರೈಕೆ:

ಪ್ರಸಕ್ತ ಸಾಲಿನಲ್ಲಿ 19,685 ವಿದ್ಯುತ್ ಪರಿವರ್ತಕಗಳು ಕೆಟ್ಟುಹೋಗಿದ್ದು.18,611 ಪರಿವರ್ತಕಗಳನ್ನು ಬದಲಿಸಿ ಸಮರ್ಪಕ ವಿದ್ಯುತ್ ಪೂರೈಕೆಗೆ ಕ್ರಮ ವಹಿಸಲಾಗಿದೆ ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಸುಟ್ಟು ಹೋಗಿರುವ ವಿದ್ಯುತ್ ಪರಿವರ್ತಕಗಳನ್ನು ತುರ್ತಾಗಿ ದುರಸ್ಥಿ ಮಾಡಲು ಆಯಾ ವಿದ್ಯುತ್ ಸರಬರಾಜು ನಿಗಮಗಳಿಗೆ ಸೂಚನೆಗಳನ್ನು ನೀಡಲಾಗಿದೆ. ಪ್ರತಿ ಜಿಲ್ಲಾಧಿಕಾರಿಗೆ 1.50 ಕೋಟಿ ರೂ.ಗಳನ್ನು ಕುಡಿಯುವ ನೀರಿನ ಯೋಜನೆಗಳಿಗೆ ಠೇವಣಿ ಮಾಡಲು ಅನುದಾನ ಒದಗಿಸಲು ಕ್ರಮ ವಹಿಸಲಾಗುತ್ತಿದೆ.

ಗ್ರಾಮೀಣ ಪ್ರದೇಶದ ರೈತರಿಗೆ 3 ಫೇಸ್ ವಿದ್ಯುತ್‌ನ್ನು ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳು:

ಪ್ರಸ್ತುತ ರಾಜ್ಯದಲ್ಲಿ ವಿದ್ಯುತ್ ಪೂರೈಕೆಯಾಗುತ್ತಿರುವ ಅವಧಿಯ ವಿವರಗಳು

ಬೆಂಗಳೂರು ನಗರ – 24 ಗಂಟೆಗಳು

ಇತರ ನಗರ ಪ್ರದೇಶಗಳು : 20 ರಿಂದ 22 ಗಂಟೆಗಳು

ಗ್ರಾಮೀಣ ಪ್ರದೇಶಗಳು : 3 ಫೇಸ್ 5 ರಿಂದ 6 ಗಂಟೆಗಳು (ಬ್ಯಾಚ್‌ಗಳಲ್ಲಿ)

1ಫೇಸ್ : ಸರಾಸರಿ 10 ಗಂಟೆಗಳು

ಹೆಚ್ಚುತ್ತಿರುವ ವಿದ್ಯುತ್ ಬೇಡಿಕೆಗಳಿಗುಣವಾಗಿ ಹಾಗೂ ಜಲ ವಿದ್ಯುತ್ ಉತ್ಪಾದನೆಯಲ್ಲಿ ಕುಂಠಿತಗೊಂಡಿರುವುದನ್ನು ಗಮನದಲ್ಲಿರಿಸಿ,

ಹೆಚ್ಚುವರಿಯಾಗಿ **750 ಮೆ.ವ್ಯಾ.** ವಿದ್ಯುತ್ ಖರೀದಿ ಮಾಡಲು ಯೋಚಿಸಲಾಗುತ್ತಿದೆ.

ಶ್ರೀ ಸಿದ್ದರಾಮಯ್ಯ : ಯೋಚಿಸುತ್ತಾ ಇದ್ದೀರಾ ?

ಶ್ರೀ ಕೆ.ಎಸ್. ಈಶ್ವರಪ್ಪ ; ಇಲ್ಲ contract ಆಗಿ ಹೋಗಿದೆ. contract ಆಗಿದೆ. ಅದನ್ನು ಹೇಳುತ್ತೇನೆ. ಈಗಾಗಲೇ 2011–12ರಲ್ಲಿ 1050 ಮೆಗಾ ವ್ಯಾಟ್‌ನಷ್ಟು 3019.68 ಕೋಟಿ ರೂಪಾಯಿಯಷ್ಟು ಆಗಿದೆ. 2012–13 ರಲ್ಲಿ ಜೂನ್ 12ರ ತನಕ 1280 ಮೆಗಾ ವ್ಯಾಟ್‌ಗೆ 1159.03 ಕೋಟಿ ರೂಪಾಯಿಯಷ್ಟು ಮತ್ತು ಜುಲೈ 12ರ ನಂತರ 1280 ಮೆಗಾ ವ್ಯಾಟ್ ಅನ್ನು ಬೌದ್ಧಿಕವಾಗಿಯೇ ಒಟ್ಟು 3373.65 ಕೋಟಿ ರೂಪಾಯಿಗಳು. ಅಂದರೆ 4531.68 ಕೋಟಿ ರೂಪಾಯಿಗಳು ಇಷ್ಟು ಖರೀದಿಗಾಗಿ contract ಆಗಿದೆ. ಈಗ ಮಳೆ ಬರುವುದಕ್ಕೆ ಪ್ರಾರಂಭವಾಗಿದೆ. ಅದರ ಜೊತೆಗೆ ಸೆಪ್ಟೆಂಬರ್ 12ರ ಆದರ ನಂತರ 750 ಮೆಗಾ ವ್ಯಾಟ್‌ಗೆ 1701 ಕೋಟಿ ರೂಪಾಯಿಗಳು ಮತ್ತು Peak power ಗೆ 200 ಮೆಗಾ ವ್ಯಾಟ್‌ಗೆ 133.56 ಕೋಟಿ ಅಂದರೆ 1834.56 ಕೋಟಿ ರೂಪಾಯಿಗಳಿಗೆ ವಿದ್ಯುತ್ ಖರೀದಿ ಮಾಡಲು ನಾವು ಈಗಾಗಲೇ ತೀರ್ಮಾನ ತೆಗೆದುಕೊಂಡಿದ್ದೇವೆ. ಇದಲ್ಲದೆ ಬಳ್ಳಾರಿ ಥರ್ಮಲ್ ಪವರ್ ಪ್ರಾಜೆಕ್ಟ್‌ನ 2ನೇ ಘಟಕದಿಂದ 500 ಮೆಗಾವ್ಯಾಟ್ ಮತ್ತು ಉಡುಪಿ ಪವರ್ ಪ್ರಾಜೆಕ್ಟ್‌ನಿಂದ 600 ಮೆಗಾವ್ಯಾಟ್ ಹೀಗೆ ಒಟ್ಟು 1100 ಮೆಗಾವ್ಯಾಟ್‌ನಷ್ಟು ಈ ವರ್ಷ ಅಂದರೆ 2012--13ಕ್ಕೆ ನಮ್ಮ ರಾಜ್ಯಕ್ಕೆ ವಿದ್ಯುತ್ ಬರುವುದಿದೆ.

ಬೆಳೆ ವಿಮೆ ಬಗ್ಗೆ:

ಪ್ರಾಯೋಗಿಕ ಹವಾಮಾನ ಆಧಾರಿತ ಬೆಲೆ ವಿಮಾ ಯೋಜನೆಯನ್ನು ರೈತರಿಗೆ ಹವಾಮಾನ ವೈಪರಿತ್ಯಗಳಿಂದ ಬೆಳೆ ನಷ್ಟ ಉಂಟಾದರೆ ಅಂದರೆ, ಅತಿವೃಷ್ಟಿ, ಅನಾವೃಷ್ಟಿ, ಆರ್ದ್ರತೆ, ಗಾಳಿವೇಗ ಮತ್ತು ತಾಪ ಮಾನಗಳಿಂದ ರಕ್ಷಣೆ ನೀಡುತ್ತದೆ.

ಈ ಯೋಜನೆಯನ್ನು ಬೆಂಗಳೂರು (ಗ್ರಾ.), ಬಾಗಲಕೋಟೆ, ಬೆಳಗಾವಿ, ಬೀದರ್, ಚಿಕ್ಕಮಗಳೂರು, ಚಿತ್ರದುರ್ಗ, ಚಿಕ್ಕಬಳ್ಳಾಪುರ,

ದಾವಣಗೆರೆ, ಧಾರವಾಡ, ಗದಗ, ಹಾಸನ, ಕೋಲಾರ, ಕೊಪ್ಪಳ, ರಾಯಚೂರು, ರಾಮನಗರ ಮತ್ತು ಯಾದಗಿರಿ ಈ ಜಿಲ್ಲೆಗಳಲ್ಲಿ ಅಳವಡಿಸಲಾಗಿದೆ.

ಈ ಯೋಜನೆಯನ್ನು ರಾಗಿ, ಮುಸುಕಿನ ಜೋಳ, ಜೋಳ, ತೊಗರಿ, ಉದ್ದು, ಹೆಸರು, ಸೋಯಾ ಅವರೆ, ಸೂರ್ಯಕಾಂತಿ, ನೆಲಗಡಲೆ, ಈರುಳ್ಳಿ, ಹತ್ತಿ, ಆಲೂಗಡ್ಡೆ, ಮೆಣಸಿನಕಾಯಿ, ದ್ರಾಕ್ಷಿ ಮತ್ತು ಬಾಳೆ ಬೆಳಗಳಿಗೆ ಅಳವಡಿಸಲಾಗಿದೆ.

ರಾಷ್ಟ್ರೀಯ ಕೃಷಿ ಬೆಳೆ ವಿಮೆ ಯೋಜನೆಯಡಿ ಪಾಲ್ಗೊಳ್ಳಲು ಬೆಳೆ ಸಾಲ ಪಡೆಯದೆ ರೈತರಿಗೆ ಅಲ್ಪಾವಧಿ ಬೆಳೆಗಳಿಗೆ ಕೊನೆಯ ದಿನಾಂಕ 31–7–2012, ಇತರೆ ಬೆಳೆಗಳಿಗೆ ದಿನಾಂಕ 31–8–2012 ಹಾಗೂ ಬೆಳೆ ಸಾಲ ಪಡೆಯುವ ರೈತರಿಗೆ ದಿನಾಂಕ 30–9–2012 ಆಗಿರುತ್ತದೆ. ಬೆಳೆ ಸಾಲ ಪಡೆಯದ ರೈತರೂ ಸಹ ಪಾಲ್ಗೋಳ್ಳಲು ಕೊನೆಯ ದಿನಾಂಕವನ್ನು 30–9–2012 ವರೆಗೆ ವಿಸ್ತರಿಸುವಂತೆ ಕೋರಿ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ.

ಪ್ರಾಯೋಗಿಕ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆಯಡಿ ಪಾಲ್ಗೊಳ್ಳಲು ಬೆಳೆ ಸಾಲ ಪಡೆಯದ ರೈತರಿಗೆ ಕೊನೆಯ ದಿನಾಂಕ 30–6–2012 ಹಾಗೂ ಬೆಳೆ ಸಾಲ ಪಡೆಯುವ ರೈತರಿಗೆ ದಿನಾಂಕ 31–07–2012 ಆಗಿರುತ್ತದೆ. ಸದರಿ ಯೋಜನೆಗಳಡಿ ರಾಜ್ಯ ಸರ್ಕಾರದಿಂದ ನೀಡಬೇಕಾಗಿದ್ದ ರೂ. 39.50 ಕೋಟಿ ಅನುದಾನವನ್ನು ಭರಿಸಿ 2011ರ ಮುಂಗಾರು ಹಂಗಾಮಿನ ಪರಿಹಾರಗಳ್ನು ಈಗಾಗಲೇ ಇತ್ಯರ್ಥಪಡಿಸಲಾಗಿದೆ.

ಸುವರ್ಣ ಭೂಮಿ ಯೋಜನೆ :

2011–12ನೇ ಸಾಲಿನಲ್ಲಿ ಒಟ್ಟು 6,90,127 ಫಲಾನುಭವಿಗಳಿಗೆ ವಿವಿಧ ಚಟುವಟಿಕೆಗಳಡಿ (ಕೃಷಿ – 345785 ಫಲಾನುಭವಿಗಳಿಗೆ ರೂ. 247.08 ಕೋಟಿ, ತೋಟಗಾರಿಕೆ – 231445 ಫಲಾನುಭವಿಗಳಿಗೆ ರೂ. 157.95 ಕೋಟಿ, ಜೈವಿಕ ಇಂಧನ – 8733 ಫಲಾನುಭವಿಗಳಿಗೆ ರೂ. 5.31

ಕೋಟಿ, ಸಾವಯವ ಕೃಷಿ – 61,353 ಫಲಾನುಭವಿಗಳಿಗೆ ರೂ. 44.62 ಕೋಟಿ, ಜೇನು ಸಾಕಾಣಿಕೆ – 4566 ಫಲಾನುಭವಿಗಳಿಗೆ ರೂ. 3.51 ಕೋಟಿ. ಮೀನುಗಾರಿಕೆ – 6934 ಫಲಾನುಭವಿಗಳಿಗೆ ರೂ. 4.41 ಕೋಟಿ. ರೇಷ್ಮೆ ಕೃಷಿ – 31318 ಫಲಾನುಭವಿಗಳಿಗೆ ರೂ. 11.97 ಕೋಟಿ) ಒಟ್ಟು ರೂ. 474.86 ಕೋಟಿಗಳ ಸಹಾಯಧನವನ್ನು ವಿತರಿಸಲಾಗಿದೆ. 2011–12ನೇ ಸಾಲಿನಲ್ಲಿ ಕೃಷಿ ಮತ್ತು ಸಾವಯವ ಕೃಷಿ ಚಟುವಟಿಕೆಗಳಿಗೆ ಬಾಕಿ ನೀಡಬೇಕಾಗಿದ್ದ 2ನೇ ಕಂತಿನ ಸಹಾಯಧನ ರೂ. 47.37 ಕೋಟಿ ಅನುದಾನವನ್ನು ಬಿಡುಗಡೆಗೊಳಿಸಲಾಗಿದೆ.

2012–13ನೇ ಸಾಲಿನಲ್ಲಿ ವಿವಿಧ ಚಟುವಟಿಕೆಗಳಡಿ ರೂ. 3,57,569 ಫಲಾನುಭವಿಗಳಿಗೆ ಒಟ್ಟು ರೂ. 395.42 ಕೋಟಿ ಅನುದಾನವನ್ನು ಒದಗಿಸಲಾಗಿದೆ. ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುತ್ತಿದೆ. ಮುಂಗಾರು ಹಂಗಾಮಿಗೆ ಈವರೆಗೆ 150 ಕೋಟಿ ರೂ.ಗಳನ್ನು ಬಿಡುಗಡೆಗೊಳಿಸಲಾಗಿದೆ.

ಮೋಡಬಿತ್ತನೆ ಬಗ್ಗೆ ಸರ್ಕಾರ ಕೈಗೊಂಡ ಕ್ರಮ:

ಅತಿಯಾದ ವಿಳಂಬ ಮತ್ತು ಮುಂಗಾರು ಕುಂಠಿತದಿಂದಾಗಿ ಜಲಾನಯನ ಪ್ರದೇಶ ಹಾಗೂ ಮಳೆ ಆಧಾರಿತ ಪ್ರದೇಶಗಳಲ್ಲಿ ಬಿತ್ತನೆ ಮಾಡಲಾಗದೆ ಕೃಷಿ ಚಟುವಟಿಕೆಗಳು ನಿಂತಿರುತ್ತದೆ. ರಾಜ್ಯದಲ್ಲಿ ಮುಂಗಾರು ಮಳೆಯನ್ನು ನಿರೀಕ್ಷಿಸಿ ಈಗಾಗಲೇ ಮಾಡಿರುವ ಬಿತ್ತನೆಗಳು ವಿಫಲವಾಗುತ್ತವೆ.

ಮೇಲೆ ವಿವರಿಸಿರುವ ಗಂಭೀರ ಪರಿಸ್ಥಿತಿಯಲ್ಲಿ ಖರೀಫ್ ಋತುವಿನ ಕೃಷಿ ಚಟುವಟಿಕೆಗಳಿಗೆ ಅನುಕೂಲ ಮಾಡಲು ಮೋಡ ಬಿತ್ತನೆ ಕಾರ್ಯಾಚರಣ ಕೈಗೊಳ್ಳುವಂತೆ ಪ್ರತಿಪಕ್ಷದ ನಾಯಕರು, ರೈತರು ಹಾಗೂ ಜನ ಪ್ರತಿನಿಧಿಗಳು ಒತ್ತಾಯಿಸುತ್ತಿದ್ದಾರೆ. ಮೋಡ ಬಿತ್ತನೆ ಕಾರ್ಯಚರಣೆ ಕೈಗೊಳ್ಳಲು ಸಾಧ್ಯತೆಗಳ ಬಗ್ಗೆ ಪರಿಶೀಲಿಸಲು ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ದಿನಾಂಕ 15–6–2012 ರಂದು ಸಭೆ ನಡೆಸಲಾಗಿದೆ. ಮಳೆಯ ವಿಫಲತೆಯು ಹೀಗೆ ಮುಂದುವರೆದಲ್ಲಿ ಮಾತ್ರ

ಮೋಡ ಬಿತ್ತನೆ ಕೈಗೊಳ್ಳಬಹುದಾಗಿದೆಯೆಂದು ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ಪ್ರಾಥಮಿಕ ಹಂತದಲ್ಲಿ ಪ್ರಾಯೋಗಿಕವಾಗಿ ಅತೀ ಬರ ಪೀಡಿತ 2 ಅಥವಾ 3 ಜಿಲ್ಲೆಗಳಲಿಲ ಕೈಗೊಳ್ಳುವಂತೆ ಹಾಗೂ ಫಲಿತಾಂಶ ಪರಿಶೀಲಿಸಿದ ನಂತರ ಮುಂದೆ ಸೂಕ್ತ ತೀರ್ಮಾನ ಕೈಗೊಳ್ಳಬಹುದಾಗಿದೆಯೆಂದು ಅಂದಿನ ಮುಖ್ಯ ಮಂತ್ರಿಗಳು ನಿರ್ದೇಶನ ನೀಡುರುತ್ತಾರೆ.

ತದನಂತರ, ಮಾನ್ಯ ಮುಖ್ಯಮಂತ್ರಿಗಳು ದಿನಾಂಕ : 13–7–2012 ರಂದು ಪರಿಶೀಲನಾ ಸಭೆ ಕೈಗೊಂಡಿದ್ದು, ಮೋಡ ಬಿತ್ತನೆ ಬಗ್ಗೆ ಚರ್ಚೆಯ ಸಂದರ್ಭದಲ್ಲಿ ಯಾವುದೇ ಸಮಯದಲ್ಲಿ ಮೋಡ ಬಿತ್ತನೆ ಕೈಗೊಳ್ಳುವ ಸಲುವಾಗಿ ಸಂಪುಟ ಸಭೆಯ ಅನುಮೋದನೆ ಪಡೆಯಲು, ಪ್ರಸ್ತಾವನೆ ಸಿದ್ಧಪಡಿಸಲು, ಮೋಡ ಬಿತ್ತನೆ ಕಾರ್ಯಾಚರಣೆಗೊಳಿಸಲು ಅವಶ್ಯ ಟೆಂಡರ್ ದಾಖಲೆಗಳನ್ನು ಸಿದ್ಧಪಡಿಸಲು ಸೂಚನೆ ನೀಡಿರುತ್ತಾರೆ.

ಮುಂದುವರೆದಂತೆ, ಮಾನ್ಯ ಜಲ ಸಂಪನ್ಮೂಲ ಸಚಿವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿದ್ದು ಹವಾಮಾನ ವಿಜ್ಞಾನಿಗಳ ಅಂದಾಜಿನ ಪ್ರಕಾರ ಜುಲೈ ಅಂತ್ಯದವರೆಗೆ ಮಳೆ ಬರುವುದಿಲ್ಲವೆಂದು ತಿಳಿಸಿರುವ ಕಾರಣ ಮೋಡಬಿತ್ತನೆ ಕಾರ್ಯಾಚರಣೆ ಕೈಗೊಳ್ಳಲು ತೀರ್ಮಾನಿಸಲಾಯಿತು. ರೂ. 5 ಕೋಟಿ ವೆಚ್ಚದಲ್ಲಿ ಮೋಡ ಬಿತ್ತನೆಯನ್ನು ಪ್ರಾಯೋಗಿಕವಾಗಿ ಮಾಡಲು ಸರ್ಕಾರ ತೀರ್ಮಾನಿಸಿದೆ. ಈ ಬಗ್ಗೆ ಪರಿಣಿತರಿಂದ ಪರಿಶೀಲಿಸಿ, ಕಾರ್ಯಾಚರಣೆ ಮಾಡಲು ತೀರ್ಮಾನಿಸಲಾಗಿದೆ.

ಗ್ರಾಮೀಣ ಪ್ರದೇಶದಲ್ಲಿ ಕೆರೆ ಹೂಳು ತೆಗೆಯಲು ಕಾರ್ಯ ಯೋಜನೆ ರೂಪಿಸಲು ತೀರ್ಮಾನಿಸಲಾಗಿದೆ.

ಗ್ರಾಮ ಪಂಚಾಯಿತಿಗೆ ಟೆಲಿ ಮೆಟ್ರಿಕ್ ರೈನ್ ಗೇಜ್ ಅಳವಡಿಸುವ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳು

ರಾಜ್ಯದಲ್ಲಿ ಎಲ್ಲಾ 747 ಹೋಬಳಿಗಳಲ್ಲಿ 795 ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಟೆಲಿಮೆಟ್ರಿಕ್ ಮಳೆ ಮಾಪನಗಳು 135 ಹವಾಮಾನ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿದೆ.

ಪ್ರಸ್ತುತ ಸಾಲಿನಲ್ಲಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ 1086 ಟೆಲಿಮೆಟ್ರಿಕ್ ಮಳೆ ಮಾಪನ ಕೇಂದ್ರಗಳು ಮತ್ತು ಹೋಬಳಿ ಮಟ್ಟದಲ್ಲಿ 612 ಟೆಲಿಮೆಟ್ರಿಕ್ ಹವಾಮಾನ ಮಾಪನಾ ಕೇಂದ್ರಗಳು ಸ್ಥಾಪಿಸಲು ಉದ್ದೇಶಿಸಿದೆ. ಇದಕ್ಕಾಗಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ರೂ. 10.00 ಕೋಟಿ ಮತ್ತು ವಿಶೇಷ ಅಭಿವೃದ್ಧಿ ಯೋಜನೆಯಡಿ ರೂ. 6.63 ಕೋಟಿ ಅನುದಾನ ದೊರೆಯುವ ನಿರೀಕ್ಷೆಯಿದೆ, ಪ್ರಸ್ತಾವನೆಗಳನ್ನು ನೆರವಿಗಾಗಿ ಸಲ್ಲಿಸಲಾಗಿದೆ.

ರೈತರ ಆತ್ಮಹತ್ಯೆ:

ರೈತರ ಆತ್ಮಹತ್ಯೆಗೆ ಸಾಲ ನೀಡುವ ಸಂಸ್ಥೆಗಳಿಂದ ಪಡೆದ ಸಾಲದ ಹೊರೆಯೇ ಕಾರಣ ಎಂಬ ವಿಷಯವನ್ನು ಖಾತರಿ ಮಾಡಿಕೊಂಡು ದೃಢೀಕರಣ ಪತ್ರವನ್ನು ನೀಡಲು ಉಪ–ವಿಭಾಗಾಧಿಕಾರಿಯ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯು 24 ಗಂಟೆಗಳ ಒಳಗಾಗಿ ಆತ್ಮಹತ್ಯೆ ಮಾಡಿಕೊಂಡು ರೈತರ ನಿವಾಸಕ್ಕೆ ಭೇಟಿ ನೀಡಿ ವಿಚಾರಣೆ ಮಾಡಿ ವರದಿ ನೀಡುತ್ತಾರೆ. ಪರಿಹಾರ ಮೊತ್ತವನ್ನು ಸಮಿತಿಯು ನೀಡುವ ದೃಢೀಕರಣ ಪತ್ರವನ್ನು ಆಧರಿಸಿ ಕೃಷಿ ಇಲಾಖೆಯ ಆಯಾ ತಾಲ್ಲೂಕಿನ ಸಹಾಯಕ ಕೃಷಿ ನಿರ್ದೇಶಕರುಗಳು ನೀಡುತ್ತಾರೆ.

ರೈತರ ನಿಲ್ಲದ ಆತ್ಮಹತ್ಯೆ ಪ್ರಕರಣಗಳನ್ನು ಗಮನಿಸಿ 2007–08ರಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ರೈತರ ನೇರವಾಗಿ ಅವರ ಸಂಕಷ್ಟಗಳನ್ನು ಅರಿಯಲು ದಿನಾಂಕ : 14–06–2007 ರಂದು ಸಂವಾದ ಕಾರ್ಯಕ್ರಮಗಳನ್ನು ಏರ್ಪಡಿಸಿ ಇಲ್ಲಿ ಬಂದಂತಹ ಸಲಹೆ ಸೂಚನೆಗಳನ್ನು ಪರಿಶೀಲಿಸಿ ನಿವಾರಣಕೋಪಾಯಗಳ ಬಗ್ಗೆ ವರದಿ ನೀಡಲು ಹಣಕಾಸು ಇಲಾಖೆಯ ಪ್ರಧಾನ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಚಿತವಾದ

ಸಮಿತಿಯು ವರದಿ ನೀಡಿದೆ. ಈ ವರದಿಯನ್ವಯ ಹಲವಾರು ರೈತರ ಪರ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತದೆ.

2011–12ರಲ್ಲಿ 187 ಪ್ರಕರಣಗಳು ವರದಿಯಾಗಿದೆ. 40 ಪ್ರಕರಣಗಳು ತಿರಸ್ಕೃತವಾಗಿದೆ. 68 ಪ್ರಕರಣಗಳಿಗೆ ಪರಿಹಾರ ನೀಡಲಾಗಿದೆ. 79 ಪ್ರಕರಣಗಳು ಸ್ಥಾಯಿ ಸಮಿತಿ ತೀರ್ಮಾನಿಸಬೇಕು.

2012–13ರಲ್ಲಿ 16 ಪ್ರಕರಣಗಳು ವರದಿಯಾಗಿದೆ. 0 ಪ್ರಕರಣಗಳು ತಿರಸ್ಕೃತವಾಗಿದೆ. 2 ಪ್ರಕರಣಗಳಿಗೆ ಪರಿಹಾರ ನೀಡಲಾಗಿದೆ. 14 ಪ್ರಕರಣಗಳು ಸ್ಥಾಯಿ ಸಮಿತಿ ತೀರ್ಮಾನಿಸಬೇಕು.

ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ಯೋಜನೆ

ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ 2012–13ನೇ ಸಾಲಿಗೆ ರೂ. 2318.33 ಕೋಟಿಗಳ ಆಯವ್ಯಯವನ್ನು ಒದಗಿಸಲಾಗಿದ್ದು, ಜೂನ್–12 ರವರೆಗೆ ರೂ. 488.89 ಕೋಟಿಗಳಷ್ಟು ವೆಚ್ಚವಾಗಿರುತ್ತದೆ. ರಾಜ್ಯಾದ್ಯಂತ ಕೆಳಕಂಡ ತಾಲ್ಲೂಕುಗಳನ್ನು ಹೊರತು ಪಡಿಸಿ ಇತರೇ ತಾಲ್ಲೂಕುಗಳಲ್ಲಿ ಪಿಂಚಣಿಯನ್ನು ಜೂನ್–12 ರವರೆಗೆ ವಿತರಿಸಲಾಗಿದೆ.

1. ಗೌರಿಬಿದನೂರು
2. ಚಳ್ಳಕೆರೆ
3. ಹಿರಿಯೂರು
4. ಚಿತ್ರದುರ್ಗ
5. ಹೊಳಲ್ಕೆರೆ
6. ಹೊಸದುರ್ಗ
7. ಮೊಳಕಾಲ್ಮೂರು
8. ಸಾಗರ
9. ಹಾನಗಲ್
10. ಹುನಗುಂದ
11. ಅಫಜಲಪುರ
12. ಶಾಹಪುರ

ಸದರಿ ತಾಲ್ಲೂಕುಗಳಲ್ಲಿ ಮೇ–12 ರವರೆಗೆ ವಿತರಿಸಲಾಗಿರುತ್ತದೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಬಯೋಮೆಟ್ರಿಕ್ ಆಧಾರಿತ ಸ್ಮಾರ್ಟ್ ಕಾರ್ಡ್‌ನ ವಿತರಣಾ ವ್ಯವಸ್ಥೆಯನ್ನು ಜಾರಿಗೆ ತರಲಾಗಿದ್ದು ಜೂನ್ ತಿಂಗಳ ಪಿಂಚಣಿಯನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳು ಸಹಭಾಗಿತ್ವದಲ್ಲಿ ವಿತರಿಸಲಾಗುತ್ತಿದೆ.

ಇನ್ನುಳಿದ ತಾಲ್ಲೂಕುಗಳಲ್ಲಿ ತಾಂತ್ರಿಕ ದೋಷಗಳಿಂದ ಪಿಂಚನಿಯನ್ನು ವಿತರಿಸುವುದಿಲ್ಲ. ಸದರಿ ಲೋಪದೋಷಗಳನ್ನು ಸರಿಪಡಿಸಿ ಪಿಂಚಣಿಯನ್ನು ವಿತರಿಸಲು ಸೂಕ್ತ ಕ್ರಮವನ್ನು ಖಜಾನೆಯು ಕೈಗೊಂಡಿರುತ್ತದೆ.

Sl. No.	District	No. of Permis sion as on 1-2-2011	Sancti oned form 1-2-2011 till date	Cancella tion upto June 12	No. of Cases receive d For restora tion	Restor ed cases	Cases sent back for clarific ation	Not as on Toda y	Benefic iaries as per treasur y	Benefe ciaries as per Smart Card	Total
		A	B	C	D	E	F	G=A+B+E-C	H	I	J = H+I
1	BAGALKOT	147137	3401	32445	1734	1469	265	119562	116910		115910
2	BAN ALORE URBAN	252263	266	118248	1653	1314	339	135595	150436		150436
3	BANGALORE (RURAL)	84264	2847	14267	1470	981	489	73825	78075		78075
4	BELGAUM	361109	10308	117062	3720	3068	652	257423	245489		245489
5	BELLARY	148692	4906	20560	390	386	4	133424	136378	15000	151378
6	BIDAR	138249	3042	31750	2610	2174	436	111715	103736		103736
7	BIJAPUII	199977	2323	85436	5051	4254	797	121118	136283		136283
8	CHAMARAJANAGAR	114058	1495	6216	2390	1868	522	111205	106500	10082	116582
9	CHICKMAGALUR	63011	1745	9462	1129	881	248	56175	52774		57774
10	CHIKKABALLAPURA	94562	1326	19488	2724	2301	423	78701	79465		79465
11	CHITRADURGA	105319	8142	15413	3981	3336	645	101384	86836	1320	88156
12	DAVANAGERE	126263	5958	28258	5680	5473	207	109436	111191		111191

13	DHARWAD	116608	5327	10287	5675	4508	1167	116156	72386	37839	110235
14	GADAG	107768	4456	19867	176	142	34	92499	85289		85289
15	GULBARGA	170933	853	82676	27560	18077	0	107187	130892		130892
16	HASSAN	173769	798	18288	3651	3128	523	159407	150349		150349
17	HAVERI	145257	3769	31032	1839	1626	213	120630	111862		111862
18	KARWAR	63778	4862	8092	1561	1420	141	61988	60694		60694
19	KOLAR	137184	1704	19339	596	418	178	119967	118806		118806
20	KOPPAL	105351	2173	17571	260	244	16	90197	88435		88435
21	MADIKERI	29674	554	5076	327	271	56	25423	23211		32211
22	MANDYA	217024	4311	26380	2570	2084	486	197039	B211		189928
23	MAN GALORE	73527	7419	10544	371	349	22	70751	58313		68313
24	MYSORE	205983	5840	46015	711	636	75	166444	168031		168011
25	RAICHUR	129011	4798	51339	452	408	44	82878	76489		76489
26	RAMANAGARA	128693	1623	23287	854	810	44	107839	105894		106894
27	SHIMOGA	92358	2399	17875	1211	1058	153	77940	72346		72346
28	TUMKUR	208523	4116	52970	2447	1665	782	161334	156532		156532
29	UDUPI	71826	7283	3727	855	712	143	76094	69482		69482
30	YADGIR	71941	4901	14547	-	0	-	62295	55790		55790
Total		**4085122**	**112965**	**957517**	**83648**	**65061**	**9104**	**3305631**	**3208802**	**64241**	**3273043**

ಬೆಳೆ ವಿಮೆ ಬಗ್ಗೆ:

ಪೆನ್‌ಷನ್‌ದಾರರ ಒಟ್ಟು ಸಂಖ್ಯೆ : 4 ಕೋಟಿ 85 ಸಾವಿರ 122. ಅದರಲ್ಲಿ

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : ಕರ್ನಾಟಕದ ಜನಸಂಖ್ಯೆಯ ಬಹುಪಾಲು ಜನರಿಗೆ ನೀವು ಪೆನ್‌ಷನ್ ಕೊಡುತ್ತೀರಾ ?

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : 40 ಲಕ್ಷದ 85 ಸಾವಿರದ 122 ಜನರಿಗೆ ಪೆನ್‌ಷನ್ ಕೊಡಲಾಗುತ್ತಿದೆ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ : ಕರ್ನಾಟಕದ ಜನಸಂಖ್ಯೆಯ ಬಹುಪಾಲು ಜನರಿಗೆ ನೀವು ಪೆನ್‌ಷನ್ ಕೊಡುತ್ತೀರಾ ?

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : 40 ಲಕ್ಷದ 85 ಸಾವಿರದ 122 ಒಟ್ಟು ಪೆನ್‌ಷನ್‌ದಾರರು. ಇದರಲ್ಲಿ 9 ಲಕ್ಷದ 57 ಸಾವಿರದ 517 ಜನಕ್ಕೆ ನಾವು ಪರಿಶೀಲನೆ ಮಾಡದಂಥ ಸಂದರ್ಭದಲ್ಲಿ ಕ್ಯಾನ್ಸಲ್ ಮಾಡಲಾಗಿತ್ತು. ಅದರಲ್ಲಿ ಮತ್ತೆ ಅರ್ಜಿ ಕೊಟ್ಟವರ ಸಂಖ್ಯೆ : 83,648 ಅದರಲ್ಲಿ ಸ್ಯಾಂಕ್ಷನ್ ಆಗಿರುವುದು 65,061. ಇನ್ನೂ ಕ್ಲಾರಿಫಿಕೇಷನ್ ಆಗಿರಬೇಕಾದ ಕೇಸ್ 9,104

ಶ್ರೀ ಸಿದ್ದರಾಮಯ್ಯ : ಈಶ್ವರಪ್ಪನವರೆ ನೀವೊಂದು ಬಜೆಟ್ ಸ್ಪೀಚ್ ಓದಿದಂತೆ ಓದುತ್ತಿದ್ದೀರಲ್ಲಾ?

ಶ್ರೀ ಕೆ.ಎಸ್. ಈಶ್ವರಪ್ಪ : ನಿಮಗೆ ವಿಷಯ ಕೊಡುತ್ತಿದ್ದೇನೆ. ನೀವು ಏನೇನು ಪ್ರಶ್ನೆಗಳನ್ನು ಕೇಳಿದ್ದೀರಿ ಅದಕ್ಕೆ ಉತ್ತರ ಹೇಳುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ : ನಾನು ಕೇಳಿದ ಒಂದು ಪ್ರಶ್ನೆಗೂ ಉತ್ತರ ಹೇಳಲಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ನೀವು ಕೇಳಿದ ಎಲ್ಲಾ ಪ್ರಶ್ನೆಗೂ ಉತ್ತರ ಹೇಳಿ ಆಯಿತು.

ಶ್ರೀ ಸಿದ್ದರಾಮಯ್ಯ : ನಾನು ಹೇಳುವುದನ್ನು ಸ್ವಲ್ಪ ಕೇಳಿ. ಮಳೆ ಮಾಪನಗಳನ್ನು ಪ್ರತಿ ಪಂಚಾಯಿತಿಗೊಂಡು ಇಡಬೇಕೆಂದು ಹೇಳಿದ್ದೇನೆ. ನಮ್ಮಲ್ಲಿ 740 ಹೋಬಳಿಗಳಿವೆ.

ಶ್ರೀ ಕೆ.ಎಸ್. ಈಶ್ವರಪ್ಪ : ಎಷ್ಟು ಮಾಡುತ್ತಿದ್ದೇವೆಂದು ನಾನು ಈಗಾಗಲೇ ಹೇಳಿದ್ದೇನೆ. ನೀವು ಕೇಳಿದಷ್ಟನ್ನು ಕೊಟ್ಟುಬಿಡಬೇಕೆ?

ಶ್ರೀ ಸಿದ್ದರಾಮಯ್ಯ : ಇನ್ನು ಮುಂದೆ ಪ್ರತಿಯೊಂದು ಪಂಚಾಯಿತಿಯಲ್ಲಿ ಒಂದು ಮಳೆಮಾಪನ ಇಡುತ್ತೇವೆಂಬ ಉತ್ತರ ನಮಗೆ ಬೇಕಾಗಿದೆ.

ಶ್ರೀ ಕೆ.ಎಸ್. ಈಶ್ವರಪ್ಪ : ನಾನು ಈಗ ಹೇಳಿದ್ದೇನು?

ಶ್ರೀ ಸಿದ್ದರಾಮಯ್ಯ : ಮಾನ್ಯ ಈಶ್ವರಪ್ಪನವರೆ, ತಾವು ಹೇಳಿಲ್ಲ?

ಶ್ರೀ ಕೆ.ಎಸ್. ಈಶ್ವರಪ್ಪ : ಪ್ರತಿ ಹೋಬಳಿಗೆ ಕೊಡುವುದಕ್ಕೆ ಆಗುವುದಿಲ್ಲ. ಆದರೆ, ಎಷ್ಟು ಗ್ರಾಮ ಪಂಚಾಯಿತಿಗೆ ನಾನು ಈಗಾಗಲೇ ಹೇಳಿದ್ದೇನೆ. ಅಂದರೆ, ಸುಮಾರು 1 ಸಾವಿರ ಚಿಲ್ಲರೆ ಕೊಡುತ್ತೇವೆಂದು ಹೇಳಿದ್ದೇನೆ. ತಾವು ಹೊರಗಡೆ ಹೋಗಿದ್ದಾಗ ಈ ವಿಷಯವನ್ನು ನಾನು ಹೇಳಿದ್ದೇನೆ.

ಶ್ರೀ ಸಿದ್ದರಾಮಯ್ಯ : ಹೊರಗಡೆ ಕಾಫಿ ಕುಡಿಯುತ್ತಾ ನಿಮ್ಮ ಭಾಷಣವನ್ನು ನಾನು ಕೇಳಿದ್ದೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ನೀವು ಕಾಫಿ ಕುಡಿಯುತ್ತಾ ಕೇಳುವುದನ್ನು ನಾನು ಬೇಡ ಎಂದು ಹೇಳುವುದಿಲ್ಲ. ಮಾನ್ಯ ಸಿದ್ದರಾಮಯ್ಯನವರೆ, ತಾವು ವಿರೋಧ ಪಕ್ಷದ ನಾಯಕರಾಗಿ ಹೇಳಿರುವುದು ಸರಿಯಾಗಿದೆ. ಈ ವರ್ಷದಲ್ಲಿ ಎಷ್ಟು ಕೊಡತ್ತೇವೆಂಬುದನ್ನು ಹೇಳಿದ್ದೇನೆ.

ಶ್ರೀ ಸಿದ್ದರಾಮಯ್ಯ : My demand is ಹೋಬಳಿ ಮಟ್ಟದಲ್ಲಿ ಬೆಳೆ ನಷ್ಟವನ್ನು ಲೆಕ್ಕಕ್ಕೆ ತೆಗೆದುಕೊಳ್ಳುತ್ತಿದ್ದೀರಿ. ಇವತ್ತಿನ ದಿವಸ ಮಳೆ ಎಲ್ಲ ಕಡೆ uniform ಆಗಿ ಸಮಾನಂತರವಾಗಿ ಬೀಳುತ್ತಿಲ್ಲ. ಮಳೆ ಸರಿಯಾಗಿ ಬೀಳದೆ ಇರುವುದರಿಂದ ರೈತರ ಬೆಳೆ ಎಷ್ಟು ನಷ್ಟವಾಯಿತೆಂದು ಲೆಕ್ಕ ಹಾಕಿ ಅವರಿಗೆ ಸರಿಯಾದ ರೀತಿಯಲ್ಲಿ ವಿಮೆ ಹಣ ಕೊಡುವುದಕ್ಕೆ ಆಗುವುದಿಲ್ಲ. ಏಕೆಂದರೆ, ಅದು ವೈಜ್ಞಾನಿಕವಾಗಿಲ್ಲ. ಆದ್ದರಿಂದ, ನಾನು

ಹೇಳುವುದೇನೆಂದರೆ, ಈಗ ತಾವು ಹೋಬಳಿ ಮಟ್ಟದಲ್ಲಿ ಮಾಡಿರುವುದನ್ನು ಬಿಟ್ಟು ಪ್ರತಿ ಗ್ರಾಮ ಪಂಚಾಯಿತಿ head quarters ನಲ್ಲಿ ಮಾಡಿ ಎಂದು ನಾನು ಸಲಹೆ ಕೊಟ್ಟಿದ್ದೆ ಇಂಥ ಸನ್ನಿವೇಶದಲ್ಲಿ ರೈತರಿಗೆ ಸ್ವಲ್ಪ ಸಹಾಯ ಮಾಡಬೇಕೆಂದರೆ ಈ ರೀತಿಯಾದ ಒಂದು ಮಳೆ ಮಾಪನವನ್ನು ಪ್ರತಿ ಪಂಚಾಯಿತಿಯಲ್ಲಿಡುತ್ತೇವೆಂದು ಈಗ ಘೋಷಣೆ ಮಾಡಬೇಕು. ಅದನ್ನು ಮಾಡದೆ ಕೇವಲ ಅಧಿಕಾರಿಗಳು ಮಾಡಿಕೊಟ್ಟಿರುವ ನೋಟ್ಸ್ ಅನ್ನು ಸುಮ್ಮನೆ ಓದುತ್ತಾ ಹೋದರೆ ಹೇಗೆ?

ಶ್ರೀ ಕೆ.ಎಸ್. ಈಶ್ವರಪ್ಪ : ಹಿಂದೆ ಉಪ ಮುಖ್ಯ ಮಂತ್ರಿಯಾಗಿದ್ದಾಗ ನೀವೇನು ಮಾಡಿದ್ದೀರಿ? ನೀವೇನಾದರೂ ಹೊರಗಡೆಯಿಂದ ಡಾಕ್ಯುಮೆಂಟ್ ಅನ್ನು ಕೊಟ್ಟಿದ್ರಾ? ನಿಮ್ಮ ಪ್ರಶ್ನೆಗೆ ನಾನು ಉತ್ತರ ಕೊಟ್ಟಿದ್ದೇನೆ.

ಶ್ರೀ ಸಿದ್ದಾರಾಮಯ್ಯ : ನನ್ನ ಅನುಭವದ ಮಾತನ್ನು ನಾನು ಹೇಳಿದ್ದೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ನಾನು ಹೇಳುವುದನ್ನು ತಾವು ಸ್ವಲ್ಪ ಕೇಳಿ. ಈಗ ಪ್ರಸ್ತುತ ಸಾಲಿನಲ್ಲಿ ಎಷ್ಟಿದೆ ಎಂಬುದನ್ನು ನಾನು ಹೇಳುತ್ತಿದ್ದೇನೆ. ರಾಜ್ಯದಲ್ಲಿನ ಎಲ್ಲ 740 ಹೋಬಳಿ ಕೇಂದ್ರದಲ್ಲಿ, 795 ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಮಳೆಮಾಪನ ಮತ್ತು 135 ಹವಾಮಾನ ಕೇಂದ್ರಗಳಲ್ಲಿ ಕಾರ್ಯ ಮಾಡಲಾಗುತ್ತಿದೆ ಎಂದು ನಾನು ಹೇಳಿದ್ದೇನೆ. ಪ್ರಸ್ತುತ ಸಾಲಿನಲ್ಲಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ 1086 ಮಳೆ ಮಾಪನ ಕೇಂದ್ರಗಳು ಮತ್ತು ಹೋಬಳಿ ಮಟ್ಟದಲ್ಲಿ 612 ಹವಾಮಾನ ಮಾಪನ ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ ಎಂದು ಹೇಳುತ್ತಿದ್ದೇನೆ. ಇನ್ನು ಯಾವ ರೀತಿಯಲ್ಲಿ ನಾನು ಹೇಳಲಿ ? ಈ ವರ್ಷದಲ್ಲಿ ನಾವು ತರುತ್ತಿದ್ದೇವೆಂದು ಹೇಳುತ್ತಿದ್ದೇವೆ.

ಶ್ರೀ ಸಿದ್ದರಾಮಯ್ಯ : 5600 ಗ್ರಾಮ ಪಂಚಾಯಿತಿಯಲ್ಲಿ ಮಳೆ ಮಾಪನ ಇಡುತ್ತೇವೆಂದು ದಯಮಾಡಿ ಹೇಳಿ.

ಶ್ರೀ ಕೆ.ಎಸ್. ಈಶ್ವರಪ್ಪ : ವಿರೋಧ ಪಕ್ಷದವರ ಬೇಡಿಕೆ ಇದೇ ರೀತಿಯಲ್ಲಿರಬೇಕು. ಅಂದರೆ, ಎಷ್ಟು ಗ್ರಾಮ ಪಂಚಾಯಿತಿ ಇದೆಯೋ, ಎಷ್ಟು ಹಳ್ಳಿಗಳಿವೆಯೋ ಅದಕ್ಕಿಂಥ ಜಾಸ್ತಿನೆ ಮಾಡಿ ಎಂದು ತಾವು ಹೇಳಬೇಕು.

ನೀವು ಇದೇ ರೀತಿಯಲ್ಲಿ ಕೇಳಬೇಕು. ನಾವು ಹೇಳುವ ಸಂಖ್ಯೆಗಳನ್ನು ತಾವು ಕೇಳುವುದಿಲ್ಲವೆಂದರೆ ಹೇಗೆ?

(ಗೊಂದಲ)

ಶ್ರೀ ಸಿದ್ದರಾಮಯ್ಯ : ರೈತರು, ಬಡವರಿಗೋಸ್ಕರ ನಾವು ಕೇಳುತ್ತಿದ್ದೇವೆ.

ಶ್ರೀ ಕೆ.ಎಸ್. ಈಶ್ವರಪ್ಪ : ನಾನು ಹೇಳುವುದನ್ನು ತಾವು ಕೇಳಲಿಲ್ಲ. ತಾವು ಹೊರಗಡೆ ಹೋಗಿದ್ದೀರಿ.

ಶ್ರೀ ಬಂಡೆಪ್ಪ ಖಾಶೆಂಪೂರ್ : ಇನ್ನೊಂದು ವಿಷಯವನ್ನು, ನೀವು ಅವರಿಗೆ ಕೇಳಿಲ್ಲ. ಅದೇನೆಂದರೆ, ರಾಷ್ಟ್ರೀಯ ವಿಕಾಸ ಯೋಜನೆ ಅಡಿಯಲ್ಲಿ 10 ಕೋಟಿ ರೂಪಾಯಿಗೆ ಪ್ರಸ್ತಾವನೆಯನ್ನು ಅವರಿಗೆ ಕಳುಹಿಸುತ್ತಿದ್ದಾರೆ.

ಶ್ರೀ ಕೆ.ಎಸ್. ಈಶ್ವರಪ್ಪ : ಪ್ರಸ್ತಾವನೆಯನ್ನು ಕಳುಹಿಸುತ್ತೇವೆ. ಅದು ಬಾರದೆ ಇದ್ದರೆ ನಮ್ಮ ರಾಜ್ಯ ಸರ್ಕಾರದಿಂದ ಹಣ ಹಾಕುತ್ತೇವೆ. ಅವರು ಕೊಡುವ ಅವಶ್ಯಕತೆ ಇದೆ. ಕೊಡವ ಅವಕಾಶ ಇರುವುದರಿಂದ ನಾವು ಬಳಸಿಕೊಳ್ಳುತ್ತಿದ್ದೇವೆ. ಅವರು ಇಲ್ಲ ಎಂದರೆ ನಾವು ಸುಮ್ಮನೆ ಕುಳಿತುಕೊಳ್ಳುತ್ತೇವೇಯೇ? ನಾವು ಮಾಡಿಯೇ ಮಾಡುತ್ತೇವೆ. ಅವರಿಂದ ಬರುವ ದುಡ್ಡನ್ನು ನೀವು ಕೊಡಬೇಡಿ ನಾವೇ ಮಾಡಿಕೊಳ್ಳುತ್ತೇವೆಂದು ಹೇಳುವುದಕ್ಕೆ ಬರುತ್ತದೆಯೇ? ಒಂದು ಸಾವಿರ ಕೋಟಿ ರೂಪಾಯಿಯನ್ನು ನೀವು ವಿದ್ಯುತ್‌ಗೆ ಹಣ ಇಡಬೇಕೆಂದು ಮಾನ್ಯ ಯಡಿಯೂರಪ್ಪನವರು ಒತ್ತಾಯ ಮಾಡಿದಾಗ ನೀವೆಲ್ಲ ಚಪ್ಪಾಳೆ ಹೊಡೆದಿರಿ. ಆದರೆ, ನಾವು ಎಷ್ಟು ಇಟ್ಟಿದ್ದೇವೆಂದು ಹೇಳಿದಾಗ ಚಪ್ಪಾಳೆ ಹೊಡೆಯಲ್ಲ. ಕೇವಲ ಕೇಳಿಸಿಕೊಂಡರಷ್ಟೆ. ಅದಕ್ಕಿಂಥ ಜಾಸ್ತಿ ಹೇಳಿದ್ದೇನೆ, ನೀವು ಕೇಳಿಸಿಕೊಳ್ಳಲಿಲ್ಲ. ಮಾನ್ಯ ಸಿದ್ಧರಾಮಯ್ಯನವರು ಹೊಡಗಡೆ ಹೋದ ತಕ್ಷಣ ನೀವೆಲ್ಲ ಮಲಗಿಬಿಟ್ಟಿರಿ.

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್ : ನಿಮ್ಮ ಸರ್ಕಾರ ಬಂದ ಮೇಲೆ ಅಂದರೆ, ಕಳೆದ ಮೂರು ವರ್ಷಗಳಿಂದ ಒಂದೇ ಒಂದು ಸಿಂಗಲ್ improvement TC ಯನ್ನು ಯಾವುದಾದರೊಂದು ಹಳ್ಳಿಯಲ್ಲಿ ಹಾಕಿದ್ದೀರಾ?

ಶ್ರೀ ಕೆ.ಎಸ್. ಈಶ್ವರಪ್ಪ : ಕಳೆದ ಮೂರು ವರ್ಷಗಳೆಂದರೆ, ನಾನು ಹಿಂದೆ ಇಂಧನ ಇಲಾಖೆ ಸಚಿವನಾಗಿದ್ದೆ. ಆ ಸಂದರ್ಭದಲ್ಲಿ ನಾನು ನಿಮ್ಮ ಊರಿಗೆ ಬಂದು ಎಷ್ಟು ಹಾಕಿಸಿದ್ದೀನಿ ನೀವೇ ಹೇಳಿ? ಸುಮ್ಮನೆ ಸುಳ್ಳು ಆಪಾದನೆ ಮಾಡತಕ್ಕಂಥದ್ದು ಸರಿಯಲ್ಲ. ನಿಮ್ಮ ಊರಿಗೆ ಸ್ಟೇಷನ್ ಕೊಟ್ಟಿದ್ದೇವೆ. ತಾವು ಮರೆತು ಬಿಟ್ಟಿದ್ದೀರಾ? ನೀವು ಹಳ್ಳಿಗಳಿಗೆ ಹೋಗುವುದನ್ನು ಬಿಟ್ಟಿರಬೇಕು. ಆದ್ದರಿಂದ, ತಾವು ಮರೆತಿರಬೇಕು.

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್ : ಸಿಂಗಲ್ improvement TC ಯನ್ನು ಒಂದೇ ಒಂದು ಕಡೆ ಹಾಕಿಲ್ಲ. ತಾವು T.C. replacement ಬಗ್ಗೆ ಹೇಳುತ್ತಿದ್ದೀರಿ.

ಶ್ರೀ ಕೆ.ಎಸ್. ಈಶ್ವರಪ್ಪ : ಆಯಿತು ಬಿಡಿ, ಈ ಮಾತನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಎಷ್ಟು ಸಾವಿರ ಕೋಟಿ ರೂಪಾಯಿಯ ವಿದ್ಯುತ್ ಅನ್ನು ಖರೀದಿ ಮಾಡುತ್ತಿದ್ದೇವೆಂಬ ಬಗ್ಗೆ ಮಾನ್ಯ ಇಂಧನ ಸಚಿವರು ಸ್ಪಷ್ಟವಾಗಿ ಒಂದು ಪಟ್ಟಿ ಕೊಟ್ಟಿದ್ದಾರೆ. ಇದಕ್ಕಾಗಿ ಒಂದು ಸಾವಿರ ಕೋಟಿ ರೂಪಾಯಿ ಇಡಬೇಕೆಂದು ಹೇಳಿದ್ದಾರೆ.

ಶ್ರೀ ಗೂಳಿಹಟ್ಟಿ ಡಿ. ಶೇಖರ್ : ಮಾನ್ಯ ಸಚಿವರೆ, ನಿಮ್ಮ ಕಾಲದಲ್ಲಿ ವಿದ್ಯುತ್ ಖರೀದಿ ಬಹಳ ಕಡಿಮೆ ಇತ್ತು.

ಶ್ರೀ ಎನ್. ಸಂಪಂಗಿ: Energy Minister ಎಂದು ತಾವು ಹೇಳುತ್ತಿದ್ದೀರಿ. ಆದರೆ, ಕರೆಂಟ್ ಅನ್ನು ಕಿತ್ತು ಹಾಕಿಬಿಟ್ಟಿದ್ದೀರಲ್ಲ ?

ಶ್ರೀ ಕೆ.ಎಸ್. ಈಶ್ವರಪ್ಪ : ಅದರ ಬಗ್ಗೆ ನೀವು ಆ ರೀತಿಯಾಗಿ ತಿಳಿದುಕೊಂಡಿರುವುದೇ ನಿಮಗೆ ಸಮಸ್ಯೆಯಾಗಿದೆ. ಅವರ ಹತ್ತಿರ ಎಷ್ಟು ಪವರ್ ಇದೆ, ಎಷ್ಟು ಕರೆಂಟ್ ಇದೆ ಎಂಬುದು ಇವತ್ತಲ್ಲ ನಾಳೆ ಗೊತ್ತಾಗುತ್ತದೆ. ಮಾನ್ಯ ಸಿದ್ದರಾಮಯ್ಯನವರೆ, ತಾವು ದಯವಿಟ್ಟು ವಿದ್ಯುತ್ ಬಗ್ಗೆ ಗಮನಿಸಬೇಕು.

ಡಾ|| ಹೆಚ್.ಸಿ. ಮಹದೇವಪ್ಪ : ಹಾಗಾದರೆ, ನಿಮಗೆ ಹೆಚ್.ಟಿ. ಲೈನ್‌ನಲ್ಲಿ ಮಧ್ಯೆ ಮಧ್ಯೆ ಶಾಕ್ ಹೊಡೆದಿರಬೇಕಲ್ಲವೇ?

ಶ್ರೀ ಕೆ.ಎಸ್. ಈಶ್ವರಪ್ಪ : ಶಾಕ್ ಹೊಡೆಸಿಕೊಳ್ಳುತ್ತೀರಾ ಹುಷಾರ್ ! ಈಗ ನಾನು ಹೇಳುವುದೇನೆಂದರೆ, ತಾವುಗಳು ವಿದ್ಯುತ್ ಬಗ್ಗೆ ದಯವಿಟ್ಟು ಗಮನಿಸಿ. ನಮಗೆ ವಿದ್ಯುತ್ ಸಮಸ್ಯೆದೆ ಎಂದು ತೋರಿಸಿದ್ದು ನೀವೇ. ಏಕೆಂದರೆ, ನಾವು ವಿರೋಧ ಪಕ್ಷದಲ್ಲಿದ್ದಂಥ ಸಂದರ್ಭದಲ್ಲಿ ತಾವು ವಿದ್ಯುತ್ ಉತ್ಪಾದನೆಯನ್ನು ಪ್ರಾರಂಭ ಮಾಡಿದ್ದರೆ ನಮಗೆ ಈ ಸ್ಥಿತಿ ಬರುತ್ತಿರಲಿಲ್ಲ. ನಾವು ವಿದ್ಯುತ್ ಅನು ಖರೀದಿ ಮಾಡಿ ಕೊಡುತ್ತಿದ್ದೇವೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಈಶ್ವರಪ್ಪನವರೆ, ನಮ್ಮ ಕಾಲದಲ್ಲಿ ವಿದ್ಯುತ್‌ನ ಕೊರತೆ ಇತ್ತು. ಅದನ್ನು ನಾನು ಮಾಡಿಕೊಳ್ಳುತ್ತೇನೆ. admit 2008ರಲ್ಲಿ ನೀವು ಬಂದಾಗ what was the position? ಕೊರತೆ ಎಷ್ಟಿತ್ತು? ಮತ್ತೆ ಈ ನಾಲ್ಕು ವರ್ಷದಲ್ಲಿ ಎಷ್ಟು ಕೊರತೆಯನ್ನು ತುಂಬಿದ್ದೀರ ಹೇಳಿ? ಜನರು ನಮ್ಮನ್ನು ಸೋಲಿಸಿ ಮನೆಗೆ ಕಳುಹಿಸಿ ನಿಮಗೆ ಅಧಿಕಾರ ಕೊಟ್ಟಿದ್ದಾರೆ. ಆದರೆ, ನೀವು ಮಾಡಲಿಲ್ಲ. 5 ವರ್ಷಗಳಲ್ಲಿ 10 ಸಾವಿರ ಮೆ.ವ್ಯಾ. ವಿದ್ಯುತ್ ಉತ್ಪಾದನೆ ಮಾಡುತ್ತೇವೆಂದು ನೀವು ಬಂದಾಗ ಹೇಳಿದ್ದೀರಿ. ಅಷ್ಟನ್ನು ಮಾಡಿದ್ದೀರಾ? ನೀವು ಬಂದು ನಾಲ್ಕು ವರ್ಷ ಆಯಿತು. ಕೊನೇಪಕ್ಷ 8 ಸಾವಿರ ಮೆ.ವ್ಯಾ. ವಿದ್ಯುತ್ ಉತ್ಪಾದನೆಯಾದರೂ ಮಾಡಿದ್ದೀರಾ? ಅಥವಾ 5,6 ಸಾವಿರ ಮೆ.ವ್ಯಾ. ನಷ್ಟು ಉತ್ಪಾದನೆ ಮಾಡಿದ್ಧೀರಾ ಹೇಳಿ ನೋಡೋಣ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ ....

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ರೇವಣ್ಣನವರೆ, ನಾನು ಮೊದಲು ಮಾತನಾಡಿ ಮುಗಿಸುತ್ತೇನೆ. ಅನಂತರ ನೀವು ಮಾತನಾಡಿ. ನೀನು ಏಕೆ ಅವರ ಜೊತೆ ಸೇರಿಕೊಳ್ಳುತ್ತೀರಿ? ಅವರ ಜೊತೆ ಹೋಗಬೇಡಿ. ಅವರ ಜೊತೆ ಹೋದರೆ ಕೆಟ್ಟು ಹೋಗುತ್ತೀರಿ?

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ನೀವು ಉತ್ತರ ಕೊಡುವುದಕ್ಕೆ ಅನುಕೂಲವಾಗಲೆಂದು ನಾನು ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ರೇವಣ್ಣನವರು ನನ್ನ ಹತ್ತಿರ ಹಗಲ ಹೊತ್ತು ಬರುತ್ತಾರೆ. ರಾತ್ರಿ ಹೊತ್ತು ನಿಮ್ಮ ಜೊತೆ ಬರಬಹುದು.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಉಪಾಧ್ಯಕ್ಷರೆ, ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ 16,890 ಮಿಲಿಯನ್ ಯೂನಿಟ್ ವಿದ್ಯುತ್ ಅನ್ನು high cost ಕೊಟ್ಟು ಖರೀದಿ ಮಾಡಿದ್ದಾರೆ. ಇದಕ್ಕಾಗಿ ಒಟ್ಟು 9,500 ಕೋಟಿ ರೂಪಾಯಿ ಖರ್ಚು ಮಾಡಿದ್ದಾರೆ. ನಾವು ಇದ್ದಾಗ ಕೇವಲ 28 ಕೋಟಿ ರೂಪಾಯಿಗೆ ಮಾತ್ರ high cost ಕರೆಂಟ್ ಖರೀದಿ ಮಾಡಿದ್ದೇವೆ. ಇವರು ಒಂದು ಯೂನಿಟ್‌ಗೆ 4 ರೂಪಾಯಿಂದ 9.5 ರೂಪಾಯಿವರೆಗೆ ಕರೆಂಟ್ ಖರೀದಿ ಮಾಡಿದ್ದಾರೆ. ಮಾನ್ಯ ಇಂಧನ ಮಂತ್ರಿಗಳು ಮೊನ್ನೆ ದಿವಸ, ಅಂದರೆ, 9–4–2012 ರಂದು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದೇನೆಂದರೆ, ಒಂದು ದಿವಸಕ್ಕೆ 2000 ಮೆ.ವ್ಯಾ. ನಷ್ಟು ವಿದ್ಯುತ್ ಅನ್ನು ಖರೀದಿ ಮಾಡುತ್ತಿರುವ ಲೆಕ್ಕ ಸಿಗುತ್ತಿಲ್ಲವೆಂದು ಹೇಳಿದ್ದಾರೆ. ಈ ಹೇಳಿಕೆಯನ್ನು ನಾನು ಕೊಟ್ಟಿಲ್ಲ. ಮಾನ್ಯ ಮಂತ್ರಿಗಳು ಕೊಟ್ಟಿರುವ ಹೇಳಿಕೆಯನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಒಂದು ದಿನಕ್ಕೆ 12 ಕೋಟಿ ರೂಪಾಯಿ ವೆಚ್ಚದಲ್ಲಿ ಖರೀದಿ ಮಾಡಿರುವ ಲೆಕ್ಕ ಸಿಗುತ್ತಿಲ್ಲವೆಂದು ಮಾನ್ಯ ಇಂಧನ ಮಂತ್ರಿಗಳು ಹೇಳಿಕೆ ಕೊಟ್ಟಿರುವುದನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ರೀತಿಯಾದರೆ ವರ್ಷಕ್ಕೆ 4 ಸಾವಿರ ಕೋಟಿ ರೂಪಾಯಿ ನಷ್ಟವಾಗುತ್ತದೆ. ಆದ್ದರಿಂದ ಇದರ ಬಗ್ಗೆ ಇವರು ಮಾನ್ಯ ಇಂಧನ ಮಂತ್ರಿಗಳ ಪರವಾಗಿ ಉತ್ತರ ಹೇಳಲಿ?

ಶ್ರೀ ಕೆ.ಎಸ್. ಈಶ್ವರಪ್ಪ : ತಾವು ಒಂದು ನಿಮಿಷ ದಯವಿಟ್ಟು ಕುಳಿತುಕೊಳ್ಳಿ. ಈಗ ವಿದ್ಯುತ್‌ನ ಉತ್ಪಾದನೆಯನ್ನು ನಾವೇನು ಆಕಾಶದಿಂದ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಸಿದ್ದರಾಮಯ್ಯ : ಆಕಾಶದಿಂದ ಮಾಡಿ ಎಂದು ಯಾರು ಹೇಳಿದ್ದಾರೆ?

ಶ್ರೀ ಕೆ.ಎಸ್. ಈಶ್ವರಪ್ಪ : ಬಿಜಾಪುರದಲ್ಲಿ ಭೂಮಿ ಖರೀದಿ ಮಾಡಬೇಕಾಗಿದ್ದು, ರೈತರು ಭೂಮಿ ಕೊಡುವುದಕ್ಕೆ ಮುಂದೆ ಬಂದರೂ

ಸಹ ಬೇಡ ಬೇಡ ಎಂದು black flag ತೋರಿಸುತ್ತೀರಿ. ಆಲ್ಲಿ 4 ಸಾವಿರ ಮೆ.ವ್ಯಾ. ವಿದ್ಯುತ್ ಉತ್ಪಾದನೆ ಮಾಡುವುದಕ್ಕೆ ಎನ್‌ಟಿಪಿಸಿ ಜೊತೆ ಒಪ್ಪಂದ ಕೂಡ ಮಾಡಿಕೊಂಡು ಬಂದಿದ್ದೇವೆ. ಇದು ಹೌದು ತಾನೆ? ಈಗ ಬರಗಾಲ ನೀರಿಲ್ಲ. ಕೋಲ್ ಕೊಡಿಸಿ ಎಂದರೂ ಸಹ ಕೋಲ್ ಕೊಡಿಸುತ್ತಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ : ಹಿಂದೆ ಸಮ್ಮಿಶ್ರ ಸರ್ಕಾರ ಇದ್ದಂಥ ಸಂದರ್ಭದಲ್ಲಿ ಪ್ರಧಾನ ಮಂತ್ರಿಗಳಾಗಿರುವ ಶ್ರೀ ಮನಮೋಹನ್ ಸಿಂಗ್‌ರವರು, ಇಲ್ಲಿಗೆ ಬಂದು ವಿಧಾನ ಸೌಧದ ಮೂರನೇ ಮಹಡಿಯಲ್ಲಿ 4 ಸಾವಿರ ಮೆ.ವ್ಯಾ. ವಿದ್ಯುತ್ ಉತ್ಪಾದನೆಯನ್ನು ತದಡಿಯಲ್ಲಿ ಮಾಡುವುದಕ್ಕೆ ಅನುಮೋದನೆ ಕೊಟ್ಟಿದ್ದರು. ಇದನ್ನು ಕಾರವಾರದಲ್ಲಿ ತಿರಸ್ಕಾರ ಮಾಡಿದ್ದು ಯಾರು ಸ್ವಾಮಿ ? ಪರಿಸರ ಇಲಾಖೆಗೆ ಅಲ್ಲಿ ಬೇಡ ಎಂದು ನೀವೇ ತಾನೆ ಮಾಡಿದ್ದು 4 ಸಾವಿರ ಮೆ.ವ್ಯಾ. ವಿದ್ಯುತ್ ಉತ್ಪಾದನೆ ಮಾಡುವುದಕ್ಕೆ ಅನುಮೋದನೆ ಕೊಡುತ್ತೇನೆಂದು ಈ ದೇಶದ ಪ್ರಧಾನ ಮಂತ್ರಿಗಳು ವಿಧಾನ ಸೌಧದ ಮೂರನೇ ಮಹಡಿಗೆ ಬಂದು ಹೇಳಿದ್ದು ನಿಜವೇ ಅಥವಾ ಇಲ್ಲವೇ ಎಂಬುದನ್ನು ದಯಮಾಡಿ ಹೇಳಿ?

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ರೇವಣ್ಣನವರು ವಿದ್ಯುತ್ ಮಂತ್ರಿಯಾಗಿ ಒಳ್ಳೆಯ ಅನುಭವ ಇದೆ. ಅಷ್ಟೇ ಅನುಭವದಿಂದ ಒಳ್ಳೆಯ ಸುಳ್ಳನ್ನು ಸಹ ಹೇಳುತ್ತಿದ್ದೀರಿ.

ಶ್ರೀ ಹೆಚ್.ಡಿ. ರೇವಣ್ಣ : ನಾನು ನಿಜ ಹೇಳಿದ್ದೇನೆ. ಅದು ನಿಜವೋ ಅಥವಾ ಸುಳ್ಳೋ ಹೇಳಿ?

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಬಿಜಾಪುರದ ಕೂಡಗಿಯಲ್ಲಿ 4 ಸಾವಿರ ಮೆ.ವ್ಯಾ. ಉತ್ಪಾದನೆ ಮಾಡುವುದಕ್ಕೆ ಒಪ್ಪಿಗೆ ಆಗಿದೆ. ಬಿಜಾಪುರ ಜಿಲ್ಲೆಯ ಶಾಸಕರೆಲ್ಲರೂ ಸಹ ಇಲ್ಲಿಯೇ ಇದ್ದಾರೆ. ಅಲ್ಲಿನ ರೈತರು ಇದಕ್ಕಾಗಿ ಭೂಮಿ ಕೊಡುವುದಕ್ಕೆ ತಯಾರಿದ್ದಾರೆ. ಆದರೆ, ನೀವು ಇಲ್ಲಿ ಜನತಾದಳದ ಫ್ಲಾಗ್ ಹಿಡಿದುಕೊಂಡು ಹೋಗುತ್ತಿದ್ದೀರಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ನಾವು ನೋಡಿಲ್ಲ. ಆದರೆ, ತದಡಿಯಲ್ಲಿ 4 ಸಾವಿರ ಮೆ.ವ್ಯಾ. ವಿದ್ಯುತ್ ಉತ್ಪಾದನೆ ಮಾಡುವುದಕ್ಕೆ ಅನುಮತಿ ಸಿಕ್ಕಿತ್ತು ಅಲ್ಲವೇ?

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ರೇವಣ್ಣನವರೆ, ತಾವೂ ಸಹ ಹಿಂದೆ ಇಂಧನ ಇಲಾಖೆ ಸಚಿವರಾಗಿ ಕೆಲಸ ಮಾಡಿದ್ದೀರಿ. ಆಗ ವಿದ್ಯುತ್ ಉತ್ಪಾದನೆ ಮಾಡಿದ್ದರೆ ಈ ಪರಿಸ್ಥಿತಿ ನಮಗೆ ಬರುತ್ತಿರಲಿಲ್ಲ. ನೀವು ಇದ್ದಂಥ ಸಂದರ್ಭದಲ್ಲಿ ಈ ರಾಜ್ಯಕ್ಕೆ ಏನು ಪ್ರಯೋಜನ ಮಾಡಿದ್ದೀರಿ?

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಹಿಂದೆ ಎನ್.ಡಿ.ಎ. ಸರ್ಕಾರ ಇದ್ದಾಗ ಆಂಧ್ರ ಪ್ರದೇಶಕ್ಕೆ 2.5 ಸಾವಿರ ಮೆ.ವ್ಯಾ. ವಿದ್ಯುತ್ ಉತ್ಪಾದನೆಗೆ ಅವಕಾಶ ಕೊಟ್ಟಿದ್ದೀರಿ. ಆ ಸಂದರ್ಭದಲ್ಲಿ ಇಲ್ಲಿ ಏನು ಮಾಡಿದ್ದೀರಿ. ಹೇಳಿ ನೋಡೋಣ. 5 ವರ್ಷ ಎನ್‌ಡಿಎ ಸರ್ಕಾರ ಇದ್ದಂಥ ಸಂದರ್ಭದಲ್ಲಿ ಈ ರಾಜ್ಯಕ್ಕೆ ಏನು ಕೊಟ್ಟಿದ್ದೀರಿ? ಎಷ್ಟು ವಿದ್ಯುತ್ ಕೊಟ್ಟಿದ್ದಾರೆಂಬುದನ್ನು ದಯಮಾಡಿ ಹೇಳಿ?

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ವಿರೋಧ ಪಕ್ಷದ ನಾಯಕರೆ, ಇಡೀ ಕರ್ನಾಟಕದ ವಿದ್ಯುತ್ತಿನ ಬಗ್ಗೆ ಬಹಳ ಚೆನ್ನಾಗಿ ಪ್ರಸ್ತಾಪ ಮಾಡಿದ್ದೀರಿ. ವಿದ್ಯುತ್ ಸಮಸ್ಯೆ ಇದೆ. ಎಲ್ಲಿಂದಲಾದರೂ ವಿದ್ಯುತ್ ತೆಗೆದುಕೊಂಡು ಬನ್ನಿ, ನೀರು ಎಲ್ಲಿಂದಲಾದರೂ ತನ್ನಿ ಬಂದು ನೀವು ಪ್ರಸ್ತಾಪ ಮಾಡಿದ್ದೀರಿ. ನಾವು ಏನು ಮಾಡುವುದಕ್ಕೆ ಹೊರಟಿದ್ದೇವೆ ಎನ್ನುವುದನ್ನು ನಾವು ನಿಮ್ಮ ಗಮನಕ್ಕೆ ತರುತ್ತೇನೆ. 2011–12ನೇ ಸಾಲಿನಲ್ಲಿ 1050 ಮೆಗಾವ್ಯಾಟ್ ವಿದ್ಯುತ್ತಿಗೆ ಒಟ್ಟು 3019 ಕೋಟಿ ರೂ.ಗಳನ್ನು 2012–13 ರಲ್ಲಿ ಜೂನ್ 12ನೇ ತಾರೀಖಿನವರೆಗೆ 1280 ಮೆಗಾವ್ಯಾಟ್ ವಿದ್ಯುತ್ತಿಗೆ 1159 ಕೋಟಿ ರೂ.ಗಳನ್ನು ಇದು ಅಲ್ಲದೆ ಜುಲೈ 12ರ ನಂತರ 2280 ಮೆಗಾವ್ಯಾಟ್‌ಗೆ 3373 ಕೋಟಿ ರೂ.ಗಳ ಖರೀದಿ ಮಾಡುತ್ತಿದ್ದೇವೆ. ಇದು ಅಲ್ಲದೆ ಸೆಪ್ಟೆಂಬರ್ 2012 ರ ನಂತರ 730 ಮೆಗಾವ್ಯಾಟ್‌ಗೆ ನಾವು ಈಗಾಗಲೇ ಒಪ್ಪಂದವನ್ನು ಮಾಡಿಕೊಂಡಿದ್ದೇವೆ. Peak power ಗೆ ಒಂದು 200 ಮೆಗಾವ್ಯಾಟ್‌ಗೆ

ಒಪ್ಪಂದವನ್ನು ಮಾಡಿಕೊಂಡಿದ್ದೇವೆ. ಒಂದು ನಿಮಿಷ ಈ ರೀತಿ ಆದರೆ ಹೇಗೆ? ನಾನು ಮುಗಿಸಿ ಬಿಡುತ್ತೇನೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ನಾನು ನಿಮಗೆ assist ಮಾಡುತ್ತಿದ್ದೇವೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ನಾನು ಏನು ಹೇಳುವುದಕ್ಕೆ ಹೊರಟ್ಟಿದ್ದೇನೆಂದರೆ, ನಾವು 4532 ಕೋಟಿ ರೂ.ಗಳನ್ನು ಬಳಸುವುದಕ್ಕೆ ಆಗ್ರಿಮೆಂಟ್ ಮಾಡಿಕೊಂಡು ಇಟ್ಟುಕೊಂಡಿರುತ್ತೇನೆ. ಇನ್ನು ಕೆಲವು ಖರೀದಿಯನ್ನು ಮಾಡುತ್ತಿದ್ದೇವೆ. ಅದಕ್ಕೋಸ್ಕರ ನಾನು ರಾಜ್ಯದ ಜನರಿಗೆ ಹೇಳುವುದಕ್ಕೆ ಹೊರಟಿರುವುದು ಇಷ್ಟೆ. ವಿದ್ಯುತ್‌ನ್ನು ಹಿಂದಿನ ಸರ್ಕಾರಗಳು ಉತ್ಪಾದನೆ ಮಾಡುವ ದಿಕ್ಕಿನಲ್ಲಿ ಗಮನ ಕೊಡದಿದ್ದರೂ ಕೂಡ ಈಗ ಬರ ಪರಿಸ್ಥಿತಿಯಲ್ಲಿ ನೀರು ಇಲ್ಲ. ಕೇಂದ್ರ ಸರ್ಕಾರ Coal ಅನ್ನು ಕೊಡುವುದಿಲ್ಲ. ಆದರೂ ಕೂಡ ನಿಮಗೆ ಖಂಡಿತ 'ರಾಜ್ಯದಲ್ಲಿ ವಿದ್ಯುತ್ ಅನ್ನು ಖಂಡಿತ ಕೊಡುತ್ತೇವೆ ಎನ್ನುವ ಆಶ್ವಾಸನೆ ಕೊಡುವುದಕ್ಕೋಸ್ಕರ ನಾನು ನಿಮ್ಮ ಗಮನಕ್ಕೆ ತಂದಿರುವುದು ಅಷ್ಟೆ.

ಅಧ್ಯಕ್ಷರು : ಅವರು ಉತ್ತರವನ್ನು ಕೊಡಲಿ, ನೀವು ಆಮೇಲೆ ಕೇಳಿ.

ಶ್ರೀ ಸಿದ್ದರಾಮಯ್ಯ : What is the ground reality today? ಎರಡು ಗಂಟೆ ಹಗಲಿನಲ್ಲಿ ವಿದ್ಯುತ್ ಸಿಗುತ್ತಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ನಿಮ್ಮ ಸ್ನೇಹಿತರು 4 ಗಂಟೆ ಎಂದರು. ನೀವು ಮಾನ್ಯ ರೇವಣ್ಣನವರ assistance ತೆಗೆದುಕೊಳ್ಳುತ್ತೀರೇನು? ಇತ್ತೀಚೆಗೆ ಏನಾದರೂ ಅವರ ಮಾರ್ಗದರ್ಶನಕ್ಕೆ ಹೋಗುತ್ತಿದ್ದೀರಾ? ಅವರು 4 ಗಂಟೆ ಎನ್ನುತ್ತಾರೆ. ನೀವು 2 ಗಂಟೆ ಎಂದು ಅನ್ನುತ್ತೀರಿ. ಏನು ಹೊಂದಾಣಿಕೆ ಇದು?

ಶ್ರೀ ಸಿದ್ದರಾಮಯ್ಯ : ಕೇಳಿ ಇಲ್ಲಿ ಸ್ವಲ್ಪ. ಹಗಲು ಹೊತ್ತಿನಲ್ಲಿ ನೀವು 3 ಫೇಸ್ 4 ಗಂಟೆ ಕೊಡುತ್ತೀರಿ. ಆ 4 ಗಂಟೆಯಲ್ಲಿ 2 ಗಂಟೆ ಲೋಡ್ ಶೆಡ್ಡಿಂಗ್ ಆಗುತ್ತಿದೆ. ಪವರ್ ಕಟ್ಟಾಗುತ್ತದೆ. ಬರೀ 2 ಗಂಟೆ ಮಾತ್ರ

ಸಿಗುವುದು 8 ಗಂಟೆ ಮೇಲೆ ಮತ್ತೆ 2 ಗಂಟೆ ಕೊಡುತ್ತೀರಿ. 2 ಗಂಟೆ ಮಾತ್ರ ಕರೆಂಟ್ ಸಿಗುವುದು ಅಷ್ಟೆ. ಇಷ್ಟೆಲ್ಲಾ ಪವರ್ ತೆಗೆದುಕೊಂಡರೂ ಕೂಡ position is not improved.

ಶ್ರೀ ಕೆ.ಎಸ್. ಈಶ್ವರಪ್ಪ : ಒಂದು ಕಡೆ ಬರ ನೀರು ಇಲ್ಲ. ಕೇಂದ್ರ ಸರ್ಕಾರ ಕೋಲ್ ಕೊಡುತ್ತಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಕೇಂದ್ರ ಸರ್ಕಾರ ಕೋಲ್ ಕೊಡುತ್ತಿಲ್ಲವೆನ್ನುವುದು ಇಲ್ಲಿ ಉತ್ತರ ಅಲ್ಲ. Go and sit before the Power Minister.

ಶ್ರೀ ಕೆ.ಎಸ್. ಈಶ್ವರಪ್ಪ : ಅದು ಎಲ್ಲಾ ಮಾಡಿ ದುಡ್ಡು ಕೊಟ್ಟು ಖರೀದಿ ಮಾಡುತ್ತೇವೆಂದು ಹೇಳುತ್ತಿದ್ದೇವೆ.

ಶ್ರೀ ಸಿದ್ದರಾಮಯ್ಯ : ಅದನ್ನು ನಿಮ್ಮ ಎಂ.ಪಿ.ಗಳಿಗೆ ಪರಿಸ್ಥಿತಿಯನು ತಿಳಿಸಿ ಹೇಳಿ. ಅದು ನಮ್ಮ ಜವಾಬ್ದಾರಿ ಅಲ್ಲ. I am not in the Parliament, I am representing Karnataka People. It is your responsibility to get the coal. ಅದು ನಮ್ಮ ಜವಾಬ್ದಾರಿ ಅಲ್ಲ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : 10 ಬಾರಿ ಹೋಗಿ ಬರುತ್ತಿದ್ದಾರೆ ವಿದ್ಯುತ್ ಸಚಿವರು.

ಶ್ರೀ ಸಿದ್ದರಾಮಯ್ಯ : 100 ಸಲ ಹೋಗಿ ಬನ್ನಿ ನಮಗೇನು?

ಶ್ರೀ ಕೆ.ಎಸ್. ಈಶ್ವರಪ್ಪ : 100 ಸಲ ಹೋಗುತ್ತೇನೆ. ಎಷ್ಟು ಸಲ ಹೋದರು ಕೇಂದ್ರ ಸರ್ಕಾರ ಕಿವುಡು ಆಗಿ ಕುಳಿತುಕೊಂಡರೆ ಏನು ಮಾಡೋಣ? ನೀರು ಇಲ್ಲ, ಕೋಲ್ ಇಲ್ಲ, ಆದರೂ ಕೂಡ ವಿದ್ಯುತ್ ಖರೀದಿ ಮಾಡುತ್ತಿದ್ದೇವೆಂದು ನಾನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಸರ್ಕಾರ ಬರಗಾಲದ ಬಗ್ಗೆ power improvement ಬಗ್ಗೆ ಏನು ಕ್ರಮ ಕೈಗೊಂಡಿಲ್ಲ.

(ಗೊಂದಲ)

ಅಧ್ಯಕ್ಷರು : ಅವರಿಗೆ ಕಂಪ್ಲೀಟ್ ಮಾಡುವುದಕ್ಕೆ ಬಿಡಿ.

ಶ್ರೀ ಕೆ.ಎಸ್. ಈಶ್ವರಪ್ಪ ; ಮೂರು ದಿವಸದಿಂದ ಅವರದ್ದು ಇದೇ ಭಾಷಣ. ವಿದ್ಯುತ್ ಖರೀದಿ ಮಾಡುತ್ತಿದ್ದೇವೆಂದು ಉತ್ತರವನ್ನು ಕೊಟ್ಟರೂ ಸಹ ವಿದ್ಯುತ್ ಬಗ್ಗೆ ನೀವು ಗಮನ ಕೊಡುತ್ತಿಲ್ಲವೆಂದು ಹೇಳಿದರೆ ನಾನು ಏನು ಹೇಳಲಿ? ನಾವು ಎಷ್ಟು ಕೋಟಿ ರೂ.ಗಳನ್ನು ಖರೀದಿ ಮಾಡುತ್ತಿದ್ದೇವೆ, ಎಷ್ಟು ಮೆಗಾವ್ಯಾಟ್ ಖರೀದಿ ಮಾಡುತ್ತಿದ್ದೇವೆ.

ಶ್ರೀ ಸಿದ್ದರಾಮಯ್ಯ : What is the improvement in the .....

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ನಿಮಗೆ ಇದಕ್ಕಿಂತ ಇನ್ನು ಏನು ಹೇಳುವುದು? ನಿಮಗೆ ಕರೆಂಟ್ ಶಾಕ್ ಹೊಡೆಯಬೇಕು. ಆವಾಗ ನಿಮಗೆ ಗೊತ್ತಾಗುವುದು

(ಗೊಂದಲ)

ಶ್ರೀ ಸಿದ್ದರಾಮಯ್ಯ : ಏನೂ ಶಾಕ್ ಹೊಡೆಯುವುದಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ಕೆಲವರಿಗೆ ಶಾಕ್ ಹೊಡೆಯುವುದು ಗೊತ್ತಾಗುವುದಿಲ್ಲ.

ಶ್ರೀ ಸಿದ್ದರಾಮಯ್ಯ : 5 wire ಹಿಡಿದುಕೊಂಡರೂ shock ಹೊಡೆಯುವುದಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ಕೆಲವು ವ್ಯಕ್ತಿಗಳು ಎಷ್ಟು phase wire ಹಿಡಿದುಕೊಂಡರೂ ಸಾಯುವುದಿಲ್ಲ. ನಾವು ಏನೂ ಮಾಡುವುದಕ್ಕಾಗವುದಿಲ್ಲ. ಕೆಲವರು high tension wire ಮುಟ್ಟಿದರೂ ಸಾಯುವುದಿಲ್ಲ. ಇದಕ್ಕೆ ನಾವು ಏನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಸಿದ್ದರಾಮಯ್ಯ : ಏಕೆ ಸಾಯುವುದಿಲ್ಲವೆಂದರೆ ಅವರಿಗೆ ದೈವ ಬಲ ಇದೆ. ನಿಮ್ಮ ಹತ್ತಿರ ಪವರ್ ಇಲ್ಲ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ ; ನೀವು ಪವರ್ ಕಳೆದುಕೊಂಡ ಮೇಲೆ ಏಕೆ ಈ ರೀತಿ ಮಾತನಾಡುತ್ತಿದ್ದೀರಿ?

ಶ್ರೀ ಸಿದ್ದರಾಮಯ್ಯ : ಏನು?

ಶ್ರೀ ಕೆ.ಎಸ್. ಈಶ್ವರಪ್ಪ : ನೀವು ಪವರ್ ಕಳೆದುಕೊಂಡ ಮೇಲೆ ಜಾಸ್ತಿ ಮಾತನಾಡುತ್ತಿರುವುದು.

ಶ್ರೀ ಸಿದ್ದರಾಮಯ್ಯ : ನೀವು ಪವರ್ ಇದ್ದು power-less ಆಗಿದ್ದೀರಿ.

ಶ್ರೀ ಕೆ.ಎಸ್. ಈಶ್ವರಪ್ಪ : ನಿಮಗೆ ಹಾಗೆ ಅನಿಸಿ ಬಿಟ್ಟಿದೆ.

ಶ್ರೀ ಸಿದ್ದರಾಮಯ್ಯ ; ಜನ ಪವರ್ ಕೊಟ್ಟರೂ you don't have power.

ಶ್ರೀ ಕೆ.ಎಸ್. ಈಶ್ವರಪ್ಪ : ಎಲ್ಲರೂ ಒಟ್ಟಾಗಿ ಹೋಗುವುದರಿಂದ ನಿಮಗೆ ಬಹಳ ಸಮಸ್ಯೆ ಆಗಿ ಬಿಟ್ಟಿದೆ. ನೀವು ಒಳಗೊಳಗೆ ಮಾಡಕೊಂಡಿದ್ದೀರಿ. ನಿಮ್ಮ ಸಮಸ್ಯೆ ಬೇರೆ. ನಮ್ಮ ಸಮಸ್ಯೆ ಬೇರೆ ನಿಮ್ಮದಂತೂ ಪರಿಹಾರವಾಗುವುದಿಲ್ಲ. ನಾವು ಸಮಸ್ಯೆಯನ್ನು ಪರಿಹಾರ ಮಾಡಿಕೊಳ್ಳುತ್ತೇವೆ.

ಶ್ರೀ ಸಿದ್ದರಾಮಯ್ಯ ; ನಿಮ್ಮ ಸಮಸ್ಯೆ ಬೇರೆ, ಮಾನ್ಯ ಯಡಿಯೂರಪ್ಪನವರ ಸಮಸ್ಯೆ ಬೇರೆ.

ಶ್ರೀ ಕೆ.ಎಸ್. ಈಶ್ವರಪ್ಪ : ಅವರು ಸಮಸ್ಯೆ ಬಗ್ಗೆ ಮಾತನಾಡಿದಾಗ ಚಪ್ಪಾಳೆ ಹೊಡೆಯುತ್ತೀರಿ. ಆದರ ಅದು ನಮಗೆ ಮಾರ್ಗದರ್ಶನ ಎಂದು ನಾವು ಭಾವಿಸುತ್ತೇನೆ. **ಶ್ರೀ ಸಿದ್ದರಾಮಯ್ಯ** : ಮಾನ್ಯ ಯಡಿಯೂಪ್ಪನವರೆ, ನೀವು ಕೇಳಿರುವುದಕ್ಕೆ ಒಂದಕ್ಕೂ ಇವರು ಉತ್ತರವನ್ನು ಕೊಟ್ಟಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ಇವರು ಮತ್ತೆ ಮಾನ್ಯ ಯಡಿಯೂರಪ್ಪನವರ ಹತ್ತಿರ ಸುಳ್ಳು ಹೇಳುತ್ತಾರೆ. ಯಡಿಯೂರಪ್ಪನವರಿಗೆ ಈಶ್ವರಪ್ಪ ಸತ್ಯ ಹೇಳುತ್ತಾರೋ, ಸಿದ್ದರಾಮಯ್ಯ ಸತ್ಯ ಹೇಳುತ್ತಾರೋ ಎನ್ನುವುದು ಗೊತ್ತಿದೆ.

ಶ್ರೀ ಸಿದ್ದರಾಮಯ್ಯ ; ನಾವು ಹೇಳಿರುವುದಕ್ಕೂ ನೀವು ಹೇಳಿರುವುದಕ್ಕೂ ಒಂದಕ್ಕೂ ಉತ್ತರವಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಮ್ಮ ಈ ಮನೆಯ ಸದಸ್ಯರು, ಸನ್ಮಾನ್ಯ ಮುಖ್ಯಮಂತ್ರಿಗಳು ನಿಮ್ಮೆಲ್ಲರ ಭಾವನೆಗಳನ್ನು ಅರ್ಥ

ಮಾಡಿಕೊಂಡು ನಾವು ಕೊಟ್ಟಿರುವ ಸಲಹೆಗಳನ್ನು ಕಣ್ಣುಮುಂದೆ ಇಟ್ಟುಕೊಂಡು ಸ್ಪಷ್ಟವಾದ ಕೆಲವು ಉತ್ತರಗಳನ್ನು ಕೊಡುತ್ತಾರೆ. ಅದು ಆದ ಮೇಲೆ ನೀವು clarification ಕೇಳಿ. ಅವರು ಉತ್ತರ ಕೊಡುವವರೆಗೂ ಕಾಯದಿದ್ದರೆ ಹೇಗೆ ? ಕಂದಾಯ ಸಚಿವರು ಅವರು ಏನು ಬೇಕು ಉತ್ತರ ಕೊಡುತ್ತಿದ್ದಾರೆ. ಪವರ್ ಬಗ್ಗೆ ವಾಸ್ತವಿಕವಾದ ವಿಷಯವನ್ನು ಅವರು ಹೇಳುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ. ನೀವೇ ಮೇಜು ತಟ್ಟಿ ಸ್ವಾಗತ ಮಾಡುತ್ತೀರಿ. ನೀವು ಅಲ್ಲಿಯವರೆಗೆ wait ಮಾಡಿ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ನಾನು ಅದಕ್ಕೇ ಹೇಳಿದ್ದು. ಮಾನ್ಯ ವಿರೋಧ ಪಕ್ಷದ ನಾಯಕರೆ, ಮಾನ್ಯ ಯಡಿಯೂರಪ್ಪನವರನ್ನು ನಾನು ಬಹಳ ವರ್ಷಗಳಿಂದ ನೋಡಿದ್ದೇನೆ. ನಾನು 35 ವರ್ಷದಿಂದ ಅವರ ಆಶ್ರಯದಲ್ಲಿ ಬೆಳೆದಿದ್ದೇನೆ. ಅವರು ವಿರೋಧ ಪಕ್ಷದಲ್ಲಿ ಇದ್ದಾಗಿನಿಂದ ಹಿಡಿದು ಮುಖ್ಯ ಮಂತ್ರಿಯಾದಾಗಲೂ ರೈತರ ಬಗ್ಗೆ ಕಳಕಳಿ ಇದ್ದದ್ದನ್ನು ನೋಡಿದ್ದೇವೆ. ಇದರ ಬಗ್ಗೆ ಏನೂ ತಕರಾರು ಇಲ್ಲ. ಅವರು ಕೊಟ್ಟಂಥ ಮಾರ್ಗದರ್ಶನದಲ್ಲಿ ನಾವು ಏನೇನು ಮಾಡಿದ್ದೇವೆ ಎನ್ನುವಂಥ ಅಂಶವನ್ನು ನಾನು ಹೇಳಿದ್ದೇನೆ. ಅವರು ನಿನ್ನೆ ಕಳಕಳಿಯಿಂದ ಮಾತನಾಡಿರುವುದನ್ನು ನೀವು ತಪ್ಪು ತಿಳಿದುಕೊಂಡಿರಿ. ಕೆಲವು ಪತ್ರಿಕೆಗಳಲ್ಲಿ ಬಂದಿದೆ. ಅದನ್ನು ನಾವು ಓದಿದ್ದೀರಿ. ನಾನು ತುಂಬಾ ಸ್ಪಷ್ಟವಾಗಿ ಹೇಳುತ್ತೇನೆ. ಈಗ ನಾವು ಅವರ ಮಾರ್ಗದರ್ಶನದ ಮುಖಾಂತರವೇ ತುಂಬಾ ಸ್ಪಷ್ಟವಾಗಿ ರಾಜ್ಯದ ಜನರಿಗೆ ಏನೇನು ಅನುಕೂಲ ಮಾಡಬೇಕು ಎನ್ನುವ ತೀರ್ಮಾನವನ್ನು ಮಾಡಿದ್ದೇವೆ. ಆ ದಿಕ್ಕಿನಲ್ಲಿ ಹೋಗುತ್ತಿದ್ದೇವೆ.

ಶ್ರೀ ಸಿದ್ದರಾಮಯ್ಯ : ಈ ಉತ್ತರವನ್ನು ಅವರ ಜೊತೆಯಲ್ಲಿಯೇ? ಚರ್ಚೆ ಮಾಡಿಕೊಂಡು ಬಂದಿರಾ?

ಶ್ರೀ ಕೆ.ಎಸ್. ಈಶ್ವರಪ್ಪ : ನಾನು ಕಂದಾಯ ಮಂತ್ರಿ, ಚರ್ಚೆ ಮಾಡಬೇಕೇನು ?

ಶ್ರೀ ಸಿದ್ದರಾಮಯ್ಯ : ಅವರು ಸೀನಿಯರ್ ಇದ್ದಾರೆ ಅವರ ಮಾರ್ಗದರ್ಶನ ತೆಗೆದುಕೊಂಡಿದ್ದೀರಾ ?

ಶ್ರೀ ಕೆ.ಎಸ್. ಈಶ್ವರಪ್ಪ : ಅವರ ಮಾರ್ಗದರ್ಶನ ಪ್ರತಿ ಸ್ಟೇಜಿಗೂ ಬೇಕಾಗಿಲ್ಲ.

ಶ್ರೀ ಸಿದ್ದರಾಮಯ್ಯ : ಅವರ ಜೊತೆಯಲ್ಲಿ ಚರ್ಚೆ ಮಾಡಿಕೊಂಡು ಬಂದಿರುತ್ತೀರಾ?

ಶ್ರೀ ಕೆ.ಎಸ್. ಈಶ್ವರಪ್ಪ : ಅವರು ನಮ್ಮ ಇಡೀ ಜೀವನಕ್ಕೆ ಮಾರ್ಗದರ್ಶನ. ಪ್ರತಿ ಸ್ಟೇಜಿಗೂ ಬೇಕಾಗಿಲ್ಲ. ಅದಕ್ಕಾಗಿ ನಾನು ಹೇಳುತ್ತಿದ್ದೇನೆ. ಕರ್ನಾಟಕ ರಾಜ್ಯದ ರೈತರಿಗೆ ಅವರ ಕೊನೆಯ ಉಸಿರು ಇರುವ ತನಕ ರೈತರಿಗೆ ಕಲ್ಯಾಣವಾಗಬೇಕು ಎಂದೂ ಕೊಟ್ಟಂಥ ಸಲಹೆಯನ್ನು ನಿನ್ನೆ ದಿವಸ ಅದನ್ನು ದುರುಪಯೋಗ ಮಾಡಿಕೊಂಡು ದಾರಿ ತಪ್ಪಿಸಿ ಪತ್ರಿಕೆಯ ಮುಖಾಂತರ ಇಡೀ ರಾಜ್ಯದ ಜನರಿಗೆ ....

ಶ್ರೀ ಸಿದ್ದರಾಮಯ್ಯ : ಯಡಿಯೂರಪ್ಪನವರೇ, ನಾವು ದಾರಿ ತಪ್ಪಿಸಿದ್ದೇವೆಯೇ ನಿಮಗೆ?

(ಗೊಂದಲ)

ಅಧ್ಯಕ್ಷರು : ಅವರಿಗೆ ನೀವು ಕಂಪ್ಲೀಟ್ ಮಾಡುವುದಕ್ಕೆ ಅವಕಾಶ ಮಾಡಿ ಕೊಡಿ.

ಡಾ॥ ಹೆಚ್.ಸಿ. ಮಹದೇವಪ್ಪ : ಮಾನ್ಯ ಅಧ್ಯಕ್ಷರೆ ....

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಶ್ರೀ ಮಹದೇವಪ್ಪನವರೆ, ನೀವು ಮತ್ತು ಸಿದ್ದರಾಮಯ್ಯನವರು ಹೇಗೆ ಒಟ್ಟೊಟ್ಟಾಗಿ ರಾಜ್ಯದಲ್ಲಿ ಮುಂದುವರೆಯಬೇಕೆಂದು ಇಷ್ಟಪಡುತ್ತಿರೋ ನಾವು ಮತ್ತು ಯಡಿಯೂರಪ್ಪನವರೂ ಹಾಗೆ.

ಡಾ॥ ಹೆಚ್.ಸಿ. ಮಹದೇವಪ್ಪ : ಮುಂದುರೆಯಲಿ.

ಶ್ರೀ ಕೆ.ಎಸ್. ಈಶ್ವರಪ್ಪ : ಆದರೆ ಅದು ನಿಮಗೆ ಇಷ್ಟ ಇಲ್ಲವಲ್ಲಾ?

ಶ್ರೀ ಸಿದ್ದರಾಮಯ್ಯ : I wish you, ಆದರೆ ನೀವು ಜೊತೆಯಲ್ಲಿ ಇಲ್ಲಾ ಅಷ್ಟೆ.

ಶ್ರೀ ಕೆ.ಎಸ್. ಈಶ್ವರಪ್ಪ : ತಾವು ಎಷ್ಟರ ಮಟ್ಟಿಗೆ ಒಟ್ಟಿಗೆ ಇದ್ದೀರಿ. ಎಷ್ಟರಮಟ್ಟಿಗೆ ಒಟ್ಟಿಗೆ ಇಲ್ಲ. ನಮಗೆ ಇದು ಗೊತ್ತಾಗುವುದಿಲ್ಲ. ಎಲ್ಲರೂ

ಗೊಂದಲ ಮಾಡುತ್ತಿದ್ದಾರೆ. ಮಾನ್ಯ ಸಿದ್ದರಾಮಯ್ಯನವರೆ ಅವರಿಗೆ ಸ್ವಲ್ಪ ಹೇಳಿ. ಅವರು ನಿಮ್ಮ ಮಾತು ಕೇಳುವುದಿಲ್ಲ. ಮಾನ್ಯ ರೇವಣ್ಣನವರು ನಿಮ್ಮ ಮಾತು ಕೇಳುತ್ತಾರೆ. ಬೇರೆ ಯಾರೂ ನಿಮ್ಮ ಮಾತು ಕೇಳುವುದಿಲ್ಲ.

ಶ್ರೀ ಸಿದ್ದರಾಮಯ್ಯ : ನೋಡಿ ಜೆಡಿ(ಎಸ್) ನವರು ನಮ್ಮ ಮಾತು ಕೇಳಬೇಕಾದರೆ, ನಿಮ್ಮ ಒಬ್ಬರನ್ನು ಬಿಟ್ಟು ಎಲ್ಲರೂ ನಮ್ಮ ಮಾತು ಕೇಳುತ್ತಾರೆ.

ಶ್ರೀ ಕೆ.ಎಸ್. ಈಶ್ವರಪ್ಪ : ಹಾಗಾದರೆ ಕೇಳಿ, ಯಾರೂ ನಿಮ್ಮ ಮಾತು ಕೇಳುವುದಿಲ್ಲ. ಒಬ್ಬರಾದರೂ ನಿಮ್ಮ ಮಾತು ಕೇಳುತ್ತಾರಾ ? ಮಾನ್ಯ ಅಧ್ಯಕ್ಷರೆ, ಆಕ್ರಮ ಯೋಜನೆಯಲ್ಲಿ 2009 ರಲ್ಲಿ ಪ್ರವಾಹ ಬಂದ ಸಂದರ್ಭದಲ್ಲಿ ನಿರಾಶ್ರಿತರಾದವರಿಗೆ ಶಾಶ್ವತವಾದ ಪುನರ್ ವ್ಯವಸ್ಥೆ ಕಲ್ಪಿಸುವ ದೃಷ್ಟಿಯಿಂದ ಆಶ್ರಯ ಯೋಜನೆ ಅಡಿಯಲ್ಲಿ ಗ್ರಾಮಗಳನ್ನು ಸ್ಥಳಾಂತರಿಸುವ ಕಾರ್ಯಕ್ರಮವನ್ನು ಕೈಗೊಂಡಿದ್ದು ಪ್ರಗತಿ ಈ ರೀತಿ ಇದೆ. ಸ್ಥಳಾಂತರಗೊಳ್ಳುತ್ತಿರುವ ಒಟ್ಟು ಗ್ರಾಮಗಳು 289, ಭಾಗಶಃ ಸ್ಥಳಾಂತರಗೊಳ್ಳುತ್ತಿರುವ ಒಟ್ಟು ಗ್ರಾಮಗಳು 140, ಪೂರ್ಣ ಸ್ಥಳಾಂತರಗೊಳ್ಳುತ್ತಿರುವ ಒಟ್ಟು ಗ್ರಾಮಗಳು 149 ಮನೆಯ ಒಟ್ಟು ಸಂಖ್ಯೆ 57355, ಕಟ್ಟಡ ಪೂರ್ಣಗೊಂಡಿರುವ ಮನೆಗಳ ಸಂಖ್ಯೆ 56388, ಅಪೂರ್ಣವಾದ ಮನೆಗಳು 4043, ಪೂರ್ಣಗೊಂಡಿರುವ ಮನೆಗಳ ಸಂಖ್ಯೆ 49410, ಫಲಾನುಭವಿಗಳಿಗೆ ಹಸ್ತಾಂತರಗೊಂಡ ಮನೆಯಲ್ಲಿ 31660. ಎಲ್ಲಾ ಶಾಸಕರು ಕರ್ನಾಟಕ ರಾಜ್ಯದಲ್ಲಿ ಬರ ಪೀಡಿತ ಪ್ರದೇಶದಲ್ಲಿ ಏನು ಆಗಬೇಕೆನ್ನುವ ಅವರ ಅಪೇಕ್ಷೆ ಇದೆ. ಆ ದಿಕ್ಕಿನಲ್ಲಿ ಸರ್ಕಾರ ಸ್ಪಂದಿಸುತ್ತದೆ ಎನ್ನುವಂಥ ಅಂಶವನ್ನು ತುಂಬಾ ಸ್ಪಷ್ಟವಾಗಿ ಹೇಳುತ್ತೇನೆ. ಬರ ಪರಿಹಾರ ಎಲ್ಲಿ ಏನು ಮಾಡಬೇಕು ಎನ್ನುವುದರ ಬಗ್ಗೆ ವಿರೋಧ ಪಕ್ಷ ಮತ್ತು ಆಡಳಿತ ಪಕ್ಷ ಒಟ್ಟಿಗೆ ಕುಳಿತುಕೊಂಡು ಇನ್ನು ಏನು ಮಾಡಬೇಕೆನ್ನುವುದರ ಬಗ್ಗೆ ಚರ್ಚೆ ಮಾಡಿ ರಾಜ್ಯದ ಜನರ ಬರ ಪರಿಸ್ಥಿತಿಯನ್ನು ನಿಭಾಯಿಸುವ ದಿಕ್ಕಿನಲ್ಲಿ ಸರ್ಕಾರ ಪೂರ್ಣ ಪ್ರಮಾಣದ ಪ್ರಯತ್ನ ಮಾಡುತ್ತದೆ ಎನ್ನುವ ಅಂಶವನ್ನು ನಾನು ತಿಳಿಸುತ್ತಿದ್ದೇನೆ. ಮಾನ್ಯ ಹಣಕಾಸಿನ ಸಚಿವರಿಗ

ಆಗಿರುವಂಥ ಮಾನ್ಯ ಮುಖ್ಯಮಂತ್ರಿಗಳು ವಿಷಯವನ್ನು ಮುಂದುವರೆಸುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಮಾನ್ಯ ಈಶ್ವರಪ್ಪನವರು ಕಂದಾಯ ಮತ್ತು RDPR ಎರಡೂ ಇಲಾಖೆಯನ್ನು ನಿರ್ವಹಣೆ ಮಾಡುತ್ತಿರುವುದರಿಂದ ಎಲ್ಲಾ ಅಂಕಿ-ಅಂಶ ಮತ್ತು detail ಆದ ಉತ್ತರವನ್ನು ಕೊಟ್ಟಿದ್ದಾರೆ. ನಾನು ಹೆಚ್ಚೆ ಬೆಳಸಲಿಕ್ಕೆ ಹೋಗುವುದಿಲ್ಲ. ಮಾನ್ಯ ಪ್ರತಿಪಕ್ಷದ ನಾಯಕರಾದ ಸಿದ್ದರಾಮಯ್ಯನವರು, ಉಪನಾಯಕರಾದ ಮಾನ್ಯ ಟಿ.ಬಿ. ಜಯಚಂದ್ರರವರು ಮತ್ತು ಮಾಜಿ ಮುಖ್ಯಮಂತ್ರಿಗಳಾದ ಮಾನ್ಯ ಯಡಿಯೂರಪ್ಪನವರು ಮತ್ತು ಬಹಳಷ್ಟು ಜನ ಶಾಸಕರು ಇವತ್ತು ಬರದ ವಿಚಾರ ಬಂದಂತಹ ಸಂದರ್ಭದಲ್ಲಿ ಬಹಳ detail ಆಗಿ ಚರ್ಚೆ ಮಾಡಿದ್ದಾರೆ ಮತ್ತು ತಮ್ಮ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. 1971ನೇ ಇಸವಿಯಲ್ಲಿ ಅಂದರೆ 30–40 ವರ್ಷಗಳ ಹಿಂದೆ ಏನು ಬರ ಬಂದಿತ್ತು ಆದಾದ ಮೇಲೆ ಅದಕ್ಕಿಂತ ಹೆಚ್ಚು ಭೀಕರತೆಯ ಬರ ಇವತ್ತು ಬಂದಿದೆ. ಈಗ ಅಲ್ಲಲ್ಲಿ ಒಂದಿಷ್ಟು ಮಳೆ ಆಗುತ್ತಿದೆ ಅದೇನೂ satisfactory ಚಿಲ್ಲ ಇನ್ನೊಂದು ವಾರ, 6–10 ದಿವಸ ಮಳೆ ಬರದೇ ಹೋದರೆ, ರೈತರು ಇನ್ನೂ ಹೆಚ್ಚು ತೊಂದರೆಗೆ ಒಳಗಾಗುತ್ತಾರೆ ಮತ್ತು ಗ್ರಾಮೀಣ ಭಾಗದಲ್ಲಿಯೂ ಕುಡಿಯುವ ನೀರಿನ ತೊಂದರೆ ಇವೆಲ್ಲಾ ನಾವು ಅನುಭವಿಸುತ್ತೇವೆ. ಬಹಳ severe drought ಅನ್ನು face ಮಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದ. ಏಕೆಂದರೆ ನಿಸರ್ಗ ಕೈ ಕೊಟ್ಟರೆ ಸರ್ಕಾರ, ನಾವು ಎಲ್ಲವನ್ನೂ ಮಾಡುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ಇದ್ದಂತಹ ವ್ಯವಸ್ಥೆಯಲ್ಲಿ ಯಾವ ರೀತಿಯಲ್ಲಿ ನಾವು ಬರಗಾಲ ಕಾಮಗಾರಿ ಇರಬಹುದು. drinking water facility ಕೊಡುವಂಥದ್ದು ಇರಬಹುದು. ಮೇವಿನ ಸರಬರಾಜು ಇರಬಹುದು ಮತ್ತು ಉದ್ಯೋಗ ಕೊಡುವಂಥದ್ದು ಇರಬಹುದು. ಇವುಗಳನ್ನು ಯಾವ್ಯಾವ ಹಂತದಲ್ಲಿ ಎಷ್ಟು ಪ್ರಮಾಣದಲ್ಲಿ ಮಾಡಬೇಕೆನ್ನುವುದು ಮತ್ತು ಉತ್ತಮವಾಗಿ ದಕ್ಷವಾಗಿ ನಾವು ಮಾಡಬೇಕಾಗಿರುತ್ತದೆ. ಕಳೆದ ಆಗಸ್ಟ್-ಸೆಪ್ಟೆಂಬರ್‌ನಿಂದ ನಾವು ಅನುಭವಿಸುತ್ತಿದ್ದೇವೆ. ಕಳೆದ ವರ್ಷವೂ ಏನೂ ಮಳೆ ಆಗಲಿಲ್ಲ.

ಅವತ್ತೂ ಬರಗಾಲ. ಅದೇ ಪರಿಸ್ಥಿತಿ ಇವತ್ತು ಮುಂದುವರೆದಿದೆ. ಹೀಗಾಗಿ ಕಳೆದ 5–6 ತಿಂಗಳಿನಲ್ಲಿ ರಾಜ್ಯ ಸರ್ಕಾರ ಬರಗಾಲ ಕೆಲಸ–ಕಾರ್ಯಗಳನ್ನು ಉದ್ಯೋಗ ಕೊಡುವಂಥದ್ದು ಇರಬಹುದು. drinking water supply ಮಾಡುವಂಥದ್ದು ಇರಬಹುದು. ಯುದ್ಧೋಪಾದಿಯಲ್ಲಿ ಮಾಡುತ್ತಿದ್ದೇವೆ. ನಮ್ಮ ಜಿಲ್ಲಾ ಉಸ್ತುವಾರಿ ಮಂತ್ರಿಗಳೂ ಸಹಿತ ಪ್ರತಿಯೊಂದು ಜಿಲ್ಲೆಗೆ ಹೋಗಿ ಬರಗಾಲ ವಿಷಯಕ್ಕೆ ಸಂಬಂಧಪಟ್ಟಂತೆ ಸಭೆಯನ್ನು ಮಾಡಿದ್ದಾರೆ. review ಮಾಡಿದ್ದಾರೆ. inspection ಮಾಡಿದ್ದಾರೆ ಮತ್ತು ಹಿಂದೆ ನನ್ನ ನೇತೃತ್ವದಲ್ಲಿ ಹಾಗೂ ಮಾನ್ಯ ಅಶೋಕ್‌ರವರ ನೇತೃತ್ವದಲ್ಲಿ, ಮಾನ್ಯ ಈಶ್ವರಪ್ಪನವರ ನೇತೃತ್ವದಲ್ಲಿ ಈ ರೀತಿ 3–4 team ಗಳನ್ನು ಮಾಡಿಕೊಂಡು 3–4 ಜಿಲ್ಲೆಗೆ ಪ್ರತಿಯೊಂದು team ಹೋಗಿ ಅಲ್ಲಿಯೂ ಸಹ ನಾವು review ಮಾಡಿದ್ದೇವೆ. ಅಲ್ಲಿ ಸಾಕಷ್ಟು ಕಾರ್ಯಕ್ಷಮತೆಯನ್ನು ಹೆಚ್ಚು ಮಾಡುವಂಥದ್ದು, ಇನ್ನೂ ಹೆಚ್ಚು ಚುರುಕಾಗಿ ಕೆಲಸ ಮಾಡುವಂಥದ್ದು, ಬಿಜಾಪೂರದಲ್ಲಿ ಎಷ್ಟೋ ಗೋಶಾಲೆಗಳನ್ನು ಬಿಟ್ಟುಕೊಟ್ಟಿದ್ದೇವೆ. ಬಹುಶಃ ಮಾನ್ಯ ಸಿದ್ದರಾಮಯ್ಯನವರಿಗೆ ಗೊತ್ತಿದೆ ಅವರು ಎಲ್ಲಾ ಕಡೆ ಹೋಗಿ ಬಂದಿದ್ದಾರೆ. ಬಿಜಾಪುರ ಮತ್ತು ಅಥಣಿ ಕಡೆ ಗೋಶಾಲೆಯನ್ನು ಮಾಡಿದ್ದೇವೆ. ಒಂದೊಂದು ಗೋಶಾಲೆಯಲ್ಲಿ ಸಾವಿರಾರು ದನಕರುಗಳು, ಜಾನುವಾರುಗಳು ಇವೆ. ಬಿಜಾಪುರ ಜಿಲ್ಲೆಯ ಇಂಡಿ ಹತ್ತಿರ ಸಾವಿರಾರು ದನಕರುಗಳನ್ನು ರೈತರು ಬಿಟ್ಟಿರುವುದನ್ನು ನಾವು ನೋಡಿದ್ದೇವೆ. ಇಲ್ಲಿಯವರೆಗೂ 112 ಗೋಶಾಲೆಗಳನ್ನು ಮಾಡಿದ್ದೇವೆ. ಇವತ್ತು ಇನ್ನೂ ಹೆಚ್ಚು ಬೇಡಿಕೆ ಇದೆ. ಎಲ್ಲಾ ಜಿಲ್ಲಾಧಿಕಾರಿಗಳಿಗೆ, CEO ಗಳಿಗೆ, ಎಲ್ಲೆಲ್ಲಿ ಗೋಶಾಲೆಗಳನ್ನು ಮಾಡುವಂಥದ್ದು ಅವಶ್ಯಕತೆ ಇದೆ. ಅಲ್ಲಿ ತಕ್ಷಣವೇ ಗೋಶಾಲೆಗಳನ್ನು ಮಾಡಿ ಎಂದು direction ಕೊಟ್ಟಿದ್ದೇವೆ. ಯಾವುದೇ ರೀತಿಯ ಹಣ ಕೊರತೆ ಇಲ್ಲ. ನಾವು ನಿನ್ನೆ ಮತ್ತೆ ಸಭೆ ಸೇರಿ, ಇಲ್ಲಿ ನಿಮ್ಮ ಭಾವನೆಗಳನ್ನು ಅರ್ಥ ಮಾಡಿಕೊಂಡು ತಕ್ಷಣವೇ 90 ಗೋಶಾಲೆಗಳನ್ನು ನಿರ್ಮಾಣ ಮಾಡಬೇಕೆಂದು ನಿರ್ಧಾರ ತೆಗೆದುಕೊಂಡಿದ್ದೇವೆ. 112 ಗೋಶಾಲೆಗಳಿವೆ ಮತ್ತೆ 90 ಗೋಶಾಲೆಗಳನ್ನು ಮಾಡುತ್ತಿದ್ದೇವೆ. ಈ ರೀತಿ

ಇವತ್ತು ಈ ಕಾರ್ಯಕ್ರಮವನ್ನು ಯಾವ ರೀತಿ ಇನ್ನೂ ಹೆಚ್ಚು ದಕ್ಷತೆಯಲ್ಲಿ ಮಾಡಬೇಕು ಆ ಪ್ರಯತ್ನ ನಾವು ಮಾಡುತ್ತಿದ್ದೇವೆ.

ಉದ್ಯೋಗ ಖಾತ್ರಿಯ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ. ಇವತ್ತು ವಲಸೆ ಹೋಗುವಂಥದ್ದನ್ನು ನಾವು ನೋಡುತ್ತಿದ್ದೇವೆ. 20–30 ವರ್ಷಗಳ ಹಿಂದೆ ಯಾವ ಪರಿಸ್ಥಿತಿ ಇತ್ತು. ಇವತ್ತು ಹೇಗಿದೆ ಎನ್ನುವುದನ್ನು ನೋಡುತ್ತಿದ್ದೇವೆ. ಉದ್ಯೋಗ ಖಾತ್ರಿ ಯೋಜನೆ ಕೇಂದ್ರ ಸರ್ಕಾರದ ಯೋಜನೆ. ಬಹಳ ಉತ್ತಮವಾದಂತಹ ಯೋಜನೆ. ನಿಜವಾಗಿಯೂ ಉದ್ಯೋಗ ಖಾತ್ರಿ ಯೋಜನೆ ಇಲ್ಲದಿದ್ದರೆ ನಾವು ಬರಗಾಲ ಕಾಮಗಾರಿಗಳ ಸಲುವಾಗಿ ಎಷ್ಟೊಂದು ಹಣ ಕೊಡಬೇಕಾಗಿತ್ತು ಎನ್ನುವುದನ್ನು ನೀವು ಅರ್ಥ ಮಾಡಿಕೊಳ್ಳಿ. ಕೆಲವು ಕಡೆ Action Plan ಆಗಿಲ್ಲವೆನ್ನುವ ಭಾವನೆ ಇದೆ. ಬಹಳಷ್ಟು ಕಡೆ ಆಗಿದೆ ಎನ್ನುವುದನ್ನು ನಾನು ಹೇಳಿದ್ದೇನೆ. ಹೀಗಾಗಿ ಇನ್ನೂ ಏನು ಸುಧಾರಣೆ ಮಾಡಬೇಕು, ಅದನ್ನು ಮಾಡುತ್ತೇವೆ. ನಾನು open ಆಗಿ ಹೇಳುತ್ತಿದ್ದೇನೆ. ಇನ್ನೊಂದು ಕೊರತೆ ಏನೆಂದರೆ, Payments, Delay in Payments of the wages. ಅದು ಆದಷ್ಟು 7–8 ದಿವಸಕ್ಕೆ payment ಆಗುವ ರೀತಿಯಲ್ಲಿ systemಅನ್ನು ಬದಲಾವಣೆ ಮಾಡಬೇಕು, improvement ಮಾಡಬೇಕು ಅದರ ಬಗ್ಗೆ ನಾವು ಕಾಳಜಿ ತೆಗೆದುಕೊಳ್ಳುತ್ತಿದ್ದೇವೆ. ಇದು ಎಲ್ಲಾ ಕಡೆ ಇರುವಂಥದ್ದು, ಎಲ್ಲಾ ರಾಜ್ಯಗಳಲ್ಲಿಯೂ ಈ ಸಮಸ್ಯೆ ಇದೆ. ಈಗ ಆಂಧ್ರದಲ್ಲಿ ಏನೋ ಒಂದು ಹೊಸ system ಮಾಡಿದ್ದಾರೆ. ಅಲ್ಲಿ within 7 days wages payment ಆಗಲೇ ಬೇಕು ಅಂದಾಗ ಆ ಕೂಲಿಯವರು ಬರುತ್ತಾರೆ. ಇವತ್ತು ಬಹಳ ಕಡೆ ಕೂಲಿಯವರು ಬರದೇ ಇರುವುದಕ್ಕೆ ಅದು ಒಂದು ಕಾರಣ ಇದೆ. ಏಕೆಂದರೆ 10 ದಿವಸಕ್ಕೊಮ್ಮೆ 20 ದಿವಸಕ್ಕೊಮ್ಮೆ payment ಮಾಡುವುದಾದರೆ ಯಾರು ಕೂಲಿಯವರು ಬರುತ್ತಾರೆ? ಖಾಸಗಿಯಲ್ಲಿ ಹೋದಾಗ 4–5 ದಿವಸದಲ್ಲಿ payment ಮಾಡುತ್ತಾರೆ. ಉದ್ಯೋಗ ಖಾತ್ರಿಯೊಳಗೆ ಇದೂ ಒಂದು ಸಮಸ್ಯೆಯಾಗಿದೆ, ಏಕೆಂದರೆ Third party inspection ಮತ್ತೊಂದು ಎಲ್ಲಾ procedure follow ಮಾಡುವುದರೊಳಗೆ ಇವೆಲ್ಲಾ ಸ್ವಲ್ಪ delay ಆಗುವುದನ್ನು ನಾವು

ನೋಡುತ್ತಿದ್ದೇವೆ ಮತ್ತು ಇವತ್ತು ಏನಾಗಿದೆ ಎಂದರೆ, ಇಂಜಿನಿಯರ್ಸ್ ಸಿಬ್ಬಂದಿ ಕೊರತೆ ಇದೆ. ಗ್ರಾಮ ಪಂಚಾಯಿತಿಯಲ್ಲಿ ಸಾವಿರಾರು ಕೋಟಿ ರೂ.ಗಳ ಉದ್ಯೋಗ ಖಾತ್ರಿ ಯೋಜನೆಗಳಿಗೆ ಬರತಕ್ಕಂಥ ಯೋಜನೆಗಳನ್ನು ನೋಡಿದರೆ, ಒಂದೊಂದು ಗ್ರಾಮ ಪಂಚಾಯಿತಿಗೆ ಒಬ್ಬೊಬ್ಬ ಜೂನಿಯರ್ ಇಂಜಿನಿಯರ್‌ನ ಅವಶ್ಯಕತೆ ಇದೆ. ಅಷ್ಟು ಸಿಬ್ಬಂದಿ ನಮ್ಮ ಕಡೆ ಇಲ್ಲ. ಅದಕ್ಕಾಗಿ ನಾನು ಆ ಇಲಾಖೆಯ ಮಂತ್ರಿಯಾಗಿದ್ದ ಸಂದರ್ಭದಲ್ಲಿ ಸಾವಿರಾರು ಇಂಜನಿಯರ್ಸ್ ಭರ್ತಿ ಮಾಡಲು C & R rules ಮಾಡಿ ಕ್ರಮ ತೆಗೆದುಕೊಂಡಿದ್ದೇವೆ. ಹೀಗಾಗಿ ಎಲ್ಲಿ ಇನ್ನೂ system ಅನ್ನು improvement ಮಾಡಬೇಕು. ಅಲ್ಲಿ ಆ ಪ್ರಯತ್ನವನ್ನು ನಾವು ನೋಡುತ್ತಿದ್ದೇವೆ. ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಉದ್ಯೋಗ ಖಾತ್ರಿ ಯೋಜನೆಯನ್ನು ಅನುಷ್ಠಾನ ಮಾಡಲು ನಮ್ಮ ಪ್ರಯತ್ನ ಇದೆ ಎನ್ನುವ ಮಾತನ್ನು ಈ ಸಮಯದಲ್ಲಿ ಹೇಳುತ್ತೇನೆ.

ಇದರ ಜೊತೆಗೆ ಇನ್ನೂ ಹಲವಾರು ಯೋಜನೆಗಳು ಇದೆ. ಕುಡಿಯುವ ನೀರಿನ ಯೋಜನೆ. ಕುಡಿಯುವ ನೀರಿನಲ್ಲಿ fluoride ಅಂಶವನ್ನು ಹೊಸ ಯೋಜನೆ ಮುಖಾಂತರ ಕಡಿಮೆ ಮಾಡುತ್ತೇವೆ. ಮತ್ತೆ ಬೇರೆ ಕಡೆ problem ಆಗಿರುತ್ತದೆ. 7,000 ಗ್ರಾಮಗಳಲ್ಲಿ fluoride contents ಇರುವುದನ್ನು ಬೇರೆ ಬೇರೆ ಯೋಜನೆಗಳ ಮುಖಾಂತರ ಸರಿಮಾಡಿದಾಗ ಮತ್ತೆ 7,000–8,000 ಗ್ರಾಮಗಳು ತಯಾರಾಗಿರುತ್ತದೆ. ಬೋರ್‌ವೆಲ್ ಕೊರೆಸುವುದರಿಂದ ಈ ರೀತಿಯಾಗುತ್ತಿದೆ. ಬರಗಾಲ ಬಂದಾಗ ನಮಗೆಲ್ಲರಿಗೂ ಒಂದು priority ಎಂದರೆ ಬೋರ್‌ವೆಲ್‌ಗಳನ್ನು ಕೊರೆಸುವುದು. ಬೋರ್‌ವೆಲ್‌ಗಳನ್ನು ಎಷ್ಟು ಕೊರೆಸುತ್ತೇವೆ. ಅಷ್ಟೇ ಕಲುಷಿತ ನೀರು ಬರುವ ಸಾಧ್ಯತೆ ಇರುತ್ತದೆ. ಅಂತರ್ಜಲ ಕಡಿಮೆ ಆಗುವಂಥದ್ದು, ಇವೆಲ್ಲಾ ನಾವು ನೋಡುತ್ತಿದ್ದೇವೆ. ಇದನ್ನು ಮೀರಿ ನಾವು ಕೆಲಸ ಮಾಡಬೇಕಾಗಿರುತ್ತದೆ. ಹೀಗಾಗಿ ಇದು ಕೇವಲ ನಮ್ಮ ರಾಜ್ಯದ್ದು ಅಲ್ಲಿ ಪಕ್ಕದ ಮಹಾರಾಷ್ಟ್ರದ್ದು ಇರಬಹುದು. ಆಂಧ್ರ ಪ್ರದೇಶದ್ದು ಇರಬಹುದು. ಎಲ್ಲಾ ಕಡೆ ಇವತ್ತು ನಾವು ಈ ಪರಿಸ್ಥಿತಿಯನ್ನು ನೋಡುತ್ತಿದ್ದೇನೆ. ಕಳೆದ 2–3 ವರ್ಷಗಳಲ್ಲಿ Multi-village schemes ಗೆ ಹೆಚ್ಚು ಒತ್ತು ಕೊಡುತ್ತಿದ್ದೇನೆ.

ಮಾನ್ಯ ಬೆಳ್ಳಿಯವರ ಕ್ಷೇತ್ರದಲ್ಲಿರಬಹುದು. ಅಲ್ಲಿ Multi-village scheme ಹೆಚ್ಚು implement ಮಾಡಿದ್ದೇವೆ. ಹೀಗಾಗಿ ಇಷ್ಟು ಬರದ ಸಮಯದಲ್ಲಿಯೂ ಕೂಡ ಅಲ್ಲಿ ಕುಡಿಯುವ ನೀರಿನ ತೊಂದರೆ ಆಗಲಿಲ್ಲ. ಹೀಗಾಗಿ ನಮ್ಮ priority ಯಲ್ಲಿಯೇ Multi-village schemes ಎಲ್ಲಿ surface water source ಇದೆ ಅದರ ಮುಖಾಂತರ Multi-village scheme ಅನ್ನು ಹೆಚ್ಚು implement ಮಾಡುವಂಥದ್ದು, ಕಳೆದ ವರ್ಷ ಇದಕ್ಕೆ ಹೆಚ್ಚು ಒತ್ತು ಕೊಟ್ಟಿದ್ದೆವು. 2400 ಕೋಟಿ ರೂ.ಗಳನ್ನು Multi-village scheme ಗೆ ಖರ್ಚು ಮಾಡುವುದರ ಬಗ್ಗೆ ಈಗಾಗಲೇ clear ಕೊಟ್ಟು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ. ಈ ರೀತಿ ಒಂದು ಹೊಸ ವ್ಯವಸ್ಥೆ ತರಬೇಕು ಆ ಪ್ರಯತ್ನ ನಾವು ಮಾಡುತ್ತಿದ್ದೇವೆ ಎನ್ನುವ ಮಾತನ್ನು ಹೇಳುತ್ತೇನೆ. ಮಾನ್ಯ ಪ್ರತಿಪಕ್ಷದ ನಾಯಕರು ಹಲವಾರು ವಿಚಾರಗಳನ್ನು ಇಲ್ಲಿ ಹೇಳಿದ್ದಾರೆ. ಒಂದೊಂದು subject ನಾವು ತೆಗೆದುಕೊಂಡಲ್ಲಿ ಹಲವಾರು ವಿಚಾರಗಳನ್ನು ಹೇಳಿದ್ದಾರೆ. ಅದಕ್ಕೆ ಇವತ್ತು ಏನು ಉತ್ತರ ಕೊಡಬೇಕು ಎನ್ನುವಂಥದ್ದು, ಮಾನ್ಯ ಜಯಚಂದ್ರರವರು ಇರಬಹುದು. ಮಾನ್ಯ ರೇವಣ್ಣನವರು ಇರಬಹುದು, ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ಯಡಿಯೂರಪ್ಪನವರು ಇರಬಹುದು, ಹಲವಾರು ವಿಚಾರಗಳನ್ನು ಹೇಳಿದರು. ಇವತ್ತು ನಾವು ರೈತರ ನೆರವಿಗೆ ಬರಬೇಕಾಗಿದೆ. ಜನಸಾಮಾನ್ಯರ ಬಗ್ಗೆ ಮಾನ್ಯ ಯಡಿಯೂರಪ್ಪನವರು ಹೆಚ್ಚು ಕಾಳಜಿ ವಹಿಸಿದರು. ನಿನ್ನೆ ಅವರು ಮಾತನಾಡಿದ್ದಕ್ಕೆ ಬಹಳಷ್ಟು ಜನ ಏಕೆ ಈ ರೀತಿ ಮಾನ್ಯ ಯಡಿಯೂರಪ್ಪನವರು ಮಾತನಾಡಿದರು ಎಂದು ಬೇರೆ ಬೇರೆ ರೀತಿಯ ಅರ್ಥವನ್ನು ಕಲ್ಪನೆ ಮಾಡಿಕೊಂಡರು. ಆ ಒಂದು field ನಲ್ಲಿ ಆಳವಾದ ಹೋರಾಟ ಮಾಡಿ ಮುಂದೆ ಬಂದಂಥವರು. ಎಲ್ಲಿ ತೊಂದರೆ ಇದೆ, ಬಡವರ ಬಗ್ಗೆ ಎಷ್ಟು ಕಾಳಜಿ ಇದೆ, ಅದನ್ನು ಅವರು ನಿನ್ನೆ ಅವರ ಮಾತಿನಲ್ಲಿ ಹೇಳಿದ್ದು ನಾವೆಲ್ಲ ಗಮನ ಹರಿಸಿದ್ದೇವೆ. ಹೀಗಾಗಿ ಅದರ ಬಗ್ಗೆಯೂ ನಾವು ಸ್ಪಂದನೆ ಮಾಡಬೇಕಾಗಿದೆ, ಹಲವಾರು ಯೋಜನೆಗಳು, ಅವರ ಕಾಲದಲ್ಲಿ ಆಗಿವೆ. ಕೆರೆಯಲ್ಲಿ ಹೂಳು ತೆಗೆಯುವಂಥದ್ದು, ನಾನು 1994 ರಿಂದ ಇಲ್ಲಿ ಶಾಸಕನಾಗಿ ಕೆಲಸ ಮಾಡುತ್ತಿದ್ದೇನೆ. ಕೆರೆಯಲ್ಲಿ ಹೂಳು

ತೆಗೆಯುವಂಥ ಕೆಲಸ ಬಹಳ ಪ್ರಮುಖವಾದದ್ದು. ಅವರು ಮುಖ್ಯಮಂತ್ರಿಗಳಾಗಿದ್ದಾಗ ಒಂದೊಂದು ವಿಧಾನಸಭಾ ಕ್ಷೇತ್ರಕ್ಕೆ ಐದು ಕೋಟಿ ರೂಪಾಯಿ ಹಣವನ್ನು ಕೆರೆ ಹೂಳು ತೆಗೆಯುವ ಸಲುವಾಗಿ ಕೊಟ್ಟಿದ್ದಾರೆ. ಕಳೆದ ವರ್ಷದಿಂದ short term tender ಕರೆದು ಇದನ್ನು ಪ್ರಾರಂಭ ಮಾಡಿದ್ದೇವೆ. ಆಗ ಏನಾಯಿತೆಂದರೆ, ಮಳೆ ಬಂದು solve ಆದ ಮೇಲೆ ಎಲ್ಲವನ್ನೂ stop ಮಾಡಿದ್ದೇವೆ. ಮತ್ತೆ ಈ ವರ್ಷ continue ಮಾಡುತ್ತಿದ್ದೇವೆ. ಯಾವ್ಯಾವುದು ಅಪೂರ್ಣವಾಗಿವೆ. ಅವೆಲ್ಲವನ್ನೂ complete ಮಾಡುತ್ತೇವೆ. ಆ ಒಂದು ಹೂಳು ತೆಗೆಯುವಂತಹ ಕೆಲಸ ಏನಿದೆ ಅದಕ್ಕಾಗಿ ನಾವು ಏನು ಅನುದಾನ ನಿಗದಿ ಮಾಡಿದ್ದೇವೆ ಅದು ಸಂಪೂರ್ಣವಾಗಿ ಖರ್ಚಾಗಬೇಕೆಂದು ನಾನು ಹಣಕಾಸು ಇಲಾಖೆಯವರಿಗೂ, ಅಧಿಕಾರಿಗಳಿಗೂ direction ಕೊಟ್ಟಿದ್ದೇನೆ.

ಸುವರ್ಣ ಭೂಮಿ ಯೋಜನೆ, ಒಬ್ಬೊಬ್ಬ ರೈತನಿಗೆ 10,000 ರೂಪಾಯಿ ಕೊಡುವಂತಹ ಯೋಜನೆ, Regular ಆಗಿ ಯಾವ crop ಅನ್ನು ಬೆಳೆಯುತ್ತಾನೆ, ಅದನ್ನು ಬಿಟ್ಟು ಮತ್ತೊಂದು crop ಅನ್ನು ಬೆಳೆಸುವುದಕ್ಕೆ ಹೆಚ್ಚು ಪ್ರೋತ್ಸಾಹ ಕೊಡುವ ದೃಷ್ಟಿಯಿಂದ ಮೊದಲನೇ ಕಂತಿನಲ್ಲಿ 5,000 ರೂಪಾಯಿ ಮತ್ತೆ ಎರಡನೇ ಕಂತಿನಲ್ಲಿ 5,000 ರೂಪಾಯಿ ಕೊಡುವಂತಹ ಯೋಜನೆ. ಅದೂ ಕೂಡ last year implement ಆಗಿತ್ತು ಈ ಬಾರಿ payment ಆಗಿಲ್ಲವೆನ್ನುವ ಕೊರಗು ಇತ್ತು. ಅದಕ್ಕಾಗಿ ನಾನು ನಿನ್ನೆ direction ಕೊಟ್ಟಿದ್ದೇನೆ. ಅದಕ್ಕಾಗಿ 125 ಕೋಟಿ ರೂಪಾಯಿ ಏನಿದೆ ತಕ್ಷಣವೇ release ಮಾಡಬೇಕೆಂದು ನಿನ್ನೆ order ಆಗಿದೆ. ಕಳೆದ ಬಾರಿಯಿಂದ ಸುವರ್ಣ ಭೂಮಿ ಯೋಜನೆ ಏನು ಜಾರಿಯಲ್ಲಿದೆ ಅದನ್ನು ಸಂಪೂರ್ಣವಾಗಿ ಅನುಷ್ಠಾನ ಮಾಡುವಂತಹ ಕೆಲಸ ನಾವು ಮಾಡುತ್ತಿದ್ದೇವೆ. ಇನ್ನೊಂದು ವಿಷಯ, ಅವರು ಬಹಳ ಮುಖ್ಯವಾಗಿ ಪೆನ್ಷನ್ ವಿಷಯವನ್ನು ಪ್ರಸ್ತಾಪ ಮಾಡಿರುವಂಥದ್ದು ಇದೆ. ಇವತ್ತು ಬಡವರಾದ ಅಂಗವಿಕಲರು ಇರಬಹುದು, ವೃದ್ಧಾಪ್ಯ ವೇತನ, ವಿಧವಾ ವೇತನ ಇರಬಹುದು. ಇವತ್ತು ಇಂತಹ ಹಲವಾರು ಯೋಜನೆಗಳ ಮುಖಾಂತರ ಅವರಿಗೆ ರೂ, 400, ರೂ. 500 ಅಥವಾ ರೂ. 1,000

ಗಳೆಂದು ಏನು ಕೊಡುತ್ತಿದ್ದೇವೆ ಅದು ಬಹಳ ಮುಖ್ಯವಾದಂಥದ್ದು, ಅವರಿಗೆ ಒಂದು ಅಥವಾ ಎರಡು ತಿಂಗಳು ಮಾಶಾಸನ ಬರಲಿಲ್ಲವೆಂದರೆ ಏನು ಇಷ್ಟು ದಿವಸವಾದರೂ ಹಣ ಬರಲಿಲ್ಲವೆಂದು ಅವರು ಪರಿತಪಿಸಲಿಕ್ಕೆ ಪ್ರಾರಂಭ ಮಾಡುತ್ತಾರೆ. ಹೀಗಾಗಿ ಆ ದೃಷ್ಟಿಯಿಂದ ಅವರ ಬಗ್ಗೆ ಏನು ಕಾಳಜಿಯನ್ನು ವಹಿಸಿದ್ದೇವೆ, ಆದಕ್ಕಾಗಿ ಇಲ್ಲಿಯವರೆಗೆ ಏನು ಮಾಡಿದ್ದೇವೆಂದು ಮಾನ್ಯ ಈಶ್ವರಪ್ಪನವರು ಹೇಳಿದರು. 40 ಲಕ್ಷ ರೂ.ಗಳನ್ನು ಈ ಪಿಂಚಣಿ ಯೋಜನೆಯಲ್ಲಿ ಕೊಡುವ ಒಂದು ವ್ಯವಸ್ಥೆ ಇದೆ. ಅದರಲ್ಲಿ ವೆರಿಫಿಕೇಷನ್ ಎಲ್ಲಾ ಇರುತ್ತದೆ. 32 ಲಕ್ಷ ಜನರಿಗೆ ಇವತ್ತು ಪೆನ್ಷನ್ ಕಂಟಿನ್ಯೂ ಆಗಿ ಹೋಗುತ್ತಿದೆ. ನೀವು ಬೇಕಾದರೆ statistics ಚೆಕ್ ಮಾಡಿ. ಏನು 8–9 ಲಕ್ಷ ಜನರಿಗೆ ವೆರಿಫಿಕೇಶನ್ ಸಲುವಾಗಿ ಕ್ಯಾನ್ಸಲ್ ಆಯಿತು ಅದರಿಂದ ಗೊಂದಲವಾಗಿದ್ದು ಇದೆ. ಹಳ್ಳಿಗಳಿಗೆ ಹೋದಾಗ ನಮ್ಮನ್ನು ಹಾಗೂ ನಿಮ್ಮನ್ನು ಪಿಂಚಣಿ ಬಂದಿಲ್ಲವೆಂದು ಕೇಳುತ್ತಾರೆ. ಇದಕ್ಕೆ ಕಾರಣವೇನೆಂದರೆ, ಯಾವುದು ಕ್ಯಾನ್ಸಲ್ ಆಗಿವೆ, non-production of the documents ಮತ್ತು ಮಾಹಿತಿಗಳನ್ನು ಕೊಡದೆ ಇರುವುದಕ್ಕೆ ಅದೆಲ್ಲಾ defects ಇದ್ದುದರಿಂದ ಕೆಲವು ಕಡೆ ಡಬಲ್ ಆಗಿರುವುದರಿಂದ ಇಂಥವುಗಳು ಆಗಿರುವುದರಿಂದ 8 ಲಕ್ಷ ರದ್ದಾಗಿದ್ದವು. ಅದರಲ್ಲಿ ವೆರಿಫೀಕೇಷನ್ ಮಾಡಿ ಮತ್ತೆ ಎರಡು ಲಕ್ಷ ಜನರಿಗೆ regularize ಮಾಡಿದ್ದೇವೆ. ಇದರ ಜೊತೆಯಲ್ಲಿ ಮತ್ತೆ ಹೊಸ ಅಪ್ಲಿಕೇಶನ್‌ಗಳು ಬಂದಿವೆ. ಅವುಗಳನ್ನೂ ಕೂಡ consider ಮಾಡುತ್ತಿದ್ದೇವೆ. ನಾನು ಈ ಸದನದಲ್ಲಿ ಒಂದನ್ನು commitment ಮಾಡುತ್ತಿದ್ದೇನೆ. ಬರುವ ದಿವಸಗಳಲ್ಲಿ ಯಾವುದೇ ಪಿಂಚಣಿ ತೆಗೆದುಕೊಳ್ಳುವಂಥ ವ್ಯಕ್ತಿಗೆ ಒಂದು ದಿವಸವೂ ಅವರಿಗೆ ಲೇಟ್ ಆಗದಂತೆ ಪ್ರತಿ ತಿಂಗಳು ಪೇಮೆಂಟ್ ಮಾಡುವಂಥ ಕೆಲಸವನ್ನು ನಾವು ಮಾಡುತ್ತೇವೆ. ಅದಕ್ಕಾಗಿ ಈಗಾಗಲೇ ನಾನು ಭರವಸೆಯನ್ನು ಕೊಟ್ಟದ್ದೇನೆ. ಅದರಲ್ಲಿ ಯಾವುದೇ ಒಂದು ಪೈಸೆ ಏನು ಆಗುವುದಿಲ್ಲ. ಅದನ್ನು ಮಾಡುವಂಥ ಕೆಲಸವನ್ನು ನಾನು ಮಾಡುತ್ತೇನೆ ಎನ್ನುವಂಥದ್ದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇನ್ನೊಂದು ಬಹಳ ಮುಖ್ಯವಾದಂಥದ್ದು, ಆಶ್ರಯ ಮನೆಗಳ ಯೋಜನೆ

ಬಗ್ಗೆ, ಎಲ್ಲಿ ಪ್ರವಾಹ ಬಂದಿತ್ತು. ಆ ಸಂದರ್ಭದಲ್ಲಿ ಕೇವಲ ಹಿಂದಿನ ಸರ್ಕಾರಗಳು ಒಬ್ಬೊಬ್ಬರಿಗೆ ರೂ. 5000 ರೂ. 10000 ರೂ. 20000 ಮತ್ತು maximum ರೂ. 30000 ಕೊಡುವುದನ್ನು ಬಿಟ್ಟರೆ ಬೇರೆ ಏನು ಮಾಡುತ್ತಿರಲಿಲ್ಲ. ಇದನ್ನು ನಾನು 1994 ರಿಂದ ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡುತ್ತಾ ನೋಡಿದ್ದೇನೆ. ಆ ಪರಿಹಾರವನ್ನು ಕೊಡುವುದಕ್ಕೂ ಸಹ ಡಿಲೇ ಆಗಿರುವುದಕ್ಕೆ ನಾವು ಹೋರಾಟ ಮಾಡಿದ್ದೇವೆ. ಇದೇ ಸದನದಲ್ಲಿ ನಾನು ಧರಣಿ ಕೂಡ ಮಾಡಿದ್ದೇನೆ. ಆದರೆ ಇವತ್ತು ನಮ್ಮ ಸರ್ಕಾರ ಬಂದ ಮೇಲೆ ಎಲ್ಲಿ ಪ್ರವಾಹ ಬಂದಿದೆ ಅಷ್ಟಕ್ಕೆ ಪರಿಹಾರ ಕೊಡುವುದಕ್ಕೆ ನಾವು ಸೀಮಿತ ಆಗಲಿಲ್ಲ. ಹೊಸದಾಗಿ ನಾವು ಭೂಸ್ವಾಧೀನ ಮಾಡಿಕೊಂಡಿದ್ದೇವೆ. 5000 ಎಕರೆಗಿಂತ ಹೆಚ್ಚು land ನ್ನು ನಾವು land acquisition ಮಾಡಿಕೊಂಡಿದ್ದೇವೆ. ರೈತರಿಗೆ ಪರಿಹಾರ ಕೊಟ್ಟು ಭೂಸ್ವಾಧೀನ ಮಾಡಿಕೊಂಡಿದ್ದೇವೆ. ಇವತ್ತು ಅಲ್ಲಿ 50–60 ಸಾವಿರ ಮನೆಗಳನ್ನು ನಿರ್ಮಾಣ ಮಾಡಿದ್ದೇವೆ. ಈಗಾಗಲೇ ಎಷ್ಟು ಮನೆಗಳನ್ನು ಸ್ಥಳಾಂತರ ಮಾಡಲೇಬೇಕಾಗಿತ್ತು ಅದರಲ್ಲಿ ನೂರಾರು ಮನೆಗಳನ್ನು ಸ್ಥಳಾಂತರ ಮಾಡಿದ್ದೇವೆ. ಇನ್ನೂ ಕೆಲವು ಕಡೆ ಹಸ್ತಾಂತರ ಮಾಡಿಲ್ಲವೆನ್ನುವುದು ಇದೆ. ಏಕೆಂದರೆ ಇವತ್ತು ಸ್ಥಳೀಯಾದಂಥ ರಾಜಕೀಯ. ಯಾರನ್ನು ಯಾವ ಮನೆಗೆ ಕಳುಹಿಸಬೇಕು. ಯಾರನ್ನು ಕಡೆ ಎನ್ನವುದರ ಬಗ್ಗೆ ಲಿಸ್ಟ್ ಮಾಡಿದಾಗ ಆ ಲಿಸ್ಟ್ 4–5 ಸಲ ಚೇಂಜ್ ಆಗಿರುವುದನ್ನು ನಾವು ನೋಡಿದ್ದೇವೆ. ಅದಕ್ಕಾಗಿ ನಾವು ಇಲ್ಲಿ ಜಿಲ್ಲಾಧಿಕಾರಿಗಳಿಗೆ ಅಧಿಕಾರವನ್ನು ಕೊಟ್ಟದ್ದೇವೆ ಮತ್ತು ಜಿಲ್ಲಾ ಉಸ್ತುವಾರಿ ಸಚಿವರಿಗೆ ಅಧಿಕಾರ ಕೊಟ್ಟಿದ್ದೇವೆ. ಅದಕ್ಕೆ ಎಲ್ಲಾ ಶಾಸಕರು ಪ್ರಯತ್ನ ಮಾಡಿ, ಆಯಾ ಭಾಗದಲ್ಲಿ ನಿಜವಾದ ಫಲಾನುಭವಿಗಳು ಯಾರಿದ್ದಾರೆ ಅವರಿಗೆ ಆ ಮನೆಗಳನ್ನು ಅಲಾಟ್‌ಮೆಂಟ್ ಮಾಡಬೇಕು. ಇನ್ನು ಏನು ಕೆಲವು ಮನೆಗಳು ಉಳಿದಿವೆ, ಇನ್ನೂ ಕೆಲವು ಸ್ಥಳಾಂತರದ ಸಲುವಾಗಿ ಮನೆಗಳು ನಿರ್ಮಾಣವಾಗಿದೆ ಅವುಗಳನ್ನು ಸಹ ಆದಷ್ಟು ಬೇಗನೆ ಅಂದರೆ ಆಗಸ್ಟ್ ತಿಂಗಳಲ್ಲಿ ಎಲ್ಲವೂ ಸ್ಥಳಾಂತರವಾಗುವಂಥದ್ದು, ಯಾರು ಫಲಾನುಭವಿಗಳು ಇದ್ದಾರೆ ಅವರೆಲ್ಲರೂ ಆ ಮನೆಗಳಿಗೆ ಹೋಗುವಂಥ

ಒಂದು ವ್ಯವಸ್ಥೆಯನ್ನು ಮಾಡುತ್ತೇವೆ. ಇದನ್ನು ಆಗಸ್ಟ್ ತಿಂಗಳಲ್ಲಿ ಕಂಪ್ಲೀಟ್ ಮಾಡುತ್ತೇವೆ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದರ ಜೊತೆಗೆ ಇನ್ನು ಏನೇನು ಮೂಲಭೂತ ಸೌಕರ್ಯಗಳನ್ನು ನಾವು ಕೊಡಬೇಕು. ಕೆಲವು ಕಡೆ ರಸ್ತೆ ಮಾಡಿದ್ದೇವೆ. ಗಟಾರ ಮಾಡಿದ್ದೇವೆ, ಯುಜಿಡಿ ಮಾಡಿದ್ದೇವೆ, ಸೋಲಾರ್ ವ್ಯವಸ್ಥೆ ಮಾಡಿದ್ದೇವೆ. ಪ್ರತಿಯೊಂದು ಮನೆಗೆ NREGS ಮುಖಾಂತರ ಟಾಯ್ಲೆಟ್ ಮತ್ತು ಕಚ್ಚಾರಸ್ತೆ ಮಾಡುವಂಥ ವ್ಯವಸ್ಥೆ ಆಗಿರುತ್ತದೆ. ಆದರೂ ಕೂಡ ಇನ್ನು ಕೆಲವು ಕಡೆ ಕೊರತೆ ಇವೆ. ಆ ಕೊರತೆಯನ್ನು ನಿವಾರಣೆ ಮಾಡುವಂಥ ಕೆಲಸ ಈಗಾಗಲೇ ನಾವು ಮಾಡುತ್ತಿದ್ದೇವೆ. ಹೀಗಾಗಿ ಆ ಆಶ್ರಯ ಯೋಜನೆಗಳ ಮನೆಗಳನ್ನು ಸಂಪೂರ್ಣವಾಗಿ 59000 ಕ್ಕಿಂತ ಹೆಚ್ಚು ಮನೆಗಳು ಏನು ನಿರ್ಮಾಣವಾಗಿವೆ ಅವೆಲ್ಲವನ್ನೂ ಹಸ್ತಾಂತರ ಮಾಡುವಂಥ ಕೆಲಸವನ್ನು ಆಗಸ್ಟ್ ತಿಂಗಳಲ್ಲಿ ನಾವು ಮಾಡುತ್ತೇವೆ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ. ಇದರ ಜೊತೆಗೆ ಇವತ್ತು ಮುಖ್ಯವಾಗಿ ಹೇಳುವಂಥದ್ದು. ಇವತ್ತು ನಮ್ಮ ರೈತ ಬಾಂಧವರು ಬಹಳಷ್ಟು ತೊಂದರೆಯನು ಅನುಭವಿಸುತ್ತಿದ್ದಾರೆ. ಸಹಕಾರ ಸಂಘಗಳ ಮೂಲಕ ಮಾನ್ಯ ಯಡಿಯೂಪ್ಪನವರು ಶೇಕಡ 1ರಷ್ಟು ಬಡ್ಡಿ ದರದಲ್ಲಿ ಸಾಲ ಕೊಡುವಂಥದ್ದು ಇಡೀ ದೇಶದಲ್ಲಿ ಮೊಟ್ಟ ಮೊದಲ ಬಾರಿಗೆ ಮಾಡುವಂಥದ್ದನ್ನು ಬಜೆಟ್ ಮುಖಾಂತರ ಜಾರಿಗೆ ತೆಗೆದುಕೊಂಡು ಬಂದರು. ಹಿಂದಿನ ಮುಖ್ಯಮಂತ್ರಿಗಳಾದ ಮಾನ್ಯ ಸದಾನಂದಗೌಡರು ಮೊನ್ನೆಯ ಬಜೆಟ್‌ನಲ್ಲಿ zero ಪರ್ಸೆಂಟ್‌ನಲ್ಲಿ ಅಂದರೆ ಬಡ್ಡಿ ರಹಿತ ಸಾಲವನ್ನು ಕೊಡುವುದನ್ನು ಜಾರಿಗೆ ತೆಗೆದುಕೊಂಡು ಬಂದರು. ಪ್ರತಿ ವರ್ಷ ಸಹಕಾರ ಸಂಘಗಳ ಮುಖಾಂತರ ಸಾಲವನ್ನು ಕೊಡುವಂಥದ್ದು ಇತ್ತು ಅದನ್ನು ಕೊಟ್ಟಿದ್ದೇವೆ. ಅದು 3000–5000 ಕೋಟಿ ರೂ.ಗಳು ನಾವು ಇವತ್ತು ಕೊಟ್ಟಿದ್ದೇವೆ. ಪ್ರತಿಯೊಬ್ಬರಿಗೂ ಈ ರೀತಿಯಾಗಿ ಸಾಲವನ್ನು ಕೊಡುವಂಥ ನಿಟ್ಟಿನಲ್ಲಿ ನಾವು ಕೆಲಸ ಮಾಡುತ್ತಿದ್ದೇವೆ. ಮಾನ್ಯ ಯಡಿಯೂರಪ್ಪನವರು ಪ್ರಸ್ತಾಪ ಮಾಡಿದರು. ರೈತರಿಗೆ ನಾವು ಏನಾದರೂ ಸಹಾಯ ಕೊಡಲೇಬೇಕು. ಬರಗಾಲದಿಂದ ರೈತರು ಪರಿತಪಿಸುತ್ತಿದ್ದಾರೆ.

ಈಗ ಗ್ರಾಮೀಣ ಪ್ರದೇಶದ ರೈತರು ಬಹಳ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಅದಕ್ಕಾಗಿ ನಾವು ರೈತರಿಗೆ ನೆರವಾಗಬೇಕು. ಇನ್ನು ಬೇರೆ ಬೇರೆ ಇಲಾಖೆಗಳ ಕೆಲಸ ಕಾರ್ಯಗಳು ಇವೆ. ನಾವು ಬಜೆಟ್‌ನಲ್ಲಿ ಅಲೋಕೇಷನ್ ಮಾಡಿದ್ದೇವೆ. ಅದರಲ್ಲಿ ನಾವು ಏನಾದರೊಂದು ವ್ಯವಸ್ಥೆಯನ್ನು ಮಾಡಲೇಬೇಕಾಗುತ್ತದೆ. ಇಂತಹ ಒಂದು ತುರ್ತು ಪರಿಸ್ಥಿತಿ ಬಂದಾಗ ಅದರಲ್ಲಿ ನಾವು ಪ್ರಯಾರಿಟಿ ಕೊಡಬೇಕಾಗುತ್ತದೆ. ಯಾವ ರೈತರು ತೊಂದರೆಯಲ್ಲಿದ್ದಾರೆ ಅವರಿಗೆ ನಾವು ನಮ್ಮ ಪ್ರಯಾರಿಟಿಯನ್ನು ಕೊಡಲೇಬೇಕಾಗುತ್ತದೆ. ಆ ದೃಷ್ಟಿಯಿಂದ ಬಜೆಟ್‌ನಲ್ಲಿ ಹಲವಾರು ಅಲೋಕೇಷನ್ ಇವೆ. ಎಲ್ಲವನ್ನೂ ನಾವು ಕ್ರೋಢ್ರೀಕರಿಸಿಕೊಂಡು ಇವತ್ತು ನಮ್ಮ ರೈತರ ಸಲುವಾಗಿ ಅವರು ಏನು ಸಾಲವನ್ನು ತೆಗೆದುಕೊಂಡಿದ್ದಾರೆ ಅವರಿಗೆ ಪರಿಹಾರ ಕೊಡುವ ನಿಟ್ಟಿನಲ್ಲಿ ನಾವು ಕೆಲಸವನ್ನು ಮಾಡಬೇಕಾಗಿದೆ. ಅದಕ್ಕಾಗಿ ನಾವು ರೈತರಿಗೆ ಸಹಾಯ ಮಾಡಬೇಕು ಎನ್ನುವ ಬಗ್ಗೆ ನಾವು ದೃಢ ನಿಶ್ಚಯ ಮಾಡಿದ್ದೇವೆ. ಆ ದೃಷ್ಟಿಯಿಂದ ಅವರಿಗೆ ಕೆಲವೊಂದು ಪರಿಹಾರ ಕೊಡುವುದಕ್ಕೆ ನಾನು ಇಲ್ಲಿ ಡಿಕ್ಲೇರ್ ಮಾಡುತ್ತೇನೆ. ನಾನು ಒಂದನ್ನು ಹೇಳುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಸಿದ್ದರಾಮಯ್ಯನವರು ಕೇಂದ್ರದಲ್ಲಿ ನಿಮ್ಮ ಸರ್ಕಾರ ಇದೆ. ಅಲ್ಲಿ ಶೇಕಡ ಒಂದು ಪರ್ಸೆಂಟ್ ಬಡ್ಡಿ ದರದಲ್ಲಿ ಮತ್ತು zero ಪರ್ಸೆಂಟ್ ಬಡ್ಡಿ ದರದಲ್ಲಿ ಸಾಲವನ್ನು ವಿತರಣೆ ಮಾಡುವಂಥ ಸಂದರ್ಭದಲ್ಲಿ ದಯವಿಟ್ಟು ಕೇಂದ್ರ ಸರ್ಕಾರಕ್ಕೆ ನೀವು ಹೇಳಿ ಎನ್ನುವಂಥ ಮಾತನ್ನು ಹೇಳುತ್ತಿದ್ದೇನೆ. ಇವತ್ತು ನಾವು ಸೊಸೈಟಿ ಮೂಲಕ ಪರಿಹಾರನ್ನು ಕೊಡುತ್ತೇವೆ ಮತ್ತು ನಮ್ಮ ರೈತರು ಇವತ್ತು Nationalized Bank ಗಳಿಂದಲೂ ಸಾಕಷ್ಟು ಸಾಲವನ್ನು ತೆಗೆದುಕೊಂಡಿರುತ್ತಾರೆ. ಅದಕ್ಕೆ ಏನಾದರೂ ಪರಿಹಾರ ಕೇಳುವಂಥದ್ದು ಕೇಂದ್ರ ಸರ್ಕಾರದಿಂದ ಮಾಡಬೇಕಾಗುತ್ತದೆ. ಹಿಂದೆ ಅದಕ್ಕೆ ಸಾಕಷ್ಟು ಒತ್ತಾಯ ಮಾಡಿದ್ದೆವು. ಅದಕ್ಕೆ ಏನು response ಆಗಿಲ್ಲ. ಅದಕ್ಕಾಗಿ ಇವತ್ತು ನಮ್ಮ ರಾಜ್ಯದ ಇತಿಮಿತಿಯಲ್ಲಿ ನಮ್ಮ ಸಹಕಾರ ಸಂಘಗಳಿಂದ ನಾವು ಏನು ಮಾಡಬೇಕು ಎನ್ನುವುದರ ಬಗ್ಗೆ ನಾವು ವಿಚಾರ ಮಾಡಿಕೊಂಡು ಇವತ್ತು ಕೆಲವೊಂದು

ಘೋಷಣೆಯನ್ನು ಇವತ್ತು ಈ ಸಂದರ್ಭದಲ್ಲಿ ಮಾಡಬಯಸುತ್ತೇನೆ. ಕರ್ನಾಟಕ ರಾಜ್ಯವು ಕಳೆದ 40 ವರ್ಷಗಳಲ್ಲಿ ಎಂದೂ ಕಂಡಿರದಂಥ ಭೀಕರ ಬರಗಾಲ ಪರಿಸ್ಥಿತಿಯನ್ನು ನಾವು ಎದುರಿಸುತ್ತಿದ್ದೇವೆ. ರಾಜ್ಯದ ರೈತ ಬಾಂಧವರು ಬಹಳಷ್ಟು ಸಂಕಷ್ಟಕ್ಕೆ ಈಡಾಗಿದ್ದಾರೆ. ಅವರ ಭಾವನೆಯನ್ನು ಕಡಿಮೆ ಮಾಡಿ ಅವರ ಜೀವನ ಮಟ್ಟವನ್ನು ಸುಧಾರಣೆ ಮಾಡಲಿಕ್ಕೆ ಸರ್ಕಾರದ ಒಂದು ವಿಶೇಷ ಯೋಜನೆಯನ್ನು ಇವತ್ತು ನಾವು ಘೋಷಣೆ ಮಾಡುತ್ತಿದ್ದೇವೆ. ನಮ್ಮ ಮೇಲೆ ಒಂದು ಹೆಚ್ಚಿನ burden ಆದರೂ ಸಹ ಈ ಘೋಷಣೆಯನ್ನು ನಾನು ರೈತರ ಹಿತದ ಸಲುವಾಗಿ ಮಾಡುತ್ತಿದ್ದೇವೆ. 'ರಾಜ್ಯದ ಎಲ್ಲಾ ರೈತರ ಕೃಷಿ ಸಹಕಾರ ಸಂಘಗಳ ಬೆಳೆ ಸಾಲವನ್ನು ಬಡ್ಡಿ ಸೇರಿದಂತೆ ರೂ.25,000 ದವರೆಗೆ ಮನ್ನಾ ಮಾಡಲು ನಿರ್ಧರಿಸಿದ್ದೇನೆ, ಈ ವಿಶೇಷ ಯೋಜನೆ ಆಗಸ್ಟ್ 1, 2001 ರಿಂದ ಜೂನ್ 30, 2012 ರವರೆಗೆ ವಿತರಣೆ ಮಾಡುವ ಸಾಲವನ್ನು ಮರು ಪಾವತಿ ಈವರೆಗೆ ಉಳಿದಿರುವ ಸಾಲಕ್ಕೆ ಅನ್ವಯ ಮಾಡಿಸುತ್ತಿದ್ದೇನೆ. ಈ ವಿಶೇಷ ಯೋಜನೆಯಿಂದ ಬಹುಶಃ ಇಡೀ ರಾಜ್ಯದಲ್ಲಿ 16 ಲಕ್ಷಕ್ಕೂ ಹೆಚ್ಚು ರೈತರಿಗೆ ಪರಿವಾರ ಸಿಗಲಿಕ್ಕೆ ಸಾಧ್ಯವಿದೆ. ಮತ್ತು ಇದಕ್ಕಾಗಿ ನಮ್ಮ ರಾಜ್ಯ ಸರ್ಕಾರದ ಬಜೆಟ್‌ದಿಂದ ಸುಮಾರು 3500 ಕೋಟಿ ರೂ.ಗಳಿಗಿಂತ ಹೆಚ್ಚು ಹಣದ ಭಾರ ನಮ್ಮ ಮೇಲೆ ಬರುತ್ತದೆ. ನಮ್ಮ ರೈತರ ಸಲುವಾಗಿ ಈ ಭಾರವನ್ನು ಹೊತ್ತುಕೊಳ್ಳಲಿಕ್ಕೆ ನಾವು ತಯಾರಿಗಿದ್ದೇವೆ. ಬೇರೆ ಬೇರೆ ಯೋಜನೆಗಳ ಮುಖಾಂತರ ಎಲ್ಲಿಯಾದರೂ ನಾವು ರೆಡ್ಯೂಸ್ ಮಾಡುವಾಗ ಅವುಗಳನು ರೆಡ್ಯೂಸ್ ಮಾಡಿದರೂ ಸಹಿತ ಅದನ್ನು ಮಾಡಿಕೊಂಡು ಈ ಭಾರವನ್ನು ಹೊತ್ತುಕೊಂಡು ನಮ್ಮ ರೈತರ ಹಿತಾಸಕ್ತಿಯ ಸಲುವಾಗಿ ಇವತ್ತು 3500 ಕೋಟಿ ರೂ.ಗಳಿಗಿಂತ ಹೆಚ್ಚು ಸಾಲ ಮನ್ನಾ ಮಾಡುವಂಥದ್ದಕ್ಕೆ ನಾವು ಘೋಷಣೆಯನ್ನು ಮಾಡುತ್ತಿದ್ದೇವೆ. ಹೀಗಾಗಿ ಆದಷ್ಟು ಬೇಗನೆ ಈ ಒಂದು ಸರ್ಕಾರಿ ಆದೇಶವನ್ನು ಹೊರಡಿಸುತ್ತೇನೆ ಎನ್ನುವ ಮಾತನ್ನು ನಾನು ಹೇಳುತ್ತಿದ್ದೇನೆ. ನಮ್ಮ ಯಡಿಯೂರಪ್ಪನವರು ಮತ್ತು ನಮ್ಮ ಪ್ರತಿಪಕ್ಷದ ನಾಯಕರು ಏನು ತಮ್ಮ ಭಾವನೆಯನ್ನು ಮತ್ತು ರೈತರ ಬಗ್ಗೆ ಕಾಳಜಿಯನ್ನು ವ್ಯಕ್ತಪಡಿಸಿದ್ದಾರೆ ಅದಕ್ಕೆ ಪೂರಕವಾಗಿ ಇವತ್ತು ಈ ಘೋಷಣೆಯನ್ನು

ಮಾಡುತ್ತಿದ್ದೇನೆ. ಹೀಗಾಗಿ ಆದಷ್ಟು ಬೇಗನೆ ಈ ಒಂದು ಸರ್ಕಾರಿ ಆದೇಶವನ್ನು ಹೊರಡಿಸುತ್ತೇನೆ ಎನ್ನುವ ಮಾತನ್ನು ನಾನು ಹೇಳುತ್ತಿದ್ದೇನೆ. ನಮ್ಮ ಯಡಿಯೂರಪ್ಪನವರು ಮತ್ತು ನಮ್ಮ ಪ್ರತಿಪಕ್ಷದ ನಾಯಕರು ಏನು ತಮ್ಮ ಭಾವನೆಯನ್ನು ಮತ್ತು ರೈತರ ಬಗ್ಗೆ ಕಾಳಜಿಯನ್ನು ಬ್ಯಕ್ತಪಡಿಸಿದ್ದಾರೆ ಅದಕ್ಕೆ ಪೂರಕವಾಗಿ ಇವತ್ತು ಈ ಘೋಷಣೆಯನ್ನು ಮಾಡುತ್ತಿದ್ದೇನೆ. ನಮ್ಮದು ಗುರಿ ಏನಿತ್ತು ಅದರಲ್ಲಿ. ಇವತ್ತು ಶೇಕಡ 28–30 ರಷ್ಟು ಮಾತ್ರ ಬಿತ್ತನೆಯಾಗಿದೆ. ಇವತ್ತು ಅವರು ಬೆಳೆ ಬೆಳೆದಿಲ್ಲ. ಬೆಳೆ ಬೆಳೆದು ಲಾಸ್ ಆದರೆ ಅದು ಬೇರೆ. ಬರೀ 30 ರಷ್ಟು ಬಿತ್ತನೆ ಆದ ಸಂದರ್ಭದಲ್ಲಿ ಬಹುಶಃ ಮಳೆ ಆಗದಿದ್ದರೆ ಅದು ನಷ್ಟವೇ? ನಾವು ಕೇಂದ್ರ ಸರ್ಕಾರದ ಮಾನ್ಯ ಪ್ರಧಾನ ಮಂತ್ರಿಗಳನ್ನು, ನಮ್ಮ ಶರದ್ ಪವಾರ್‌ರವರನ್ನು ಭೇಟಿಯಾದಂಥ ಸಂದರ್ಭದಲ್ಲಿ 2000 ಕೋಟಿ, 5000 ಕೋಟಿ ರೂಪಾಯಿಗಳ demand request ಮಾಡಿದ್ದೆವು. ಈ ಬೆಳೆ ನಷ್ಟಕ್ಕಾದರೂ ಅವರು ಪರಿಹಾರ ಕೊಡಬೇಕಲ್ಲವೇ? ಅದಕ್ಕಾಗಿ ನಾವು ನೀವು ಮತ್ತೊಮ್ಮೆ ಅವರಲ್ಲಿಗೆ ಹೋಗೋಣ. ನಾನು ರೈತರ ಸಲುವಾಗಿ ಇಷ್ಟೊಂದು burden ಹೊತ್ತುಕೊಂಡಿದ್ದೇನೆ. ಅದಕ್ಕಾಗಿ ಕೇಂದ್ರ ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳೋಣ. ಇವತ್ತೇನು ನಾವು ಸಾಲವನ್ನು ಮನ್ನಾ ಮಾಡುತ್ತೇವೆ, ಇದಕ್ಕೂ ಸಹ ಸಹಾಯ ಮಾಡುವಂತೆ ಕೇಂದ್ರ ಸರ್ಕಾರವನ್ನು ನಾವು ಕೇಳೋಣ. ಇನ್ನೂ ಹೆಚ್ಚು ನೆರವು ಮಾಡಲಿಕ್ಕೆ ಸಾಧ್ಯವಿದ್ದರೆ ಮಾಡೋಣ. ಹಾಗಾಗಿ ಈ ದೃಷ್ಟಿಕೋನದಿಂದ ಇವತ್ತು ಬರಗಾಲದ ವಿಷಯಕ್ಕೆ ಸಂಬಂಧಪಟ್ಟಂತೆ ಸರ್ಕಾರ ಗಂಭೀರವಾಗಿ ವಿಚಾರ ಮಾಡುತ್ತದೆ. ಗಂಭೀರವಾದಂತ ಕೆಲಸ ಕಾರ್ಯಗಳನ್ನು ಮಾಡಿದ್ದೇವೆ. ರೈತರ ಸಲುವಾಗಿ ನಾವು ಮುಂದೆ ಬಂದಿಲ್ಲವೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಿ ಅದಕ್ಕೆ ತಮ್ಮೆಲ್ಲರ ಸಹಕಾರ ಇರಲಿ ಎಂದು ಈ ಸಂದರ್ಭದಲ್ಲಿ ಹೇಳುತ್ತೇವೆ.

ಶ್ರೀ ಸಿದ್ದರಾಮಯ್ಯ (ಮಾನ್ಯ ವಿರೋಧ ಪಕ್ಷದ ನಾಯಕರು) : ಮಾನ್ಯ ಮುಖ್ಯಮಂತ್ರಿಗಳು ಮತ್ತು ಕಂದಾಯ ಮಂತ್ರಿಗಳು ಇಬ್ಬರೂ ಕೂಡ ಬರಗಾಲದ ಚರ್ಚೆಗೆ ಉತ್ತರ ಕೊಟ್ಟಿದ್ದಾರೆ. ಕಂದಾಯ ಮಂತ್ರಿಗಳು ಉತ್ತರ ಕೊಡುವಾಗ ರೈತರಿಗೆ ಏನು ಸಹಾಯ ಮಾಡುತ್ತೇವೆಂಬ ಬಗ್ಗೆ ಏನೂ

ಹೇಳಲೇ ಇಲ್ಲ. ಕುಡಿಯುವ ನೀರು ಇರಬಹುದು. ಕೆಲಸ ಕೊಡುವುದರ ಬಗ್ಗೆ ಇರಬಹುದು, ಗುಳೆ ಹೋಗುವುದನ್ನು ತಪ್ಪಿಸುವುದನ್ನು ಇರಬಹುದು. ದನಕರುಗಳಿಗೆ ಮೇವು ಕೊಡುವ ಬಗ್ಗೆ ಇರಬಹುದು. ಇವತ್ತು ರಾಜ್ಯದಲ್ಲಿ 77 ಗೋಶಾಲೆಗಳನ್ನು ತೆಗೆದಿದ್ದೇವೆ. ಅದರಲ್ಲಿ 66 ಸಾವಿರ ರಾಸುಗಳನ್ನು ಇಟ್ಟಿದ್ದೇವೆಂದು ಉತ್ತರ ಕೊಟ್ಟಿದ್ದಾರೆ. ಅದು 0.5% of the total cattle population ಆಯಿತು. 1 ಕೋಟಿ 40 ಲಕ್ಷ cattle population ಇದೆ. 66 ಸಾವಿರಕ್ಕೆ ನಾವು protection ಕೊಟ್ಟಿಲ್ಲವೆಂದು ಹೇಳಿದ್ದಾರೆ. It will be 0.5% of the total cattle population ಅದರ ಜೊತೆಗೆ ಬರಿ ದನ, ಹಸುಗಳಿಗೆ, ಎಮ್ಮೆಗಳಗೆ ಗೋಶಾಲೆಗಳನ್ನು ತೆಗೆದರೆ ಸಾಲದು. ಕುರಿಗಳು, ಮೇಕೆಗಳು ಇವೆ. ಆ ಕುರಿಗಳಿಗೆ ಮೇವು ಸಿಗುತ್ತಿಲ್ಲ. ಎಲ್ಲಾ ಒಣಗಿ ಹೋಗಿವೆ. ಬೇರೆ ಕಡೆಗೆ ಕುರಿಗಳನ್ನು ಎತ್ತುಕೊಂಡು ಗುಳೆ ಹೋಗುವುದಕ್ಕೂ ಆಗುವುದಿಲ್ಲ. ಹಸುಗಳಿಗೆ ಮೇವು ಸಿಗುವುದಿಲ್ಲ. ಒಣಮೇವು ಸಹ ಸಿಗುವುದಿಲ್ಲ. ಜಮೀನಿನಲ್ಲಿ ಏನೂ ಬೆಳೆದಿಲ್ಲ. ಅವಕ್ಕೂ ಕೂಡ ಗೋಶಾಲೆಗಳಲ್ಲಿ ಅವಕಾಶ ಮಾಡಿ ಕುಡಿಯಲಿಕ್ಕೆ ನೀರು, ಮೇವು, ಔಷಧ ಎಲ್ಲಾ ಕೊಡುವಂಥ ಕೆಲಸ ಮಾಡಬೇಕು. ಅದರ ಬಗ್ಗೆ ಇವರು ಏನೂ ಪ್ರಸ್ತಾಪ ಮಾಡಲಿಲ್ಲ. ಇವತ್ತು NREGS ಕೆಲಸಗಳಿವೆ, ನನಗೆ ಗೊತ್ತಿರುವ ಮಟ್ಟಿಗೆ majority of districts, ನಾನು ಎಲ್ಲಾ ಜಿಲ್ಲೆಗಳಿಗೂ ಹೋಗಿಲ್ಲ. ನಾನು ಮಾಹಿತಿ ಇಲ್ಲದೇವೆ ಹೇಳಬಾರದು. ಈಗಿರುವ ಮಾಹಿತಿ ಪ್ರಕಾರ majority of districts NREGS Action Plan approval ಆಗಿಲ್ಲ Action Plan approval ಆದ ಮೇಲೆ Administrative approval ಆಗಬೇಕು. ಇದು ಯಾವುವೂ ಆಗದೆ ಕೆಲಸ ನಡೆಯುವುದಿಲ್ಲ. ನಾನು ಆಗಲೇ ಕೆಲವು ತಾಲ್ಲೂಕುಗಳು ಉದಾಹರಣೆ ಕೊಟ್ಟೆ ಏನೂ ನಡೆಯುತ್ತಿಲ್ಲ. ಇದರ ಬಗ್ಗೆ ಏನೂ ಮಾಡಿಲ್ಲ.Current ಬೆಳಿಗ್ಗೆ ಹೊತ್ತ 4 ಗಂಟೆ three phase ನಲ್ಲಿ ಕೊಡುತ್ತೇವೆಂದು ಹೇಳಿದರೂ ಕೂಡ correct ಆಗಿ ಹೇಳಬೇಕೆಂದರೆ ಎರಡೂವರೆ ಗಂಟೆ, maximum ಮೂರುವರೆ ಗಂಟೆ ಸಿಕ್ಕಿದರೆ ಅದೇ ಹೆಚ್ಚು. Because of the bad shedding problem. Since 10 days load shedding ಬಹಳ ಯದ್ವಾತದ್ವಾ ಆಗಿಬಿಟ್ಟಿದೆ.

Unlimited load shedding ಆಗಿಬಿಟ್ಟಿದೆ. ಹೀಗಾಗಿ ಜನರಿಗೆ ಕುಡಿಯುವ ನೀರು ಇಲ್ಲ. ಪಾಪ, ಬಹಳ ಜನ ಫ್ಲೋರೈಡ್ ನೀರು ಕುಡಿದು ಬದುಕಿದ್ದಾರೆ. ಆ ಮಕ್ಕಳಿಗೆ ಕಾಯಿಲೆ, ಕೈಕಾಲು ನೋವು, ತಿರುಗಾಡಲಿಕ್ಕೆ ಆಗುವುದಿಲ್ಲ. ಇವೆಲ್ಲಾ ಸಮಸ್ಯೆಗಳಿವೆ. ಮೇವು ಬ್ಯಾಂಕ್‌ಗಳನ್ನು ಮಾಡಿಲ್ಲ. ಮೇವು ಬ್ಯಾಂಕ್ ಮಾಡಿದರೂ ಏನು ಮಾಡಿದ್ದಾರೆ ? ಒಂದು ಟನ್ ಮೇವು 10,000–00 ರೂಪಾಯಿಗಳು ಆಗಿವೆ. ಹೋದ ಆಸೆಂಬ್ಲಿ ಸೆಷನ್‌ನಲ್ಲಿ 4,500–00 ರೂಪಾಯಿಗಳಿಗೆ ಆಗಿತ್ತು. ಈಗ ಹತ್ತು ಸಾವಿರ ರೂಪಾಯಿಗಳಾಗಿದೆಯೆಲ್ಲಾ ರೈತರು ಅಷ್ಟೊಂದು ಹಣ ಎಲ್ಲಿಂದ ತರುತ್ತಾರೆ ? ಅದನ್ನು ಹೀಗೆ ಮಾಡಿ, 10,000 ರೂಪಾಯಿಗಳನ್ನು ತೆಗೆದು ಮೇವು ಬ್ಯಾಂಕುಗಳನ್ನು ಮಾಡಿ, ಅದರ ಬಗ್ಗೆ ಹೇಳಿದರೂ ನೀವು?

ಶ್ರೀ ಕೆ.ಎಸ್. ಈಶ್ವರಪ್ಪ (ಮಾನ್ಯ ಉಪ ಮುಖ್ಯಮಂತ್ರಿಗಳು) : ಪಂಜಾಬ್ ಸರ್ಕಾರದೊಂದಿಗೆ ಮಾತುಕತೆ ಮಾಡಿ ಅವರಿಗೆ ಆರ್ಡರ್ ಕೂಡ ಕೊಟ್ಟಿದ್ದೇವೆ. 2,500 ರೂಪಾಯಿಗಳಿಗೆ ಒಂದು ಟನ್, Transportation ಗಾಗಿ 700–00 ರೂಪಾಯಿಗಳು. ಮೂರು ಸಾವಿರ ರೂಪಾಯಿಗಳಿಗೆ ನಮ್ಮ ಕರ್ನಾಟಕಕ್ಕೆ ಬರುತ್ತಿದೆ.

ಶ್ರೀ ಸಿದ್ದರಾಮಯ್ಯ : ಪಂಜಾಬ್‌ನಲ್ಲಿ cheap ಆಗಿ ಸಿಗಬಹುದು. ಆದರೆ ಎಲ್ಲಾ ಜಾನುವಾರುಗಳಿಗೆ ನೀವು ಮೇವು ಕೊಡುವುದಕ್ಕೆ ಆಗುವುದಿಲ್ಲ. ರೈತರು ಎಲ್ಲಿ ಮೇವು ಸಿಗುತ್ತದೋ ಅಲ್ಲಿ ತೆಗೆದುಕೊಳ್ಳಬೇಕಾಗುತ್ತದೆ.. ಅವರಿಗೆ 4,500–00 ರೂಪಾಯಿಗಳಿಗೆ ಕೊಟ್ಟು ತೆಗೆದುಕೊಳ್ಳಿ ಎಂದು ಹೇಳುತ್ತೀರಿ. ಅದರಲ್ಲಿ ನೀವು 50% ಕೊಡುತ್ತೇವೆಂದು ಹೇಳುತ್ತೀರಿ. ಇನ್ನು ಉಳಿದ 7,500–00 ರೂಪಾಯಿಗಳನ್ನು ಅವರು ಕೊಡಬೇಕಲ್ಲವೇ ? 7,500–00 ರೂಪಾಯಿಗಳಿಗಿಂತ ಜಾಸ್ತಿ ಕೊಡಬೇಕಲ್ಲವೇ? From where they bring? ಜಾನುವಾರುಗಳ ರಕ್ಷಣೆ ಆಗಬೇಕಾದರೆ ಅಷ್ಟು ಬೇಕು. ಆದಕ್ಕೆ ನೀವು ಆ 4,500–00 ರೂಪಾಯಿಗಳನ್ನು 10,000–00 ರೂಪಾಯಿ ಮಾಡಿ, ಒಂದು ಟನ್‌ಗೆ 10,000–00 ರೂಪಾಯಿಗಳ ಮೇವು. ಅದನ್ನು ಖರೀದಿ ಮಾಡಲಿಕ್ಕೆ ಈಗ 10,000–00 ರೂಪಾಯಿಗಳು ಬೇಕು. ನೀವು ಎಲ್ಲಾದರೂ ಹೋಗಿ ವಿಚಾರ ಮಾಡಿಕೊಂಡು ಬನ್ನಿ. ಒಂದು ಟನ್ ಹುಲ್ಲು

ಖರೀದಿಸಲು ಈಗ 10,000-00 ರೂಪಾಯಿಗಳು ಬೇಕು. ಈಗ ಒಣ ಹುಲ್ಲು ಬಿಟ್ಟರೆ ಹಸಿ ಹುಲ್ಲು ಎಲ್ಲಿಯೂ ಸಿಗುವುದಿಲ್ಲ. ಪಂಪ್ ಸೆಟ್‌ಗಳು ಓಡುವುದಿಲ್ಲ. ನೀರಿಲ್ಲ, ಕರೆಂಟ್ ಇಲ್ಲದಿರುವುದರಿಂದ ಮೇವು ಸಿಗುವುದಿಲ್ಲ. ಹಾಗಾಗಿ ಮಾನ್ಯ ಅಧ್ಯಕ್ಷರೆ, ಆ ರೀತಿ ಮಾಡಿ ಎಂದು ನಾವು ಸಲಹೆ ಕೊಟ್ಟರೆ, ನಾವು ಒಂದು ಸಾವಿರ ರೂಪಾಯಿಗಳನ್ನು ಮಾಡುತ್ತೇವೆಂದರೆ ಹೇಗೆ? ಏಕೆಂದರೆ 5600 telemetric ಮಾಡಿ. ಏಕೆಂದರೆ ಎಷ್ಟು ಅವೈಜ್ಞಾನಿಕವಾಗಿದೆ ಎಂದರೆ ಪ್ರೀಮಿಯಂ ಹಣಕ್ಕಿಂತ ಕಡಿಮೆ ವಿಮೆ ಬರುತ್ತದೆ. ನಾನು ಅದಕ್ಕೆ ಸಲಹೆ ಕೊಟ್ಟಿದ್ದೆನು. ಇಂಥ ಬರಗಾಲ ಬಂದಾಗ ಸಣ್ಣ ರೈತರು ಅತಿ ಸಣ್ಣ ರೈತರು, ಪರಿಶಿಷ್ಟ ಜಾತಿ/ಪಂಗಡದ ಜಾತಿಯ ರೈತರಿಗೆ ವಿಮೆ ಹಣ ನಾವೇ ಕಟ್ಟುತ್ತೇವೆಂದು ಹೇಳಿ ಸಲಹೆ ಕೊಟ್ಟಿದ್ದೆವು. ಪರಿಹಾರ ಎಂದರೆ ಏನು ಹಾಗಾದರೆ? ಸಹಾಯ ಮಾಡುವುದು ಅಂದರೆ ಏನು? ನಾವು ಈ ವಿಮೆ ಹಣ ಕಟ್ಟಿಕೊಡುತ್ತೇವೆ. ವೈಜ್ಞಾನಿಕವಾಗಿ ಮಾಡುತ್ತೇವೆ. ಹವಾಮಾನ ಆಧಾರಿತವಾಗಿ ಮಾಡುತ್ತೇವೆ. ಪ್ರತಿ ಪಂಚಾಯಿತಿಗಳಲ್ಲಿ ಮಳೆ ಮಾಪನಗಳನ್ನು ಇಡುತ್ತೇವೆ. ನಷ್ಟವನ್ನು ತುಂಬಿಕೊಡುತ್ತೇವೆ. ನನ್ನ ಪ್ರಕಾರ ಇವತ್ತು ಸುಮಾರು 10,000 ಕೋಟಿ ರೂಪಾಯಿಗಳಿಗೂ ಹೆಚ್ಚು ಬೆಳೆ ನಾಶವಾಗಿದೆ. ಆ ಬೆಳೆ ನಷ್ಟಕ್ಕೆ ಪರಿಹಾರ ಕೊಡುತ್ತಿದ್ದಾರೆಯೇ? ಅದಕ್ಕೆ ಒಂದು ರೂಪಾಯಿಯೂ ಇಲ್ಲ. Crop Loss ಆಗಿ ಎಲ್ಲಾ ಕಳೆದುಕೊಂಡುಬಿಟ್ಟಿದ್ದಾರೆ. ಬೆಳೆ ನಷ್ಟವಾಯಿತು. 70% ಜನರಿಗೆ Co-operative Society loan ಸಿಗುವುದಿಲ್ಲವೆಂದು ನಿನ್ನೆ ಯಡಿಯೂರಪ್ಪನವರು ಹೇಳುತ್ತಿದ್ದರು. Only 30% of the people are getting crop loan from Co-operative Societies. ಕೆಲವರು Nationalized Bank ನಲ್ಲಿ ತೆಗೆದುಕೊಳ್ಳುತ್ತಾರೆ. 25,000 ರೂಪಾಯಿಗಳವರೆಗೆ ಸಾಲ ತೆಗೆದುಕೊಂಡಿರುವವರಿಗೆ ಮನ್ನಾ ಮಾಡುತ್ತೇವೆಂದರೆ 2 ಲಕ್ಷ, 3 ಲಕ್ಷ ಸಾಲ ತೆಗೆದುಕೊಂಡಿರುತ್ತಾರೆ. ಬೇರೆಯವರಿಗೆ ಸಾಲ ತೆಗೆದುಕೊಂಡಿಲ್ಲದೇ ಇರುವವರಿಗೆ ಏನು ಪರಿಹಾರ ಸಿಕ್ಕಿತು? ಹಾಗಾಗಿ ಇದು ಕೇವಲ ಜನಗಳಿಗೆ ಧೂಪ ಇಟ್ಟಂತಾಗುತ್ತದೆ. ಮೂಗಿಗೆ ತುಪ್ಪ ಸವರಿದಂತಾಗುತ್ತದೆ. ಆ ಕಾರಣದಿಂದ ನೀವು

ಮಾಡುವುದಾದರೆ entire crop loan ಎಲ್ಲವನ್ನು ಮನ್ನಾ ಮಾಡುತ್ತೇವೆಂದು ಘೋಷಣೆ ಮಾಡಿ ಯಡಿಯೂರಪ್ಪನವರು 8,000 ಕೋಟಿ ಚಿಲ್ಲರೆ ಆಗುತ್ತದೆಂದು ಹೇಳಿದರು. ಈಗ ಕ್ರಾಪ್ ಲೋನ್ ಕೊಟ್ಟಿಲ್ಲ. ಕಳೆದ ವರ್ಷ conversion ಮಾಡಿದ್ದಾರೆ. ಅದನ್ನೇ ಮುಂದೂಡಿದ್ದಾರೆ. ಜನ ಸಾಲ ಕಟ್ಟಿಬಿಟ್ಟಿದ್ದಾರೆ. 84% recovery ಆಗಿ ಬಿಟ್ಟಿದೆ.

ಶ್ರೀ ಅಮರೇಗೌಡ ಬಯ್ಯಾಪುರ : ಈಗ 90% ರೈತರು ಸಾಲವನ್ನು ಕಟ್ಟಿದ್ದಾರೆ. Renewal ಮಾಡಿದ್ದಾರೆ. ಸಾಲ ತೀರಿಸಲು ಹಣ ಕಟ್ಟಿ renewal ಮಾಡುವುದು. ನೀವು ಅದರ ಬಗ್ಗೆ statistics ತರಿಸಿ. ಅವರಿಗೆ ಯಾರಿಗೂ ಇದರಿಂದ ಲಾಭ ಆಗುವುದಿಲ್ಲ. 90% ರೈತರಿಗೆ ಇದರಿಂದ ಲಾಭವಾಗುವುದಿಲ್ಲ. 3000 ಕೋಟಿ ರೂಪಾಯಿಗಳಷ್ಟಾಗುತ್ತದೆಂದು ಹೇಳುತ್ತಿದ್ದಾರೆ ಆದರೆ ಇದು 500 ಕೋಟಿ ರೂಪಾಯಿಗಳಷ್ಟು ಆಗುವುದಿಲ್ಲ. ಎಲ್ಲರೂ renewal ಮಾಡಿದ್ದಾರೆ.

ಶ್ರೀ ಸಿದ್ದರಾಮಯ್ಯ : ರೈತರು ಏಕೆ ಸಾಲ ಕಟ್ಟುತ್ತಿದ್ದಾರೆಂದರೆ ಕೇವಲ 3% ಇದೆ. ಸರ್ಕಾರ 2%, ಕೇಂದ್ರ ಸರ್ಕಾರ 3% ಸಬ್ಸಿಡಿ ಕೊಡುತ್ತದೆ. ಆ 75% ನಲ್ಲಿ ಇವರು 3 ಅಥವಾ 4% ಅಷ್ಟೇ ಕೊಡುವುದು. Zero ಆಂದರೂ ಕೇವಲ 4% ಕೊಡುವುದು. It is a not a very big burden. ಆದ್ದರಿಂದ ಮಾನ್ಯ ಅಧ್ಯಕ್ಷರೆ ನಾವೇನು ಹೇಳುತ್ತೇನೆಂದರೆ, ಯಡಿಯೂರಪ್ಪನವರು ಪಾಪ ಹತ್ತು ಸಾವಿರ ಕೋಟಿ ರೂಪಾಯಿಗಳನ್ನು ತೆಗೆದಿಡಬೇಕೆಂದು ಹೇಳಿದರು. ಇವರು 25,000–00 ರೂಪಾಯಿಗಳವರೆಗೆ ಸಾಲ ಮನ್ನಾ ಮಾಡುತ್ತೇವೆಂದು ಘೋಷಣೆ ಮಾಡಿ ಬೇರೆ ಯಾವುದೂ ಪರಿಹಾರ ಕೊಡದೇನೆ ಘೋಷಣೆ ಮಾಡಿದರೆ ಇದರಿಂದ ಈ ರಾಜ್ಯದ ಬರಗಾಲದಿಂದ ತುತ್ತಾಗಿರುವಂಥ ಜನರಿಗೆ ಏನೇನೂ ಸಹಾಯ ಆಗುವುದಿಲ್ಲ. ಇವರಿಗೆ ಕಳಕಳಿ ಇಲ್ಲ. ಕಾಳಜಿ ಇಲ್ಲ.

ಶ್ರೀ ಜಗದೀಶ್ ಶೆಟ್ಟರ್ : ನಿಮಗೆ ಸಮಾಧಾನವಾಗುವುದಿಲ್ಲವೆಂದರೆ ಹೇಗೆ? ಎಲ್ಲದಕ್ಕೂ ಉತ್ತರ ಕೊಟ್ಟಿದ್ದೇವೆ. ಸುಮ್ಮನೆ ಟೀಕೆ ಮಾಡಬೇಕು ಎಂದು ಟೀಕೆ ಮಾಡುವುದು ಅಷ್ಟೇನೆ.

ಶ್ರೀ ಸಿದ್ದರಾಮಯ್ಯ : ನಾಲ್ಕು ತಿಂಗಳುಗಳಿಂದ NREGS ಕೆಲಸ ಒಂದೂ ಜಿಲ್ಲೆಯಲ್ಲಿ ನಡೆದಿಲ್ಲ. ಒಂದು ತಾಲ್ಲೂಕಿನಲ್ಲಿಯೂ ನಡೆದಿಲ್ಲ. ನಂಜನಗೂಡಿನಲ್ಲಿ ಇವತ್ತು ವರದಿಯನ್ನು ತೆಗಸಲಿ. 5.00 ಲಕ್ಷ ರೂಪಾಯಿಗಳಷ್ಟೇ ಖರ್ಚಾಗಿರುವುದು. ಕಳೆದ ಏಪ್ರಿಲ್‌ನಿಂದ ಇವತ್ತಿನವರೆಗೆ ಎಲ್ಲಿಯೂ ಕೆಲಸ ಪ್ರಾರಂಭ ಆಗಿಲ್ಲ. ಕರೆಂಟ್ ಇಲ್ಲ.

ಮಾನ್ಯ ಅಧ್ಯಕ್ಷರೆ, This is not the way, ಹಳ್ಳಿಗಾಡಿನ ಜನರನ್ನು ರಕ್ಷಣೆ ಮಾಡಬೇಕು. ಹಳ್ಳಿಗಾಡಿನ ಸಂಪತ್ತನ್ನು ಉಳಿಸಬೇಕು. ಜಾನುವಾರುಗಳ ಸಂಪತ್ತನ್ನು ಉಳಿಸಬೇಕು. ಮುಖ್ಯವಾಗಿ ಅವರಿಗೆ ನೀರು ಮತ್ತು ಉದ್ಯೋಗವನ್ನು ಕೊಡಬೇಕೆನ್ನುವ ಕಳಕಳಿ ಇವರಲ್ಲಿ ಕಾಣಿಸುತ್ತಿಲ್ಲ. ಮಾನ್ಯ ಈಶ್ವರಪ್ಪನವರು ನೀಡಿದ ಇಡೀ ಉತ್ತರವನ್ನು ನೋಡಿದರೆ, ಪಾಪ ಅದನ್ನು ಇವರೆಲ್ಲಾ ಬರೆದುಕೊಂಡರೋ ಏನೋ ಗೊತ್ತಿಲ್ಲ. ಪೇಪರ್‌ನವರು ಬರೆದುಕೊಂಡರೋ ಏನೋ ಗೊತ್ತಿಲ್ಲ. ಅವರು ಬಹಳ ವೇಗವಾಗಿ ಓದಿಬಿಟ್ಟರು. ಅದು ಯಾರಿಗೆ ಗೊತ್ತಾಯಿತೋ ಏನು ಗೊತ್ತಾಗಲಿಲ್ಲ. ಆದ್ದರಿಂದ ಮಾನ್ಯ ಅಧ್ಯಕ್ಷರೆ, ನಾನು ಹೇಳುವುದೇನೆಂದರೆ ಈ ಸರ್ಕಾರಕ್ಕೆ ಕಿಂಚಿತ್ತೂ ಕಳಕಳಿ ಇಲ್ಲ. ಏಕೋ ಗೊತ್ತಿಲ್ಲ. ನೋಡಿ ಮಾನ್ಯ ಯಡಿಯೂರಪ್ಪನವರ ಮುಖ ಕಪ್ಪಿಟ್ಟು ಹೋಯಿತು. ಅಸಮಾಧಾನದಿಂದ ಕೂಡಿದೆ. He is very very unhappy with the reply. ಏನ್ರಿ ಮಾನ್ಯ ಯಡಿಯೂರಪ್ಪನವರೆ, ನಿನ್ನೆಯಲ್ಲಾ ಅಷ್ಟೊಂದು ವೀರಾವೇಶದಿಂದ ಮಾತನಾಡಿ. ನಿನ್ನೆ ಹೇಳಿರುವುದೆಲ್ಲಾ ಜನಗಳಿಗೆ ಹಾಕಿದ ಟೋಪಿನಾ?

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ (ಮಾನ್ಯ ಉಪ ಮುಖ್ಯಮಂತ್ರಿಗಳು) : Nationalized Bank ಗಳಿಂದ ನೀವೇನಾದರೂ ಒಂದು ರೂಪಾಯಿಯ ಸಾಲವನ್ನು ಮನ್ನಾ ಮಾಡಿಸಿದರೆ ಆಗ ಹೇಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : 72,000 ಕೋಟಿ ರೂ.ಗಳ ಸಾಲವನ್ನು ಕೇಂದ್ರ ಸರ್ಕಾರದಿಂದ ಮನ್ನಾ ಮಾಡಿದ್ದಾರೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಇವತ್ತು ಹೇಳ್ರಿ, ಬರಗಾಲ ಬಂದಿರುವ ಇವತ್ತು ಹೇಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : NREGS, ಆಶ್ರಯ ಯೋಜನೆಗಳಿಗೆ, ಕುಡಿಯುವ ನೀರಿಗೆ ಎಲ್ಲಾ ಕೇಂದ್ರ ಸರ್ಕಾರದ ಹಣ. CRF ಗೆ ಅವರ ಹಣ. ಒಂದು ರೂಪಾಯಿ ನಿಮ್ಮ ಹಣ ಇಲ್ಲ. ಯಾರಿಗೆ ಹೇಳುತ್ತಿದ್ದೀರಿ ನೀವು? ಲೆಕ್ಕವನ್ನು ಕೊಡಿ ನೊಡೋಣ? ನೀವು ಎಷ್ಟು ಖರ್ಚು ಮಾಡಿದ್ದೀರಿ ಹೇಳಿ? ಈ ಸರ್ಕಾರ ರೈತರ ವಿರೋಧಿ ಸರ್ಕಾರ, ಬಡವರ ವಿರೋಧಿ ಸರ್ಕಾರ, ಇವರಿಗೆ ಅಧಿಕಾರ ನಡೆಸುವುದಕ್ಕೆ ಯಾವುದೇ ನೈತಿಕ ಹಕ್ಕಿಲ್ಲ. ನೀವು ಕೊಟ್ಟಿರುವುದು. ಮೂಗಿಗೆ ತುಪ್ಪ ಹಚ್ಚುವ ಕೆಲಸವನ್ನು ಮಾಡುತ್ತಿದ್ದೀರಿಯೇ ವಿನಃ ಪರಿಹಾರ ಕೊಡುವ ಕೆಲಸ ಮಾಡಿಲ್ಲ. ನೆನ್ನೆ ಮಾನ್ಯ ಬಿ.ಎಸ್. ಯಡಿಯೂರಪ್ಪನವರು ಸಾರ್ವಜನಿಕರಿಗೆ 10,000 ಕೋಟಿ ರೂ.ಗಳು ಸಿಕ್ಕಿತೆಂದು ಪಾಪ, ಮಾನ್ಯ ಜಗದೀಶ್ ಶೆಟ್ಟರ್‌ರವರು ಮಾನ್ಯ ಯಡಿಯೂರಪ್ಪನವರು ಮಾಡಿರುವ ಮುಖ್ಯಮಂತ್ರಿಗಳಿಂದ 10,000 ಕೋಟಿ ರೂ.ಗಳು ಸಿಕ್ಕಿತೆಂದು ಪಾಪ ಆಸೆ ಇಟ್ಟುಕೊಂಡಿದ್ದರು. ಇದನ್ನು ತೀವ್ರವಾಗಿ ನಮ್ಮ ಪಕ್ಷ ಪ್ರತಿಭಟನೆ ಮಾಡಿ, ರೈತರ ಬಗ್ಗೆ ಕಾಳಜಿ ಇಲ್ಲ. ಬಡವರ ಬಗ್ಗೆ ಕಾಳಜಿ ಇಲ್ಲ ಎಂದು ಹೇಳಿ, ಈ ಸರ್ಕಾರಕ್ಕೆ ಧಿಕ್ಕಾರ ಧಿಕ್ಕಾರ ಎಂದು ಹೇಳಿ ಸದನದಿಂದ ಹೊರ ಹೋಗುತ್ತಿದ್ದೇವೆ.

(ಈ ಹಂತದಲ್ಲಿ ಭಾರತೀಯ ರಾಷ್ಟ್ರೀಯ ಪಕ್ಷದ ಮಾನ್ಯ ಸದಸ್ಯರುಗಳೆಲ್ಲರೂ ಸದನದಿಂದ ನಿರ್ಗಮಿಸಿದರು)

(ಗೊಂದಲ)

ಅಧ್ಯಕ್ಷರು : ಮಾನ್ಯ ಹೆಚ್.ಡಿ. ರೇವಣ್ಣನವರು, ಮಾತನಾಡಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಕಂದಾಯ ಮಂತ್ರಿಗಳು ಸುಮಾರು 50 ಪುಟಗಳನ್ನು ಗುರುತು ಹಾಕಿಕೊಂಡು ಬಂದಿದ್ದರೇನೋ ನನಗೆ ಗೊತ್ತಿಲ್ಲ. ಟೈಪ್ ಮಾಡಿರುವ ಕಾಪಿಯನ್ನು ಇಟ್ಟುಕೊಂಡು ಕ್ಲೀನ್ ಆಗಿ ಓದಿ ಹೇಳಿದ್ದೀರಿ ಬಹಳ ಸಂತೋಷ. ಮಾನ್ಯ

ಸಭಾಧ್ಯಕ್ಷರೆ ಒಂದು ಪ್ರತಿಯನ್ನು ಕಳುಹಿಸುತ್ತೇವೆಂದು ಹೇಳಿದರೂ ಕಳುಹಿಸಿಲಿಲ್ಲ. ಪತ್ರಿಕೆಯವರು ವರದಿಯನ್ನು ಬರೆದುಕೊಂಡರೋ ಇಲ್ಲವೋ ಗೊತ್ತಿಲ್ಲ. ನಮ್ಮ ಮುಖ್ಯಮಂತ್ರಿಗಳು ಇವತ್ತು ಮೂರ್ನಾಲ್ಕು ಕೊಡುಗೆಗಳನ್ನು ಕೊಟ್ಟಿದ್ದೇವೆಂದು ಹೇಳಿದರು. ಏಕೆಂದರೆ ಸನ್ಮಾನ್ಯ ಮಾಜಿ ಮುಖ್ಯಮಂತ್ರಿಗಳು ಸದನದಲ್ಲಿಯೇ ಇದ್ದಾರೆ. ತಾವು ಬರಗಾಲದ ಬಗ್ಗೆ ಸುದೀರ್ಘವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ನಾನು ಹಾಗೂ ಮಾನ್ಯ ಸಿದ್ದರಾಮಯ್ಯನವರೆಲ್ಲಾ ಸೇರಿ ಸಹಕಾರ ಬ್ಯಾಂಕಿನಿಂದ ಸಾಲ ಮನ್ನಾ ಮಾಡಬೇಕೆಂದು ಕೇಳಿದೆವು. ಇವತ್ತು ಮಾನ್ಯ ಮುಖ್ಯಮಂತ್ರಿಗಳು ಸಾಲವನ್ನು ಮನ್ನಾ ಮಾಡಿದ್ದಾರೆ. ಅದಕ್ಕಿಂತ ಮುಂಚಿತವಾಗಿ ದಯಮಾಡಿ ಸ್ವಲ್ಪ ತಾಳ್ಮೆಯಿಂದ ಇರಿ.

ಶ್ರೀ ಕೆ.ಎಸ್. ಈಶ್ವರಪ್ಪ : ಮೊದಲು ಸ್ವಾಗತ ಮಾಡುವುದಕ್ಕೆ ನಿಮಗೆ ಗಂಟಲು ಹಿಡಿದುಕೊಳ್ಳುತ್ತದೆಯೇನು?

ಶ್ರೀ ಹೆಚ್.ಡಿ. ರೇವಣ್ಣ : ಒಂದು ನಿಮಿಷ, ತಾವು ನೀರು ಕುಡಿದು ಹೇಳುತ್ತಿದ್ದೀರಿ. ನಾನು ನೀರು ಕುಡಿಯದೆಯೇ ಹೇಳಬೇಕಲ್ಲವೇ ?

ಶ್ರೀ ಕೆ.ಎಸ್. ಈಶ್ವರಪ್ಪ : ದಯಮಾಡಿ ಮೊದಲು ಸ್ವಾಗತ ಮಾಡಿ, ನಂತರ ಮುಂದೆ ಮಾತನಾಡಿ. ಇದರಿಂದ ರೇವಣ್ಣ ಅವರು ಸಂತೋಷ ಪಟ್ಟಿದ್ದಾರೆ ಹಾಗೂ ಸತ್ಯ ಹೇಳುತ್ತಿದ್ದಾರೆಂದು ರಾಜ್ಯದ ರೈತರು ಸಂತೋಷ ಪಡುತ್ತಾರೆ. ಆದಕಾರಣ ಮೊದಲು ಸ್ವಾಗತ ಮಾಡಿ.

ಶ್ರೀ ಹೆಚ್.ಡಿ. ರೇವಣ್ಣ : ಸ್ವಾಗತ ಹೇಳುತ್ತೇನೆ. ಮೊದಲು ಮಾನ್ಯ ಕಂದಾಯ ಮಂತ್ರಿಗಳು ಇದಕ್ಕೆ ಉತ್ತರ ಹೇಳಲಿ, ಸತ್ಯ ಹೇಳುತ್ತಿದ್ದೇನೆ. ಯಾವುದೇ ಸುಳ್ಳನ್ನು ಹೇಳುತ್ತಿಲ್ಲ. ನಾಲ್ಕು ವರ್ಷದಿಂದ ನಡೆಯುವ ಘಟನೆಗಳ ಸತ್ಯವನ್ನೇ ಹೇಳುತ್ತೇನೆ. ಏಕೆಂದರೆ ಹಿಂದಿನ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಸಾಲ ಮನ್ನಾ ಮಾಡಲೇಬೇಕೆಂದು ಹೇಳಿದರು. ಅದರ ಪ್ರಕಾರ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಜಗದೀಶ್ ಶೆಟ್ಟರ್‌ರವರು ಬಂದು ಹೇಳಿದರು. ಇದೇ ಮಾನ್ಯ ಯಡಿಯೂರಪ್ಪನವರು ಹಾಸನದಲ್ಲಿ ಬಂದು ಯಾವುದೇ

ಕಾರಣಕ್ಕೂ ಸಾಲ ಮನ್ನಾ ಮಾಡುವುದಕ್ಕಾಗುವುದಿಲ್ಲ. ನಾನೇನೂ ನೋಟ್ ಪ್ರಿಂಟ್ ಮಾಡುವ ಮಿಷನ್ ಇಟ್ಟು ಕೊಂಡಿದ್ದೇನೆಯೇ ಎಂದಿದ್ದರು.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ದಯಮಾಡಿ ಒಂದು ನಿಮಿಷ, ನಾನು ಹೇಳುವವರೆಗೆ ಕೇಳಿ, ನೀವು ಹಾಗೂ ಮಾನ್ಯ ಮುಖ್ಯಮಂತ್ರಿಗಳು ಹೇಳಿರುವುದನ್ನು ನಾವು ಕೇಳಲಿಲ್ಲವೇ?

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಈಗ ರಾಜಕಾರಣ ಬೇಡ, ಮೊದಲು ಸ್ವಾಗತ ಮಾಡಿ. ಬರಗಾಲ ಹೋಯಿತು, ರಾಜಕಾರಣ ಪ್ರಾರಂಭ ಮಾಡಿದರು.

(ಗೊಂದಲ)

ಶ್ರೀ ಸಿದ್ದು ಸವದಿ : ಮಾನ್ಯ ಧರ್ಮಸಿಂಗ್ ಅವರ ಕಾಲದಲ್ಲಿ ನೀವು ಇದ್ದಿರಿ. ಆದರೆ ಸಾಲ ಮನ್ನಾ ಮಾಡಲಿಲ್ಲ. ಯಾರಿಗೇನೂ ಕೊಡಲಿಲ್ಲ. ಬಿಜೆಪಿಯಲ್ಲಿ ಮಾನ್ಯ ಬಿ.ಎಸ್. ಯಡಿಯೂರಪ್ಪನವರು ಬಂದ ಮೇಲೆ ಸಾಲ ಮನ್ನಾ ಮಾಡಿದ್ದಾರೆ.

(ಗೊಂದಲ)

ಅಧ್ಯಕ್ಷರು : ರೇವಣ್ಣ ಅವರೇ, ಮೊದಲು ನೀವು ಮಾತನಾಡಿ..

ಶ್ರೀ ಎಂ.ಪಿ. ರೇಣುಕಾಚಾರ್ಯ : ಅಂದು ಸಾಲ ಮನ್ನಾ ಮಾಡಿದವರು ನಮ್ಮ ನಾಯಕರಾದ ಬಿ.ಎಸ್. ಯಡಿಯೂರಪ್ಪನವರು....

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಆಡಳಿತ ಪಕ್ಷದ ಸದಸ್ಯರು ಮಾತನಾಡಿದಾಗ ನಾನು ಸುಮ್ಮನೆ ತಾಳ್ಮೆಯಿಂದ ಕುಳಿತಿರಲಿಲ್ಲವೇ ? ಅವರಿಗೇನಾದರೂ ರೈತರ ಬಗ್ಗೆ ಗೊತ್ತಾ ? ಮಾನ್ಯ ಅಬಕಾರಿ ಸಚಿವರಿಗೇನಾದರೂ ರೈತರ ಬಗ್ಗೆ ಕಾಳಜಿಯಿದ್ದರೆ ಹೇಳಿ. ಅಬಕಾರಿ ಸಚಿವರು ಏನಿದ್ದರೂ ಅಬಕಾರಿ ಇಲಾಖೆ ಬಗ್ಗೆ ಮಾತನಾಡಲಿ. ದಯಮಾಡಿ ಸುಮ್ಮನೆ ಕುಳಿತುಕೊಳ್ಳಿ. ನಿಮ್ಮಿಂದ ನಾನೇನು ಕಲಿಯಬೇಕಾಗಿಲ್ಲ.

ಶ್ರೀ ಎಂ.ಪಿ. ರೇಣುಕಾಚಾರ್ಯ : ಆವತ್ತು ಸಾಲ ಮನ್ನಾ ಮಾಡಿದ್ದು ಶ್ರೀ ಬಿ.ಎಸ್. ಯಡಿಯೂರಪ್ಪನವರು ಆವತ್ತು ಮಾನ್ಯ ದೇವೇಗೌಡರು ವಿರೋಧ ವ್ಯಕ್ತಪಡಿಸಿದ್ದರು. ನಮ್ಮ ನಾಯಕರಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ನಮ್ಮ ರಾಜ್ಯದ ಉಪ ಮುಖ್ಯಮಂತ್ರಿಗಳಾಗಿ, ಹಣಕಾಸು ಸಚಿವರಾಗಿ ಸಾಲ ಮನ್ನಾ ಮಾಡಿದರು.

ಅಧ್ಯಕ್ಷರು : ನೀವು ಮಾತನಾಡಿ, ಅವರಿಗೇನೂ ಉತ್ತರ ಕೊಡುವುದು ಬೇಡ.

ಶ್ರೀ ಹೆಚ್.ಡಿ. ರೇವಣ್ಣ : ಸಾಲ ಮನ್ನಾ ಮಾಡಿರುವುದು ಯಾರು ಏನು ಎನ್ನುವುದು ಮುಖ್ಯ. ಏಕೆಂದರೆ ಇದು ದೇವರ ಸಭೆ. ಈ ದೇವರ ಸಭೆಯಲ್ಲಿ ಮಾನ್ಯ ಬಿ.ಎಸ್. ಯಡಿಯೂರಪ್ಪನವರು ಹೇಳಲಿ. ಮಾನ್ಯ ಹೆಚ್.ಡಿ. ಕುಮರಸ್ವಾಮಿಯವರ ಕಾಲದಲ್ಲಿ ನಾನು ಸಾಲ ಮನ್ನಾ ಮಾಡಿದ್ದೇನೆಂದು ಹೇಳಲಿ. 3 ವರ್ಷ 6 ತಿಂಗಳಿಂದ ಸತತವಾಗಿ ಬರಗಾಲವಿದೆ. ಹಾಸನ ಜಿಲ್ಲೆಯ ಆಲೂಗಡ್ಡೆ ಬೆಳೆಗಾರರಿಗೆ ಪರಿಹಾರ ಕೊಡುವುದಕ್ಕೆ ಆಯಿತೇ ? ಮೂರು ವರ್ಷ ಆರು ತಿಂಗಳು ... ! ಕೇವಲ ದ್ವೇಷದ ರಾಜಕೀಯ.

(ಗೊಂದಲ)

ಶ್ರೀ ಉಮೇಶ್ ವಿ. ಕತ್ತಿ (ಕೃಷಿ ಸಚಿವರು) : ಪ್ಯಾಕೇಜ್ ಕೊಟ್ಟಿದ್ದೇವೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಪ್ಯಾಕೇಜ್ ಕೊಟ್ಟರವರು ಮಾನ್ಯ ಮುಖ್ಯಮಂತ್ರಿಗಳು. ಮಾನ್ಯ ಕೃಷಿ ಸಚಿವರೇ, ನೀವು ಏನು ಪ್ಯಾಕೇಜ್ ಕೊಟ್ಟಿದ್ದೀರಿ? ಕೃಷಿ ಸಚಿವರೇ ದಯಮಾಡಿ ಕುಳಿತುಕೊಳ್ಳಿ ಏಕೆಂದರೆ ಕೃಷಿ ಸಚಿವರು ಬಂದ ನಂತರವೇ ಬರಗಾಲ ಬಂದಿರುವುದು ಅದಕ್ಕೂ ಮುಂಚೆ ಬರಗಾಲವಿರಲಿಲ್ಲ. ಆಡಳಿತ ಪಕ್ಷದವರು ಹೇಳುವಾಗ ನಾವು ಸುಮ್ಮನಿರಲಿಲ್ಲವೇ? ಉದಾಹರಣೆಗೆ ಹೇಳುವುದಾದರೆ ಮಾನ್ಯ ಬಸವರಾಜ ಬೊಮ್ಮಾಯಿಯವರು ಎಷ್ಟು ಕಷ್ಟ ಪಟ್ಟು ಕೆಲಸ ಮಾಡಿಸಿದರೂ ಕೂಡ

ಡ್ಯಾಮ್‌ಗಳು ತುಂಬುತ್ತಿಲ್ಲ. ಈ ರೀತಿಯ ಪರಿಸ್ಥಿತಿಯಾಗಿದೆ. ಆದಕಾರಣ ಮಾನ್ಯ ಕೃಷಿ ಮಂತ್ರಿಗಳು ತಾಳ್ಮೆಯಿಂದ ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ಉಮೇಶ್ ವಿ. ಕತ್ತಿ : ಕೃಷಿ ಮಂತ್ರಿ ಬಂದರೆ, ಬೀಜ, ಗೊಬ್ಬರ ಕೊಡಬಹುದು ...

ಅಧ್ಯಕ್ಷರು : ಮಾತನಾಡಿ, ಇಲ್ಲದಿದ್ದರೆ ಮುಗಿಸೋಣ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಕಂದಾಯ ಸಚಿವರು ಉತ್ತರ ನೀಡುವಾಗ ನಾವು ತಾಳ್ಮೆಯಿಂದ ಕುಳಿತುಕೊಂಡಿದ್ದೇವೆ. ಮೂರು ವರ್ಷ ಆರು ತಿಂಗಳುನಿಂದ ರಾಜ್ಯದಲ್ಲಿ ಬರಗಾಲ. ಬೆಳೆ ನಷ್ಟವಾಗಿದೆ. ಕೆಲವು ಕಡೆ ಸಂಪೂರ್ಣವಾಗಿ ಕಂಡರಿಯದ ಬೆಳೆ ನಾಶವಾಗಿ ಅಂತಹ ಕಡೆಗಳಲ್ಲಿ ಪರಿಹಾರ ಕೊಡಿ. ಆ ಭಾಗಕ್ಕಾದರೂ ಸಾಲ ಮನ್ನಾ ಮಾಡಿ ಎಂದು ಹೇಳಿದ್ದೆವು. ನನ್ನ ಕ್ಷೇತ್ರದ ಆಲೂಗಡ್ಡೆ ಬೆಳೆ ಹಾಳು ಬಿದ್ದು ಹೋಗಲಿ, ಉತ್ತರ ಕರ್ನಾಟಕ ಭಾಗದ ಸುಮಾರು ರೈತರು ಲಕ್ಷಾಂತರ ಬೆಳೆಗಳನ್ನು ನಷ್ಟ ಮಾಡಿಕೊಂಡಿದ್ದಾರೆ. ಮೊದಲು ಅವರ ಸಾಲ ಮನ್ನಾ ಮಾಡಿ ಎಂದು ಹೇಳಿದೆವು. ಮಾನ್ಯ ಬಿ.ಎಸ್. ಯಡಿಯೂರಪ್ಪನವರು ಮಾಡಿದ್ದಾರೆಯೇ? ನಾನೇನು ನೋಟ್ ಪ್ರಿಂಟ್ ಮಾಡುವ ಮಿಷನ್ ಇಟ್ಟಿದ್ದೇನೆಯೇ ಎಂದು ಹೇಳಿದರು.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಇರುವುದನ್ನು ಇದ್ದ ಹಾಗೆ ಹೇಳುತ್ತಿದ್ದೇನೆ ಮೇಡಂ.

(ಗೊಂದಲ)

ಶ್ರೀ ಉಮೇಶ್ ವಿ. ಕತ್ತಿ : ಸಾಲ ಮನ್ನಾ ಮಾಡಿದ್ದೇವೆಯೋ ಇಲ್ಲವೋ ಹೇಳಿ?

(ಗೊಂದಲ)

ಅಧ್ಯಕ್ಷರು : Clarification ಮಾತ್ರ ಕೇಳಿ.

ಶ್ರೀ ಕೆ.ಎಸ್. ಈಶ್ವರಪ್ಪ : ಆವತ್ತು ಹೇಳಿದ್ದು ಮಾನ್ಯ ಹೆಚ್.ಡಿ. ದೇವೇಗೌಡರು. ಶ್ರೀ ಬಿ.ಎಸ್. ಯಡಿಯೂರಪ್ಪ ನವರು ಸಾಲ ಮನ್ನಾ

ಮಾಡಿರುವುದಕ್ಕೆ ಇವರಿಗೆ ಸಮಾಧಾನವಿಲ್ಲ. ಈಗ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಜಗದೀಶ್ ಶೆಟ್ಟರ್ ರವರು ಮಾಡಿರುವುದಕ್ಕೂ ಸಮಾಧಾನವಿಲ್ಲ. ಸ್ವಾಗತ ಕೋರುವುದನ್ನು ಬಿಟ್ಟು ಮತ್ತೆ ಹಳೇ ಕಾಲಕ್ಕೆ ಹೋಗುತ್ತಿದ್ದಾರೆ. ಬರಗಾಲ ಬಂದು ಸಾಯುತ್ತಿರುವುದು ಈಗ, ಹಳೇ ಕಾಲದ ರಾಜಕಾರಣ ಮಾಡುತ್ತಿದ್ದೀರಿ. ಇದನ್ನು ದೇವರು ಮೆಚ್ಚುತ್ತಾನೆಯೇ?

ಅಧ್ಯಕ್ಷರು : ಇದನ್ನು ಮುಗಿಸಿ clarification ಮಾತ್ರ ಕೇಳಿ. ಇದು clarification ಆಗುವುದಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ : ರಾಜಕೀಯ ಮಾಡುವುದಕ್ಕೆ ಹೊರಟಿದ್ದಾರೆಂದು ಅವರು ಹೇಳುತ್ತಿದ್ದಾರೆ. ಇನ್ನು ಉಳಿದ 8 ತಿಂಗಳಿನಲ್ಲಿ ಇವರು 4 ವರ್ಷದಿಂದ ಏನು ಕೊಳೆ ಮಾಡಿದ್ದಾರೆಯೋ, ಆ ಕೊಳೆಯನ್ನು ಸಂಪೂರ್ಣವಾಗಿ ತೊಳೆಯುವುದಕ್ಕಾಗಿ ಸಾಲ ಮನ್ನಾ ಮಾಡಿದ್ದಾರೆಯೇ ಹೊರತು, ತಾಕತ್ತಿದ್ದರೆ ಈಗ ಕಂಪ್ಲೀಟ್ ರೈತರ ಸಾಲ ಮನ್ನಾ ಮಾಡವುದಕ್ಕೆ ಹೇಳಿ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಈಗ ಸಾಲ ಮನ್ನಾ ಮಾಡಿರುವುದಕ್ಕೆ ಮಾನ್ಯ ದೇವೇಗೌಡರು ಹಾಗೂ ಕುಮಾರಸ್ವಾಮಿಯವರು ಕಾರಣ ಅಲ್ಲ ತಾನೇ ?

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಸಭೆಯಲ್ಲಿ ಮಾನ್ಯ ದೇವೇಗೌಡರು ಹಾಗೂ ಕುಮಾರಸ್ವಾಮಿಯವರು ಇದ್ದಿದ್ದರೆ ಹೇಳುತ್ತಿದ್ದರು, ಸಮರ್ಥಿಸಿಕೊಳ್ಳುತ್ತಿದ್ದರು.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ದೇವೇಗೌಡರು, ಯಡಿಯೂರಪ್ಪನವರು ಸ್ಟ್ಯಾಂಪ್ ಪ್ರಿಂಟ್ ಮಾಡುತ್ತಿದ್ದಾರೆಂದು ಇಲ್ಲಿಯವರೆಗೆ ನೀವೇ ಹೇಳುತ್ತಿದ್ದೀರಿ. ಈ ಸರ್ಕಾರವು ರೈತರ ಮೇಲೆ ಇದ್ದಂತಹ ಮೂರುವರೆ ಸಾವಿರ ಕೋಟಿ ರೂ.ಗಳನ್ನು ಸಾಲ ಮನ್ನಾ

ಮಾಡಿದೆ. ಅದನ್ನು ಸ್ವಾಗತ ಮಾಡಿ ಹಳೇ ರಾಜಕಾರಣಕ್ಕೆ ಹೋಗಬೇಡಿ. ನೀವು ಕೇಳುವ ಯಾವುದೇ ಪ್ರಶ್ನೆಗೂ ಉತ್ತರ ಕೊಡುವುದಕ್ಕೆ ಸಿದ್ಧವಿದ್ದೇವೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯೂಡಿಯೂರಪ್ಪನವರು ಏನೋ ಮಾತನಾಡುತ್ತಿದ್ದಾರೆ. ಮೊದಲು ಅವರು ಮಾತನಾಡಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಉತ್ತರ ಕೊಡುತ್ತೇನೆ. ಶ್ರೀ ರೇವಣ್ಣ ಅವರೆ, ಒಂದೇ ಒಂದು ಅಂಶವನ್ನು ನೀವು ಪದೇ ಪದೇ ಹೇಳುತ್ತಿರುತ್ತೀರಿ. ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿ ಹಾಗೂ ನಾನು ಉಪಮುಖ್ಯಮಂತ್ರಿ ಮತ್ತು ಹಣಕಾಸು ಸಚಿವನಾಗಿದ್ದ ಸಂದರ್ಭದಲ್ಲಿ ರೈತರ ಸಾಲ ಮನ್ನಾ ಮಾಡಿದ್ದೇವೆ. ಹಾಸನದ ಒಂದು ಕಾರ್ಯಕ್ರಮದಲ್ಲಿ ಎಡಗಡೆ ನೀವು ಹಾಗೂ ಬಲಗಡೆ ಮಾನ್ಯ ಕುಮಾರಸ್ವಾಮಿಯವರು, ಮಧ್ಯದಲ್ಲಿ ದೇವೇಗೌಡರು ಹಾಗೂ ಸಿದ್ಧಗಂಗಾ ಶ್ರೀಗಳು ಆ ಕಾಯಕ್ರಮದಲ್ಲಿದ್ದರು. ನೀವೇ ಬಹಳ ಅದ್ಧೂರಿಯಾಗಿ ನನಗೂ ಸೇರಿದಂತೆ ಎಲ್ಲರಿಗೂ ಸನ್ಮಾನ ಮಾಡಿದಿರಿ. ಅಂದು ಮಾಜಿ ಪ್ರಧಾನ ಮಂತ್ರಿಗಳಾದ ಮಾನ್ಯ ದೇವೇಗೌಡರು, ರೈತರ ಸಾಲವನ್ನು ಶ್ರೀ ಯಡಿಯೂರಪ್ಪನವರು ಮನ್ನಾ ಮಾಡಿದ್ದಾರೆ. ಅದಕ್ಕೆ ದುಡ್ಡು ಎಲ್ಲಿಂದ ತರುತ್ತಾರೆಂದು ಹೇಳಿದರು. ಅದಕ್ಕೆ ನಾನು ಅಲ್ಲಿಯೇ ವಿರೋಧ ವ್ಯಕ್ತಪಡಿಸಿ, ಈ ಸಂಬಂಧವಾಗಿ ಹಾಸನದಲ್ಲಿ ಪ್ರೆಸ್ ಮೀಟ್ ಮಾಡಿ ನಾನು ಹಣಕಾಸು ಸಚಿವನಾಗಿದ್ದು, ರೈತರ ಸಾಲ ಮನ್ನಾ ಮಾಡುತ್ತೇನೆಂದು ಕಮಿಟ್‌ಮೆಂಟ್ ಮಾಡಿದ್ದೇನೆ. ಅದೇ ರೀತಿ ಮಾಡಿ ತೋರಿಸುತ್ತೇನೆಂದು ಹೇಳಿದೆ. ಇದಕ್ಕೆ ಸಿದ್ಧಗಂಗಾ ಶ್ರೀಗಳೇ ಸಾಕ್ಷಿಯಾಗಿದ್ದರು. ಇದನ್ನು ಯಡಿಯೂರಪ್ಪನವರು ವಿರೋಧ ಮಾಡಿದರೆಂದು ಹೇಳುವುದು ಧರ್ಮವೇ ಸ್ವಾಮಿ? ಸತ್ಯವನ್ನು ಸರಿಯಾಗಿ ಹೇಳದೇ ಏನೋ ತಿರುಚಿ ಹೇಳಿದರೆ ನಿಮಗೆ ನಾನು ಏನು ಹೇಳಬೇಕು.?

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಕುಮಾರಸ್ವಾಮಿಯವರು ಸಾಲ ಮನ್ನಾ ಮಾಡುವಾಗ ಅದಕ್ಕೆ ಏನು ವಿರೋಧ ಮಾಡಿದರೆಂಬುದನ್ನು ದೇವರೇ

ನೋಡಲಿ. ಮಾನ್ಯ ಕುಮಾರಸ್ವಾಮಿ ಎರಡೂವರೆ ಸಾವಿರ ಕೋಟಿ ರೂ.ಗಳ ಸಾಲ ಮನ್ನಾ ಮಾಡಿದರು. ಆದರ ಬದಲು ಬೇರೆ ಕೆಲಸಗಳನ್ನು ಮಾಡಬಹುದಾಗಿತ್ತು ಎಂದು ನನ್ನ ಹತ್ತಿರ ಹೇಳಿದ್ದರು. ಇದರಲ್ಲಿ ಸಂಪೂರ್ಣ ಚುನಾವಣೆ ಗಿಮಿಕ್ಸ್ ಇರುವುದರಿಂದ, ಈ ಸರ್ಕಾರದ 4 ವರ್ಷದಿಂದ ಏನು ಕೊಳೆ ಮಾಡಿದ್ದಾರೋ, ಅದನ್ನು ತೊಳೆಯುವುದಕ್ಕೋಸ್ಕರ ಮಾಡಿದ್ದಾರೆಯೇ ಹೊರತು ರೈತರ ಕಣ್ಣೀರು ಒರೆಸುವ ದೃಷ್ಟಿಯಿಂದಲ್ಲ. ಈ ಸರ್ಕಾರ ಅವರು ಮಾಡಿರುವಂತಹ 4 ವರ್ಷದ ಕೊಳೆಯನ್ನು ತೊಳೆಯುವುದಕ್ಕೋಸ್ಕರ ಈ ಸಾಲ ಮನ್ನಾ ಮಾಡಿದೆಯೇ ಹೊರತು, ಬೇರೇನೂ ಇಲ್ಲ. ಆದ ಕಾರಣ ಪ್ರತಿಭಟನೆ ಮಾಡುತ್ತಿದ್ದೇವೆ.

ಅಧ್ಯಕ್ಷರು : ಈಗ ಸದನವನ್ನು ನಾಳೆ ಬೆಳಿಗ್ಗೆ 10.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ರಾತ್ರಿ 8 ಗಂಟೆ 53 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 25.07.2012 ರಂದು ಬುಧವಾರ ಬೆಳಿಗ್ಗೆ 10.00 ಗಂಟೆಗೆ ಸೇರಲು ನಿಶ್ಚಯಿಸಿತು).

ಅನುಬಂಧ–2

ಕರ್ನಾಟಕ ವಿಧಾನ ಸಭಾ ಸದಸ್ಯರಾದ ಶ್ರೀ ಸಿದ್ದರಾಮಯ್ಯ ಹಾಗೂ ಇತರೆ ಶಾಸಕರು ನಿಯಮ 69 ರಡಿಯಲ್ಲಿ ಬರ–ಪರಿಹಾರಕ್ಕೆ ಸಂಬಂಧಿಸಿದಂತೆ ನಿಳುವಳಿ ಸೂಚನೆಯಲ್ಲಿ ಪ್ರಸ್ತಾಪಿಸಿರುವ ವಿಷಯದ ಬಗ್ಗೆ ಮಾನ್ಯ ಉಪ ಮುಖ್ಯ ಮಂತ್ರಿಗಳು ಹಾಗೂ ಕಂದಾಯ ಸಚಿವರ ಉತ್ತರ.

2011–12ರ ಸಾಲಿನಲ್ಲಿ ಸರ್ಕಾರವು 24 ಜಿಲ್ಲೆಗಳ 123 ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶಗಳೆಂದು ಘೋಷಿಸಿದೆ.

ಜೂನ್ 1 ರಿಂದ ಜುಲೈ 22ರ ಅವಧಿಗೆ ರಾಜ್ಯದಲ್ಲಿ ವಾಡಿಕೆ ಮಳೆ ಪ್ರಮಾಣವು 393 ಮಿ.ಮಿ. ಆಗಿದ್ದು ಪ್ರಸ್ತುತ ಅವಧಿಯಲ್ಲಿ 244 ಮಿ.ಮಿ. ಮಳೆಯಾಗಿದ್ದು ಶೇ. 38 ರಷ್ಟು ಕೊರತೆ ಕಂಡುಬಂದಿರುತ್ತದೆ. ರಾಜ್ಯದ 24 ಜಿಲ್ಲೆಗಳ 147 ತಾಲ್ಲೂಕುಗಳ 577 ಹೋಬಳಿಗಳಲ್ಲಿ ಸಾಧಾರಣದಿಂದ ತೀವ್ರ